ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)



ಆಸ್ಟ್ರಿಯಾದ ಛಾನ್ಸಲರ್ ಮೆಟರ್ನಿಕ್

**ಕೋರ್ಸ್ – 4** **ಬ್ಲಾಕ್ – 1**

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

Higher Education To Everyone Everywhere

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
**ಕೋರ್ಸ್ - 4**

# ಬ್ಲಾಕ್

# 1

ಪುಟ ಸಂಖ್ಯೆ

ಘಟಕ - 98
ಐತಿಹಾಸಿಕ ಹಿನ್ನೆಲೆ : 1815 ರಿಂದ 1871 ರ ನಡುವಣ ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರಿಯಾ ಮತ್ತು ರಷ್ಯ 1 - 24

ಘಟಕ - 99
ಪೌರ್ವಾತ್ಯ ಪ್ರಶ್ನೆ : 1871 ರವರೆಗಿನ ಬೆಳವಣಿಗೆಗಳು 25 - 40

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

*ವಿಷಯ ಸಂಯೋಜಕರು*

ಡಾ. ಮಾದೇಗೌಡ
ಪ್ರಾಧ್ಯಾಪಕರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು.

*ಸಂಪಾದಕರು*

## ಪಠ್ಯಕ್ರಮ ನಿರೂಪಕರು

1. *ಘಟಕ ಬರೆದವರು*
   **ಡಾ. ಶಿವಣ್ಣ**
   ಪ್ರಾಧ್ಯಾಪಕರು,
   ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
   ಮೈಸೂರು ವಿಶ್ವವಿದ್ಯಾನಿಲಯ,
   ಮಾನಸಗಂಗೋತ್ರಿ, ಮೈಸೂರು.

ಘಟಕಗಳು 98 ಮತ್ತು 99

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ. 2013

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅನುಮತಿ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಕೋರ್ಸ್ IV

## ಬ್ಲಾಕ್ - 1

### ಪೀಠಿಕೆ

ಒಂದನೆಯ ಬ್ಲಾಕ್ ಘಟಕ - 98 ಐತಿಹಾಸಿಕ ಹಿನ್ನೆಲೆ : ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರಿಯ ಮತ್ತು ರಷ್ಯ 1815 ರಿಂದ 1871 ರ ನಡುವೆ ಮತ್ತು ಘಟಕ - 99 ಪೌರ್ವಾತ್ಯ ಪ್ರಶ್ನೆ : 1871 ರವರೆಗಿನ ಬೆಳವಣಿಗೆಗಳು ಎಂಬ ಎರಡು ಘಟಕಗಳಿಂದ ಕೂಡಿದೆ.

98ನೇ ಘಟಕದಲ್ಲಿ ಇಂಗ್ಲೆಂಡಿನಲ್ಲಿ ಜಾರಿಗೆ ತಂದ ಆರ್ಥಿಕ, ಸಾಮಾಜಿಕ ಮತ್ತು ಸಂಸತ್ತಿಗೆ ಸಂಬಂಧಿಸಿದ ಸುಧಾರಣೆಗಳು ಹಾಗೂ ಯೂರೋಪಿನ ರಾಜಕೀಯದಲ್ಲಿ ಇಂಗ್ಲೆಂಡಿನ ಪಾತ್ರದ ಬಗ್ಗೆ ನಾವು ತಿಳಿದುಕೊಳ್ಳುತ್ತೇವೆ. ಅದೇ ರೀತಿ ಫ್ರಾನ್ಸಿನಲ್ಲಿ ಆಳ್ವಿಕೆ ನಡೆಸಿದ ಅನೇಕ ಚಕ್ರವರ್ತಿಗಳ, 1830 ಮತ್ತು 1848 ರ ಕ್ರಾಂತಿಗಳ ಹಾಗೂ ಯೂರೋಪಿನಲ್ಲಿ ಮೂರನೆಯ ನೆಪೋಲಿಯನ್ನನು ಭಾಗವಹಿಸಿದ ಯುದ್ಧಗಳ ಬಗ್ಗೆ ಅರ್ಥ ಮಾಡಿಕೊಳ್ಳುತ್ತೇವೆ. ಮುಂದುವರಿದು ಆಸ್ಟ್ರಿಯ ಮತ್ತು ಯೂರೋಪ್‌ನಲ್ಲಿ ಮೆಟರ್ನಿಕ್‌ನ ಪದ್ಧತಿಯ ಬಗ್ಗೆ ತಿಳಿದುಕೊಳ್ಳುತ್ತೇವೆ. ಅಂತಿಮವಾಗಿ ರಷ್ಯಾದಲ್ಲಿ ಝಾರ್ ದೊರೆಗಳ ನಿರಂಕುಶ ಪ್ರಭುತ್ವ, ಎರಡನೆಯ ಅಲೆಕ್ಸಾಂಡರನ ಸುಧಾರಣೆಗಳು ಹಾಗೂ ರಷ್ಯಾದ ವಿದೇಶಾಂಗ ನೀತಿಯ ಬಗ್ಗೆ ಈ ಘಟಕದಲ್ಲಿ ಅರ್ಥ ಮಾಡಿಕೊಳ್ಳುತ್ತೇವೆ.

99ನೇ ಘಟಕದಲ್ಲಿ ಪೌರ್ವಾತ್ಯ ಪ್ರಶ್ನೆಯ ಅರ್ಥ ಹಾಗೂ ಅದರಲ್ಲಿ ಪ್ರಬಲ ರಾಷ್ಟ್ರಗಳು ಹೊಂದಿದ್ದ ಹಿತಾಸಕ್ತಿಗಳ ಬಗ್ಗೆ ನಾವು ತಿಳಿದುಕೊಳ್ಳುತ್ತೇವೆ. ಇದರ ಜೊತೆಗೆ ತುರ್ಕಿಯ ಸುಲ್ತಾನನ ಆಳ್ವಿಕೆಯ ವಿರುದ್ಧ ದಂಗೆ ಎದ್ದ ಬಾಲ್ಕನ್ ರಾಜ್ಯಗಳ ಬಗ್ಗೆ ಅರ್ಥ ಮಾಡಿಕೊಳ್ಳುತ್ತೇವೆ. ಅಂತಿಮವಾಗಿ ಈ ಘಟಕದಲ್ಲಿ ಕ್ರಿಮಿಯಾ ಯುದ್ಧಕ್ಕೆ ಕಾರಣಗಳು, ಯುದ್ಧದ ಗತಿ ಮತ್ತು ಫಲಿತಾಂಶಗಳ ಬಗ್ಗೆ ನಾವು ತಿಳಿದುಕೊಳ್ಳುತ್ತೇವೆ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

## ಬ್ಲಾಕ್ - 1

## ಘಟಕ - 98 ಐತಿಹಾಸಿಕ ಹಿನ್ನೆಲೆ : 1815 ರಿಂದ 1871 ರ ನಡುವಣ ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರಿಯ ಮತ್ತು ರಷ್ಯ

ರಚನೆ


**98.0** ಉದ್ದೇಶಗಳು

**98.1** ಪೀಠಿಕೆ

**98.2** ಇಂಗ್ಲೆಂಡ್

**98.2.1** ನಾಲ್ಕನೆಯ ಜಾರ್ಜ್

**98.2.2** ನಾಲ್ಕನೆಯ ವಿಲಿಯಂ

**98.2.3** ವಿಕ್ಟೋರಿಯ ರಾಣಿ

**98.3** ಫ್ರಾನ್ಸ್

**98.3.1** ಹದಿನೆಂಟನೆಯ ಲೂಯಿ ಮತ್ತು 1814 ರ ಸನ್ನದು

**98.3.2** ಹತ್ತನೆಯ ಚಾರ್ಲ್ಸ್ ಮತ್ತು 1830 ರ ಕ್ರಾಂತಿ

**98.3.3** ಲೂಯಿ ಫಿಲಿಪ್ ಮತ್ತು 1848 ರ ಕ್ರಾಂತಿ

**98.3.4** ಎರಡನೆಯ ಗಣರಾಜ್ಯ

**98.3.5** ಎರಡನೆಯ ಸಾಮ್ರಾಜ್ಯ ಮತ್ತು ಮೂರನೆಯ ನೆಪೋಲಿಯನ್

**98.4** ಆಸ್ಟ್ರಿಯ

**98.4.1** ಒಂದನೆಯ ಫ್ರಾನ್ಸಿಸ್ ಮತ್ತು ಒಂದನೆಯ ಫರ್ಡಿನೆಂಡ್

**98.4.2** ಮೆಟರ್ನಿಕ್

**98.4.3** ಅಧಿವೇಶನಗಳು

**98.4.4** ಆಸ್ಟ್ರಿಯಾದ ಮೇಲೆ ಫ್ರಾನ್ಸಿನ 1848 ರ ಕ್ರಾಂತಿಯ ಪ್ರಭಾವ

**98.5** ರಷ್ಯ

**98.5.1** ಒಂದನೆಯ ಅಲೆಕ್ಸಾಂಡರ್

**98.5.2** ಒಂದನೆಯ ನಿಕೊಲಸ್

**98.5.3** ಎರಡನೆಯ ಅಲೆಕ್ಸಾಂಡರ್

**98.6** ಸಂಕ್ಷಿಪ್ತ ಅವಲೋಕನ

**98.7** ಕ್ಲಿಷ್ಟ ಪದಗಳ ಅರ್ಥ

**98.8** ಮಾದರಿ ಪ್ರಶ್ನೆಗಳು

**98.9** ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 98.9 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನೀವು ತಿಳಿದುಕೊಳ್ಳುವ ಅಂಶಗಳಂದರೆ :

- ಇಂಗ್ಲೆಂಡಿನಲ್ಲಿ ನಾಲ್ಕನೆಯ ಜಾರ್ಜ್, ನಾಲ್ಕನೆಯ ವಿಲಿಯಂ ಮತ್ತು ವಿಕ್ಟೋರಿಯ ರಾಣಿಯ ಆಳ್ವಿಕೆ
  - ಅವರು ಇಂಗ್ಲೆಂಡಿನಲ್ಲಿ ಜಾರಿಗೆ ತಂದ ಸುಧಾರಣೆಗಳು
  - ಯುರೋಪಿನ ಒಕ್ಕೂಟದಲ್ಲಿ ಇಂಗ್ಲೆಂಡ್ ನಿರ್ವಹಿಸಿದ ಪಾತ್ರ
  - ಪೌರ್ವಾತ್ಯ ಸಮಸ್ಯೆಯಲ್ಲಿ ಇಂಗ್ಲೆಂಡಿನ ಆಸಕ್ತಿ

- ಫ್ರಾನ್ಸಿನಲ್ಲಿ ಲೂಯಿ ಹದಿನೆಂಟನೆ ಮತ್ತು ಹತ್ತನೆಯ ಚಾರ್ಲ್ಸ್ ದೊರೆಗಳ ಆಳ್ವಿಕೆ
  - 1830 ಮತ್ತು 1848 ರ ಕ್ರಾಂತಿಗಳು
  - ಎರಡನೆಯ ಗಣರಾಜ್ಯ ನಿರ್ವಹಿಸಿದ ಕೆಲಸ
  - ಎರಡನೆಯ ಸಾಮ್ರಾಜ್ಯ ಸ್ಥಾಪನೆ ಮತ್ತು ಮೂರನೆಯ ನೆಪೋಲಿಯನ್ನನ ಆಳ್ವಿಕೆ

- ಆಸ್ಟ್ರಿಯಾದಲ್ಲಿ ಒಂದನೆಯ ಫ್ರಾನ್ಸಿಸ್ ಮತ್ತು ಒಂದನೆಯ ಫರ್ಡಿನೆಡ್ ಆಳ್ವಿಕೆಯ ಪರಿಚಯ
  - ಮೆಟರ್ನಿಕ್‌ನು ಆಸ್ಟ್ರಿಯ ಸಾಮ್ರಾಜ್ಯದಲ್ಲಿ ಕ್ರಾಂತಿಕಾರಿ ಚಟುವಟಿಕೆಗಳನ್ನು ನಿಯಂತ್ರಿಸಲು ಕೈಗೊಂಡ ಕ್ರಮಗಳು
  - ಮೆಟರ್ನಿಕ್‌ನು ತನ್ನ ಪದ್ಧತಿಯನ್ನು ಉಳಿದ ಯೂರೋಪಿನ ಇತರ ಭಾಗಗಳಲ್ಲೂ ಜಾರಿಗೆ ತರಲು ನಡೆಸಿದ ಪ್ರಯತ್ನ ಹಾಗೂ ಯೂರೋಪಿನಲ್ಲಿ ಶಕ್ತಿ ಸಮತೋಲನವನ್ನು ಕಾಪಾಡುವ ದೃಷ್ಟಿಯಿಂದ ನಡೆಸಿದ ಸಮ್ಮೇಳನಗಳು
  - 1848 ರ ಫ್ರಾನ್ಸಿನ ಮಹಾಕ್ರಾಂತಿಯ ನಂತರ ಆಸ್ಟ್ರಿಯ ಸಾಮ್ರಾಜ್ಯದಲ್ಲಿ ಉಂಟಾದ ಬದಲಾವಣೆಗಳು

- ರಷ್ಯಾದಲ್ಲಿ ಒಂದನೆಯ ಅಲೆಕ್ಸಾಂಡರ್, ಒಂದನೆಯ ನಿಕೊಲಸ್ ಮತ್ತು ಎರಡನೆಯ ಅಲೆಕ್ಸಾಂಡರ್‌ನ ಆಳ್ವಿಕೆ
  - ರಷ್ಯಾದಲ್ಲಿ ಇವರ ಆಳ್ವಿಕೆಯ ಕಾಲದಲ್ಲಿ ಜಾರಿಗೆ ತಂದ ಸುಧಾರಣೆಗಳು - ಗುಲಾಮಗಿರಿ ಪದ್ಧತಿಯ ನಿರ್ಮೂಲನ, ವಿದ್ಯಾಭ್ಯಾಸ, ಸ್ಥಳೀಯ ಸಂಸ್ಥೆಗಳು, ಸೈನ್ಯ ಮತ್ತು ನ್ಯಾಯಾಂಗಕ್ಕೆ ಸಂಬಂಧಿಸಿದ ಸುಧಾರಣೆಗಳು
  - ಯೂರೋಪಿನಲ್ಲಿ ಶಕ್ತಿ ಸಮತೋಲನವನ್ನು ಕಾಪಾಡುವುದರಲ್ಲಿ ರಷ್ಯಾದ ಪಾತ್ರ
  - ಪೌರ್ವಾತ್ಯ ಪ್ರಶ್ನೆಯಲ್ಲಿ ರಷ್ಯಾದ ಆಸಕ್ತಿ ಮತ್ತು ಕ್ರಿಮಿಯಾ ಯುದ್ಧ

## 98.1 ಪೀಠಿಕೆ

1815 ರ ವಿಯೆನ್ನಾ ಕಾಂಗ್ರೆಸ್‌ನ ನಂತರ ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರಿಯ ಮತ್ತು ರಷ್ಯ ಯೂರೋಪಿನ ರಾಜಕೀಯ ಜೀವನದಲ್ಲಿ 1871 ರವರೆಗೆ ಪ್ರಮುಖ ಪಾತ್ರ ವಹಿಸಿದವು.

1789 ರ ಫ್ರಾನ್ಸಿನ ಮಹಾ ಕ್ರಾಂತಿಯ ನಂತರ ಯೂರೋಪಿನ ಅನೇಕ ರಾಜ್ಯಗಳ ಜನರ ಜೀವನದಲ್ಲಿ ಬದಲಾವಣೆಗಳು ಉಂಟಾದವು. ಆದರೆ ಈ ಕ್ರಾಂತಿಯು ಇಂಗ್ಲೆಂಡ್ ಮೇಲೆ ಯಾವುದೇ ರೀತಿಯಾದ ಪ್ರಭಾವವನ್ನು ಬೀರಲಿಲ್ಲ. ಇಂಗ್ಲೆಂಡಿನಲ್ಲಿ 1815 ರ ನಂತರ ಸುಧಾರಣೆಗಳಿಗೋಸ್ಕರ ಒತ್ತಡ ಪ್ರಾರಂಭವಾಯಿತು. ಆದ್ದರಿಂದ ಇಂಗ್ಲೆಂಡ್ ಸಂವಿಧಾನಕ್ಕೆ ಸಂಬಂಧಿಸಿದಂತೆ ಹಾಗೂ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಸುಧಾರಣೆಗಳನ್ನು ಹೊರಡಿಸಬೇಕಾಯಿತು. ಇಂಗ್ಲೆಂಡ್ ಯೂರೋಪಿನ ಒಕ್ಕೂಟದ ಸದಸ್ಯನಾಗಿ 1815 ರ ನಂತರ ಯೂರೋಪಿನಲ್ಲಿ ನಡೆದ ಅನೇಕ ಘಟನೆಗಳಲ್ಲಿ ಭಾಗವಹಿಸಬೇಕಾಯಿತು. ಪೌರ್ವಾತ್ಯ ಸಮಸ್ಯೆಗೆ ಸಂಬಂಧಿಸಿದಂತೆ ರಷ್ಯಾವು ಬಾಲ್ಕನ್ ರಾಜ್ಯಗಳಲ್ಲಿ ಹಸ್ತಕ್ಷೇಪ ಮಾಡುವುದನ್ನು ತಡೆಗಟ್ಟಲು ಇಂಗ್ಲೆಂಡ್ ಪ್ರಯತ್ನಿಸಿತು.

1821 ರ ವೇಳೆಗೆ ಫ್ರಾನ್ಸ್ ಯುದ್ಧದ ಪರಿಹಾರ ಹಣವನ್ನು ಪೂರ್ತಿಯಾಗಿ ಸಂದಾಯ ಮಾಡಿತು. ಅನಂತರ ಯೂರೋಪಿನ ಒಕ್ಕೂಟದ ಸದಸ್ಯನನ್ನಾಗಿ ಸೇರಿಸಿಕೊಳ್ಳಲಾಯಿತು. ಜನರು ಸುಧಾರಣೆಗಳಿಗೋಸ್ಕರ ಹಾತೊರೆಯುತ್ತಿದ್ದ ಸಮಯದಲ್ಲಿ ಫ್ರಾನ್ಸಿನ ಚಕ್ರವರ್ತಿಗಳು ಪುನಃ ಪ್ರತಿಗಾಮಿ ಆಳ್ವಿಕೆಯತ್ತ ಗಮನಹರಿಸಿದರು. ಆದುದರಿಂದ ಪ್ರಜೆಗಳು ಮತ್ತು ಚಕ್ರವರ್ತಿಯ ನಡುವೆ ಉಂಟಾದ ಘರ್ಷಣೆಗಳು 1830 ಮತ್ತು 1848 ರ ಕ್ರಾಂತಿಗಳಿಗೆ ಕಾರಣವಾದವು. 1848ರ ಕ್ರಾಂತಿಯಿಂದಾಗಿ ಆಸ್ಟ್ರಿಯಾದಲ್ಲಿ ಮೆಟರ್ನಿಕ್‌ನ ಪತನವಾದ ನಂತರ, ಯೂರೋಪಿನಲ್ಲಿ ಮೂರನೇ ನೆಪೋಲಿಯನ್ನನು ಮುಂದಾಳತ್ವವನ್ನು ವಹಿಸಬೇಕಾಯಿತು.

1815 ರಿಂದ 1848 ರವರೆಗೆ ಆಸ್ಟ್ರಿಯ ಯೂರೋಪಿನಲ್ಲಿ ಒಂದು ಪ್ರಬಲ ರಾಜ್ಯವೆನಿಸಿಕೊಂಡಿತ್ತು. ಮೆಟರ್ನಿಕ್‌ನು ಪ್ರತಿಗಾಮಿ ಆಡಳಿತವನ್ನು ಆಸ್ಟ್ರಿಯಾದಲ್ಲಿ ಸ್ಥಾಪಿಸುವುದರ ಜೊತೆಗೆ ಯೂರೋಪಿನ ಇನ್ನಿತರ ರಾಜ್ಯಗಳಲ್ಲೂ ಸ್ಥಾಪಿಸಲು ಪ್ರಯತ್ನಿಸಿದನು. ಯೂರೋಪಿನ ಒಕ್ಕೂಟವನ್ನು ಸ್ಥಾಪಿಸಿ ಅದರಲ್ಲಿ ಪ್ರಮುಖ ಪಾತ್ರ ವಹಿಸಿದನು. ಆದರೆ 1848 ರ ಕ್ರಾಂತಿಯಿಂದಾಗಿ ಯೂರೋಪಿನಲ್ಲಿ ಅವನ ಪ್ರತಿಗಾಮಿ ಆಳ್ವಿಕೆ ಕೊನೆಗೊಳ್ಳಲು ಕಾರಣವಾಯಿತು.

ಯೂರೋಪಿನಲ್ಲಿ ಈ ಕಾಲದ ಮತ್ತೊಂದು ಪ್ರಮುಖ ರಾಜ್ಯವೆಂದರೆ ರಷ್ಯ. ಝಾರ್ ದೊರೆಗಳ ಆಳ್ವಿಕೆ ರಷ್ಯಾದಲ್ಲಿ ಇನ್ನೂ ಪ್ರಬಲವಾಗಿತ್ತು. ಯೂರೋಪಿನ ಇನ್ನಿತರ ಭಾಗಗಳಲ್ಲಿ ನಡೆದ ಕ್ರಾಂತಿಗಳು ಯಾವುದೇ ರೀತಿಯಾದ ಪ್ರಭಾವವನ್ನು ರಷ್ಯಾದ ಮೇಲೆ ಬೀರಲಿಲ್ಲ. ಆದರೆ ರಷ್ಯ ಹತ್ತೊಂಬತ್ತನೆಯ ಶತಮಾನದಲ್ಲಿ ಹಿಂದುಳಿದ ದೇಶವಾಗಿತ್ತು. ಝಾರ್ ದೊರೆಗಳು ತಮ್ಮ ನಿರಂಕುಶ ಪ್ರಭುತ್ವವನ್ನು ಮುಂದುವರಿಸಿದರು. ಆದಾಗ್ಯೂ ಎರಡನೆಯ ಅಲೆಕ್ಸಾಂಡರನು ಪರಿಸ್ಥಿತಿಗಳ ಒತ್ತಡದಿಂದಾಗಿ ಸುಧಾರಣೆಗಳನ್ನು ಹೊರಡಿಸಬೇಕಾಯಿತು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ರಷ್ಯ ಈ ಕಾಲದಲ್ಲಿ ಒಂದು ಪ್ರಮುಖ ಘಟನೆಯಾದ ಕ್ರಿಮಿಯಾ ಯುದ್ಧದಲ್ಲಿ ಭಾಗವಹಿಸಬೇಕಾಯಿತು.

## 98.2 ಇಂಗ್ಲೆಂಡ್

ಫ್ರಾನ್ಸಿನ ಕ್ರಾಂತಿಯ ಪ್ರಭಾವದಿಂದಾಗಿ ಸಾಮಾನ್ಯ ಜನ ಜೀವನದಲ್ಲಿ ಬದಲಾವಣೆಗಳು ಫ್ರಾನ್ಸ್, ಜರ್ಮನಿ ಮತ್ತು ಇಟಲಿಯಲ್ಲಿ ಉಂಟಾದವು. ಆದರೆ ಈ ಕ್ರಾಂತಿ ಗ್ರೇಟ್ ಬ್ರಿಟನ್ನಿನ ಮೇಲೆ ಯಾವುದೇ ರೀತಿಯಾದ ಪರಿಣಾಮ ಬೀರಲಿಲ್ಲ. ಅಧಿಕಾರ ಇನ್ನೂ ಸಂಪೂರ್ಣವಾಗಿ ಶ್ರೀಮಂತರ ಕೈಯಲ್ಲಿತ್ತು. ಚರ್ಚ್ ಕೂಡ ವಿಶೇಷ ಸವಲತ್ತುಗಳನ್ನು ಹೊಂದಿತ್ತು. ಎಲ್ಲ ದೊಡ್ಡ ಸಂಸ್ಥೆಗಳು ಶ್ರೀಮಂತರ ಹಿತಾಸಕ್ತಿಗಳಿಗೋಸ್ಕರ ಶ್ರೀಮಂತರ ಹಿಡಿತಕ್ಕೊಳಪಟ್ಟಿದ್ದವು. ಶಾಸನಗಳು

ಕೂಡ ಪ್ರಬಲ ಶ್ರೀಮಂತ ಭೂ ಒಡೆಯರ ಹಾಗೂ ಶ್ರೀಮಂತ ಕೈಗಾರಿಕೋದ್ಯಮಿಗಳ ಪರವಾಗಿದ್ದವು. ಆದರೆ ಹೆಚ್ಚಿನ ಸಂಖ್ಯೆಯಲ್ಲಿದ್ದ ಬಡವರ ಪರಿಸ್ಥಿತಿ ಶೋಚನೀಯವಾಗಿತ್ತು. ಆದುದರಿಂದಾಗಿ ಇಂಗ್ಲೆಂಡ್‌ನಲ್ಲಿ ಕ್ರಾಂತಿಕಾರಕ ಸುಧಾರಣೆಗಳ ಅವಶ್ಯಕತೆಯಿತ್ತು.

### *98.2.1 ನಾಲ್ಕನೆಯ ಜಾರ್ಜ್-1820-1830*

1820 ರಲ್ಲಿ ಮೂರನೆಯ ಜಾರ್ಜ್ ಎಂಬತ್ತೊಂದನೆಯ ವರ್ಷದಲ್ಲಿ ಮರಣ ಹೊಂದಿದನು. ಅನಂತರ ಅವನ ಮಗ ನಾಲ್ಕನೆಯ ಜಾರ್ಜನು ಇಂಗ್ಲೆಂಡಿನ ಸಿಂಹಾಸನವನ್ನಲಂಕರಿಸಿದನು. 1820 ರ ನಂತರ ರಾಜಕೀಯ ರಂಗದಲ್ಲಿ ನಿಧಾನವಾಗಿ ಬದಲಾವಣೆ ಪ್ರಾರಂಭಿಸಿತು. ಕ್ಯಾನಿಂಗ್ ವಿದೇಶಾಂಗ ಕಾರ್ಯದರ್ಶಿಯಾಗಿ ನೇಮಕಗೊಂಡ ಮೇಲೆ ಇಂಗ್ಲೆಂಡನ್ನು ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಯೂರೋಪಿನ ಒಕ್ಕೂಟದಿಂದ ಹೊರಬಂದು ಯೂರೋಪಿನ ಎಲ್ಲ ರಾಜಕೀಯ ಸಂಬಂಧಗಳಿಂದ ದೂರವಿರುವಂತೆ ಮಾಡಿದನು. 1823 ರಲ್ಲಿ ಸುಮಾರು ಒಂದು ನೂರು ಖೈದಿಗಳಿಗೆ ವಿಧಿಸಿದ್ದ ಮರಣದಂಡನೆಯನ್ನು ರದ್ದುಗೊಳಿಸಲಾಯಿತು. ಮತ್ತೊಂದು ಸುಧಾರಣೆ ಧಾರ್ಮಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದುದು. ಇಂಗ್ಲೆಂಡಿನ ಪ್ರಾಟೆಸ್ಟಂಟರ ತೊಂದರೆಗಳನ್ನು 1828 ರಲ್ಲಿ ನಿವಾರಿಸಲಾಯಿತು. ಮುಂದಿನ ವರ್ಷ ಕ್ಯಾಥೊಲಿಕ್ ವಿಮೋಚನಾ ಕಾಯಿದೆಯನ್ನು ಹೊರಡಿಸುವುದರ ಮೂಲಕ ಕ್ಯಾಥೊಲಿಕ್ಕರ ದೂರುಗಳನ್ನು ನಿವಾರಿಸಲಾಯಿತು. ಈ ಕಾಯಿದೆಯು ಕ್ಯಾಥೊಲಿಕ್ಕರು ಮತ್ತು ಪ್ರಾಟೆಸ್ಟಂಟರ ನಡುವೆ ಸಮಾನತೆಯನ್ನು ಸ್ಥಾಪಿಸಿತು. 1830 ರ ಜೂನ್ 26 ರಂದು ನಾಲ್ಕನೆ ಜಾರ್ಜನು ಮರಣ ಹೊಂದಿದನು. ಅವನ ಉತ್ತರಾಧಿಕಾರಿಯಾಗಿ ಅವನ ಸಹೋದರ ನಾಲ್ಕನೆ ವಿಲಿಯಂನು ರಾಜನಾದನು.

### *98.2.2 ನಾಲ್ಕನೆಯ ವಿಲಿಯಂ 1830-1837*

ನಾಲ್ಕನೆಯ ವಿಲಿಯಂನ ಆಳ್ವಿಕೆಯ ಕಾಲದಲ್ಲಿ ಸಂಸತ್ತಿಗೆ ಸಂಬಂಧಿಸಿದಂತೆ ಸುಧಾರಣೆಗಳನ್ನು ತರಬೇಕೆಂದು ಬೇಡಿಕೆ ಉಂಟಾಯಿತು. ಇದಕ್ಕೆ ಸಂಬಂಧಿಸಿದಂತೆ 1832 ರ ಜೂನ್ ನಾಲ್ಕರಂದು ಪಾರ್ಲಿಮೆಂಟ್ ಒಂದು ಮಸೂದೆಗೆ ಒಪ್ಪಿಗೆ ನೀಡಿತು. ಈ ಮಸೂದೆಯಿಂದಾಗಿ ಬರೋಗಳು ಮತ್ತು ಕೌಂಟಿಗಳಿಗೆ ಸಂಬಂಧಿಸಿದಂತೆ ಸೀಟುಗಳ ಮರು ಹೊಂದಾಣಿಕೆ ಮಾಡಲಾಯಿತು. ಸುಧಾರಿತ ಸಂಸತ್‌ನಿಂದ ಇನ್ನೂ ಅನೇಕ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಇವುಗಳಲ್ಲಿ ಪ್ರಮುಖವಾದದ್ದೆಂದರೆ 1833 ರಲ್ಲಿ ಗುಲಾಮಗಿರಿಯನ್ನು ರದ್ದುಪಡಿಸಲು ಹೊರಡಿಸಿದ ಮಸೂದೆ. ಈ ಮಸೂದೆಯ ಪ್ರಕಾರ 1834 ರ ಆಗಸ್ಟ್ ಒಂದರಿಂದ ಗ್ರೇಟ್ ಬ್ರಿಟನ್ನಿನಲ್ಲಿ ಗುಲಾಮಗಿರಿಯ ವ್ಯವಸ್ಥೆ ಕೊನೆಗೊಳ್ಳಬೇಕು. ಗುಲಾಮರನ್ನು ಹೊಂದಿದ್ದ ಒಡೆಯರಿಗೆ ಪರಿಹಾರವನ್ನು ನೀಡಲಾಯಿತು.

ಕಾರ್ಖಾನೆಗಳಲ್ಲಿ ಮಕ್ಕಳನ್ನು ಅನಾಗರೀಕ ರೀತಿಯಲ್ಲಿ ದುಡಿಸಿಕೊಳ್ಳುತ್ತಿದ್ದುದು ಸುಧಾರಕರ ಗಮನ ಸೆಳೆಯಿತು. ಆಧುನಿಕ ಕಾರ್ಖಾನೆಗಳ ಬೆಳವಣಿಗೆಯು ಮಕ್ಕಳನ್ನು ದುಡಿಯಲು ನೇಮಕ ಮಾಡಿಕೊಳ್ಳಲು ಕಾರಣವಾಯಿತು. ಮಕ್ಕಳಿಂದ ದುಡಿಸಿಕೊಳ್ಳುತ್ತಿದ್ದುದು ಹೆಚ್ಚು, ಆದರೆ ಅವರಿಗೆ ನೀಡುತ್ತಿದ್ದ ಕೂಲಿ ತುಂಬಾ ಕಡಿಮೆ. ಆದುದರಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ಕಾರ್ಖಾನೆಗಳಲ್ಲಿ ದುಡಿಯಲು ನೇಮಕ ಮಾಡಿಕೊಂಡಿದ್ದರು. ಆದರೆ ಇವರೆಲ್ಲರೂ ಕಡು ಬಡವರ ಮಕ್ಕಳು. ಮಕ್ಕಳು ದಿನಕ್ಕೆ 12 ರಿಂದ 14 ಗಂಟೆಗಳ ಕೆಲಸ ಮಾಡಬೇಕಾಗಿತ್ತು. ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ನಂಬಿದ್ದವರು ಮಕ್ಕಳನ್ನು ದುಡಿಸಿಕೊಳ್ಳುವಂತಹ ಕ್ರೂರ ವ್ಯವಸ್ಥೆಯನ್ನು ಕೊನೆಗಳಿಸಬೇಕೆಂದು ಸರ್ಕಾರದ ವಿರುದ್ಧ ಹೋರಾಟ ನಡೆಸಿದರು. ಇದರ ಪ್ರತಿಫಲವಾಗಿ 1833 ರಲ್ಲಿ ಫ್ಯಾಕ್ಟರಿ ಮಸೂದೆ ಜಾರಿಗೆ ಬಂತು. ಈ ಮಸೂದೆಯು 9 ವರ್ಷಗಳಿಗಿಂತ ಕಡಿಮೆ ಇರುವವರನ್ನು ಹತ್ತಿ ಗಿರಣಿಗಳಲ್ಲಿ ನೇಮಕ ಮಾಡಿಕೊಳ್ಳಬಾರದೆಂದು ನಿರ್ಬಂಧ ಹೇರಿತು. ಈ ಮಸೂದೆಯು ಇಡೀ ಕಾರ್ಮಿಕ ವರ್ಗದವರ ಬಗ್ಗೆ ಸರ್ಕಾರ ತೆಗೆದುಕೊಂಡ ಅನೇಕ ಸುಧಾರಣೆಗಳಲ್ಲಿ ಒಂದಾಗಿದೆ.

### *98.2.3 ವಿಕ್ಟೋರಿಯ ರಾಣಿ 1837-1901*

ನಾಲ್ಕನೆ ವಿಲಿಯಂ 1837 ರ ಜೂನ್ 20 ರಂದು ಮರಣವಾದನು. ಅನಂತರ ಅವನ ಸೋದರನ ಮಗಳಾದ ವಿಕ್ಟೋರಿಯ ಇಂಗ್ಲೆಂಡಿನ ರಾಣಿಯಾದಳು. ಕಿರಿಯ ವಯಸ್ಸಿನ ರಾಣಿಯು ಮೂರನೆಯ ಜಾರ್ಜ್‌ನ ಮಗನಾದ ಡ್ಯೂಕ್ ಆಫ್ ಕೆಂಟ್‌ನ ಮಗಳು. ಅವಳು ಪಟ್ಟಾಭಿಷಿಕ್ತಳಾದಾಗ ಅವಳಿಗೆ ಹದಿನೆಂಟು ವರ್ಷ. ಅವಳು ತನ್ನ ಸೋದರಮಾವನ ಮಗನಾದ ಸಾಕ್ಸೆ-ಕೊಬರ್ಗ್‌ನ ರಾಜಕುಮಾರ ಆಲ್ಬರ್ಟ್‌ನನ್ನು ವಿವಾಹವಾದಳು. ವಿಕ್ಟೋರಿಯ ರಾಣಿಯ ಕಾಲದಲ್ಲಿ ಇಂಗ್ಲೆಂಡಿನಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತರಲಾಯಿತು.

### *98.2.4 ಸುಧಾರಣೆಗಳು*

1832 ರ ಮಸೂದೆಯು ಮತ ಚಲಾಯಿಸುವ ಹಕ್ಕನ್ನು ಮಧ್ಯಮ ವರ್ಗದಲ್ಲಿನ ಮೇಲ್ವರ್ಗದವರಿಗೆ ಮಾತ್ರ ನೀಡಿತ್ತು. ಆದರೆ ದುಡಿಯುವ ವರ್ಗಕ್ಕೆ ಸರ್ಕಾರದಲ್ಲಿ ಪ್ರಾತಿನಿಧ್ಯ ದೊರಕಲಿಲ್ಲ. ತೀವ್ರ ಸುಧಾರಣಾವಾದಿಗಳು 1838 ರಲ್ಲಿ ಸಂಸತ್ತಿಗೆ ತಮ್ಮ ಬೇಡಿಕೆಗಳಿಗೆ ಸಂಬಂಧಿಸಿದಂತೆ "ಜನತಾ ಮಸೂದೆ" ಯನ್ನು ಲಿಖಿತ ರೂಪದಲ್ಲಿ ಸಲ್ಲಿಸಿದರು. ಈ ಜನರ ಸನ್ನಧಿನಲ್ಲಿ, ಪ್ರತಿಯೊಬ್ಬ ವಯಸ್ಕನಿಗೂ ಮತ ಚಲಾಯಿಸುವ ಹಕ್ಕನ್ನು ನೀಡಬೇಕು, ಮತ ಚಲಾವಣೆ ಗುಪ್ತವಾಗಿರಬೇಕು, ಇದುವರೆಗಿದ್ದ ಧ್ವನಿ ಮತದ ಬದಲು ಮತಚೀಟಿಯ ಮೂಲಕ ಮತ ಚಲಾಯಿಸಬೇಕು, ಆಸ್ತಿಯ ಅರ್ಹತೆಯನ್ನು ರದ್ದುಪಡಿಸಬೇಕು ಮತ್ತು ಸದಸ್ಯರಿಗೆ ಸಂಬಳ ನೀಡಬೇಕು ಎಂಬ ಬೇಡಿಕೆಗಳನ್ನು ಸಲ್ಲಿಸಿದರು. ಕೆಳ ಮನೆಯ ಅವಧಿ ಏಳು ವರ್ಷಗಳ ಬದಲು ಒಂದು ವರ್ಷವಾಗಿರಬೇಕು ಎಂದು ಕೂಡ ತಮ್ಮ ಮನವಿಯಲ್ಲಿ ತಿಳಿಸಿದರು.

ಆದರೆ ಚಾರ್ಟಿಸ್ಟರ ಈ ಬೇಡಿಕೆ ಸಂಸತ್ ಒಳಗಡೆ ಯಾವ ಪರಿಣಾಮವನ್ನು ಬೀರಲಿಲ್ಲ. ಯಾವ ಸಂಸತ್ ಸದಸ್ಯನು ಇದರ ಬಗ್ಗೆ ಚರ್ಚೆ ಮಾಡಲಿಲ್ಲ. ಆದುದರಿಂದ ಚಾರ್ಟಿಸ್ಟರು ಹೊರಗಡೆಯಿಂದ ತಮ್ಮ ಹೋರಾಟವನ್ನು ಪ್ರಾರಂಭಿಸಿದರು. ಇದನ್ನು ಚಾರ್ಟಿಸ್ಟ್ ಚಳವಳಿ ಎಂದು ಕರೆಯಲಾಗಿದೆ. ದುಡಿಯುವ ವರ್ಗದವರ ಸಂಘ ಸಂಸ್ಥೆಗಳ, ಪತ್ರಿಕೆಗಳ, ಹಾಡು ಮತ್ತು ಕವಿತೆಗಳನ್ನು ರಚಿಸುವುದರ ಮೂಲಕ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಮನವಿ ಪತ್ರಗಳನ್ನು ಸಲ್ಲಿಸುವುದರ ಮೂಲಕ ತಮ್ಮ ಚಳವಳಿಯನ್ನು ನಡೆಸಿದರು. ಆದರೆ ಈ ಚಳವಳಿಯು ಕೂಡ ಯಶಸ್ವಿಯಾಗಲಿಲ್ಲ, ನಿಧಾನವಾಗಿ ಈ ಚಳವಳಿಯು ನಿಂತುಹೊಯಿತು. ಚಾರ್ಟಿಸ್ಟ್‌ರ ಒಳ ಜಗಳ, ದೇಶದ ಸಂಪತ್ತು ವೃದ್ಧಿಯಾದುದರಿಂದ ಮತ್ತು ಮುಕ್ತ ವ್ಯಾಪಾರದ ಪರಿಣಾಮವಾಗಿ ಈ ಚಳವಳಿ ನಿಂತುಹೋಯಿತು. ತಕ್ಷಣವೇ ಈ ಚಳವಳಿ ಮಹತ್ವದ ಪರಿಣಾಮಗಳನ್ನು ಬೀರದೆ ಇದ್ದರೂ, ಕಾಲಾ ನಂತರ ಈ ಬೇಡಿಕೆಗಳನ್ನು ಸರ್ಕಾರ ಸಂಪೂರ್ಣವಾಗಿ ಈಡೇರಿಸಿತು.

ಚಾರ್ಟಿಸ್ಟ್ ಚಳವಳಿಯ ಜೊತೆಗೆ ಮತ್ತೊಂದು ಚಳವಳಿ ಮುಕ್ತ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಡೆಯುತ್ತಿತ್ತು. ಇಂಗ್ಲೆಂಡ್ ತನ್ನ ಆಹಾರ ಪದಾರ್ಥಗಳನ್ನು ಮತ್ತು ಕೈಗಾರಿಕಾ ಉತ್ಪನ್ನಗಳನ್ನು ವಿದೇಶಗಳ ಪದಾರ್ಥಗಳ ಹಾವಳಿಯಿಂದ ರಕ್ಷಿಸುವುದರ ಕಡೆ ಗಮನಹರಿಸಿತು. ಮುಖ್ಯವಾಗಿ ವ್ಯವಸಾಯ ಉತ್ಪತ್ತಿಗಳನ್ನು ರಕ್ಷಿಸುವುದಾಗಿತ್ತು. ಇಂಗ್ಲೆಂಡಿನಲ್ಲಿ ಗೋಧಿ ಮತ್ತು ಇತರ ಧಾನ್ಯಗಳನ್ನು ವಿವರಿಸುವುದಕ್ಕೆ 'ಕಾರ್ನ್' ಎಂಬ ಪದವನ್ನು ಬಳಸುತ್ತಿದ್ದರು. ಮುಖ್ಯವಾಗಿ ವಿದೇಶದಿಂದ ಆಮದಾಗುತ್ತಿದ್ದ 'ಕಾರ್ನ್' ಮೇಲೆ ಹೆಚ್ಚು ಸುಂಕವನ್ನು ವಿಧಿಸುವುದರ ಮೂಲಕ ತಮ್ಮ ವ್ಯವಸಾಯೋತ್ಪನ್ನನಗಳನ್ನು ರಕ್ಷಿಸುತ್ತಿದ್ದರು. ಆದರೆ ಮುಕ್ತ ವ್ಯಾಪಾರದ ಪ್ರತಿಪಾದಕರು ಈ ಕಾರ್ನ್ ಕಾನೂನುಗಳನ್ನು ವಿರೋಧಿಸಿದರು. ಕೈಗಾರಿಕೆಗಳ ಉತ್ಪನ್ನಗಳ ಉತ್ಪಾದಕರು ಮತ್ತು ವ್ಯಾಪಾರಿಗಳು ಮುಕ್ತ ವ್ಯಾಪಾರದ ಪರವಾಗಿದ್ದರು. ಅವರು ಈ ಸಮಯದಲ್ಲಿ ವಿಕಾಸಗೊಳ್ಳುತ್ತಿದ್ದ ಕೈಗಾರಿಕೆಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆಗಳನ್ನು ಹುಡುಕುತ್ತಿದ್ದರು. ವಿದೇಶಿ ವ್ಯಾಪಾರಿಗಳು ಈ

ಉತ್ಪನ್ನಗಳಿಗೆ ತಮ್ಮ ದೇಶದ ವಸ್ತುಗಳನ್ನು ಸರಬರಾಜು ಮಾಡುವುದರ ಮೂಲಕ ಪಾವತಿ ಮಾಡಲು ಇಷ್ಟಪಟ್ಟರು. ಅದರಲ್ಲೂ ಮುಖ್ಯವಾಗಿ ಇಂಗ್ಲೆಂಡಿನಿಂದ ಕೊಂಡುಕೊಂಡ ವಸ್ತುಗಳಿಗೆ ದವಸ ಧಾನ್ಯಗಳ ಮೂಲಕ ಪಾವತಿ ಮಾಡುವುದಾಗಿ ಹೇಳುತ್ತಿದ್ದರು. 1839 ರಲ್ಲಿ ಕಾರ್ನ್ ಲಾ ವಿರೋಧಿ ಒಕ್ಕೂಟವನ್ನು ಮ್ಯಾಂಚೆಸ್ಟರ್‌ನಲ್ಲಿ ಸ್ಥಾಪಿಸಿದರು. ಈ ಒಕ್ಕೂಟ ಕರ ಪತ್ರಗಳನ್ನು ಹಂಚುವುದರ ಮೂಲಕ ಮತ್ತು ಭಾಷಣಗಳ ಮೂಲಕ ಮುಕ್ತ ವ್ಯಾಪಾರದ ಬಗ್ಗೆ ಪ್ರತಿಪಾದಿಸಿದರು. ಈ ಎಲ್ಲಾ ಅಂಶಗಳಿಗಿಂತಲೂ ಮುಖ್ಯವಾಗಿ 1845 ರಲ್ಲಿ ಐರ್ಲೆಂಡಿನಲ್ಲಿ ಉಂಟಾದ ಕ್ಷಾಮವು "ಕಾರ್ನ್ ಲಾ" ರದ್ದತಿಗೆ ಮುಖ್ಯ ಕಾರಣವಾಯಿತು. ಐರ್ಲೆಂಡಿನ ಜನರ ಮುಖ್ಯ ಬೆಳೆ ಆಲೂಗೆಡ್ಡೆಯಾಗಿತ್ತು. ಆದರೆ ಆಲೂಗೆಡ್ಡೆಗೆ ರೋಗ ತಗುಲಿ ಪೂರ್ತಿಯಾಗಿ ಬೆಳೆ ನಾಶವಾಯಿತು. ಕ್ಷಾಮದಿಂದಾಗಿ ಹಸಿವಿನಿಂದ ನರಳಿ ಸಾವಿರಾರು ಜನರು ಅಸುನೀಗಿದರು. ಜನರನ್ನು ರಕ್ಷಿಸಲು ಸರ್ಕಾರಕ್ಕೆ ಉಳಿದಿದ್ದ ಒಂದೇ ಮಾರ್ಗವೆಂದರೆ ಕಾರ್ನ್‌ಲಾವನ್ನು ರದ್ದುಪಡಿಸಿ ಯೂರೋಪಿನಿಂದ ದವಸಧಾನ್ಯಗಳನ್ನು ಆಮದು ಮಾಡಿಕೊಳ್ಳುವುದಾಗಿತ್ತು. 1846 ರಲ್ಲಿ ಸಾರ್ವಜನಿಕರ ಒತ್ತಡದಿಂದಾಗಿ ಸರ್ ರಾಬರ್ಟ್ ಪೀಲ್ ಕಾರ್ನ್ ಕಾನೂನುಗಳನ್ನು ತೆಗೆದು ಹಾಕಿದನು. ಈ ರೀತಿಯಾಗಿ ಮುಕ್ತ ವ್ಯಾಪಾರಕ್ಕೆ ಅನುವು ಮಾಡಿಕೊಡಲಾಯಿತು.

1833 ರ ಕಾಯಿದೆಯು ಹತ್ತಿ ಗಿರಣಿಗಳಲ್ಲಿ ದುಡಿಯುತ್ತಿದ್ದ ಸ್ತ್ರೀಯರು ಮತ್ತು ಮಕ್ಕಳ ಕ್ಷೇಮಕ್ಕೋಸ್ಕರ ಹಲವು ನಿಯಮಗಳನ್ನು ರೂಪಿಸಿತ್ತು. ಆದರೆ ಇನ್ನೂ ಅನೇಕ ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದ ಕೆಲಸಗಾರರ ರಕ್ಷಣೆಗೋಸ್ಕರ ನಿಯಮಗಳ ಅವಶ್ಯಕತೆ ಇತ್ತು. ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಕೆಲಸಗಾರರ ಪರಿಸ್ಥಿತಿಗಳ ಬಗ್ಗೆ ಅಧ್ಯಯನ ಮಾಡಲು ಸರ್ಕಾರ ಒಂದು ಆಯೋಗವನ್ನು ರಚಿಸಿತು. 1842 ರಲ್ಲಿ ಈ ಆಯೋಗವು ತನ್ನ ವರದಿಯನ್ನು ಪ್ರಕಟಿಸಿತು. ಈ ವರದಿಯು 5, 6 ಮತ್ತು 7 ವರ್ಷಗಳ ಬಾಲಕ ಮತ್ತು ಬಾಲಕಿಯರು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದುದನ್ನು ಬಹಿರಂಗಗೊಳಿಸಿತು. ಸ್ತ್ರೀಯರು ಮತ್ತು ಪುರುಷರು ಆರೋಗ್ಯಕ್ಕೆ ಹಾನಿವುಂಟಾಗುವಂತಹ ಪರಿಸ್ಥಿತಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದುದನ್ನು ಮತ್ತು 12 ರಿಂದ 14 ಗಂಟೆಗಳ ಕಾಲ ದುಡಿಯುತ್ತಿದ್ದುದನ್ನು ವರದಿ ಪ್ರಕಟಿಸಿತು. 1842 ರಲ್ಲಿ ಇಂತಹ ಅಸಹ್ಯಕರ ಪರಿಸ್ಥಿತಿಗಳನ್ನು ತೊಡೆದು ಹಾಕಲು ಒಂದು ಮಸೂದೆಯನ್ನು ಹೊರಡಿಸಲಾಯಿತು. ಈ ಮಸೂದೆಯು ಸ್ತ್ರೀಯರು ಮತ್ತು ಬಾಲಕಿಯರು ಗಣಿಗಳಲ್ಲಿ ಕೆಲಸ ಮಾಡುವುದನ್ನು ನಿಷೇಧಿಸಿತು. ಹತ್ತು ವರ್ಷಗಳ ಬಾಲಕರು ವಾರದಲ್ಲಿ ಕೇವಲ ಮೂರು ದಿವಸ ಕೆಲಸ ಮಾಡಬಹುದೆಂದು ತಿಳಿಸಿತು.

ಮತ್ತೊಂದು ಸುಧಾರಣೆ ಹೆಚ್ಚು ಜನರಿಗೆ ಮತ ಹಾಕುವ ಹಕ್ಕನ್ನು ನೀಡಿದುದಕ್ಕೆ ಸಂಬಂಧಿಸಿದುದು. ಇದಕ್ಕೆ ಸಂಬಂಧಿಸಿದ 1867 ರ ಮಸೂದೆಯು ಮಧ್ಯಮ ವರ್ಗದ ಆಳ್ವಿಕೆಯನ್ನು ಕೊನೆಗಳಿಸಿ ಇಂಗ್ಲೆಂಡಿನಲ್ಲಿ ಪ್ರಜಾಪ್ರಭುತ್ವ ಸರ್ಕಾರ ರಚನೆಯನ್ನು ಸ್ಥಾಪಿಸಿತು. ಬರ್ರೋಗಳಲ್ಲಿ ಮನೆ ಇದ್ದವರೆಲ್ಲರಿಗೂ ಮತ ಚಲಾಯಿಸುವ ಹಕ್ಕನ್ನು ನೀಡಲಾಯಿತು. ಕೌಂಟಿಗಳಲ್ಲಿ ವರ್ಷಕ್ಕೆ ಐದು ಪೌಂಡು ಆದಾಯ ಬರತಕ್ಕ ಆಸ್ತಿ ಹೊಂದಿದ್ದವರೆಲ್ಲರಿಗೂ ಮತ ಚಲಾಯಿಸುವ ಹಕ್ಕನ್ನು ನೀಡಲಾಯಿತು. ಇದಕ್ಕಿಂತ ಮುಂಚೆ ಹತ್ತು ಪೌಂಡ್ ನಿಗಧಿಪಡಿಸಿದ್ದರು. ಈ ಮಸೂದೆಯಿಂದಾಗಿ ಹೆಚ್ಚಿನ ಜನರು ಮತ ಚಲಾಯಿಸುವ ಹಕ್ಕನ್ನು ಪಡೆದುಕೊಂಡರು. ಇವರ ಸಂಖ್ಯೆ ದ್ವಿಗುಣಗೊಂಡಿತು.

ಈ ಕಾಲದ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಯೂರೋಪಿನಲ್ಲಿ ನಡೆದ ಯಾವುದೇ ಪ್ರಮುಖ ಘಟನಾವಳಿಗಳಲ್ಲಿ ಇಂಗ್ಲೆಂಡ್ ಭಾಗವಹಿಸಲಿಲ್ಲ. ಆದರೆ ಏಷ್ಯ ಮತ್ತು ಆಫ್ರಿಕಾ ಖಂಡಗಳಲ್ಲಿ ಅನೇಕ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದರಲ್ಲಿ ಮಗ್ನವಾಗಿತ್ತು.

## 98.3 ಫ್ರಾನ್ಸ್

ಫ್ರಾನ್ಸಿನ ಮಹಾಕ್ರಾಂತಿಯ ನಂತರ ಸ್ಥಾಪಿತವಾಗಿದ್ದ ನೆಪೋಲಿಯನ್ನನ ಸಾಮ್ರಾಜ್ಯವು ಯೂರೋಪಿನ ನಾಲ್ಕು ರಾಷ್ಟ್ರಗಳ ಒಕ್ಕೂಟದಿಂದ 1814-1815 ರಲ್ಲಿ ಕೊನೆಗೊಂಡಿತು. ಗ್ರೇಟ್ ಬ್ರಿಟನ್, ರಷ್ಯ, ಪ್ರಷ್ಯ ಮತ್ತು ಆಸ್ಟ್ರಿಯ ಒಟ್ಟಿಗೆ ಸೇರಿ ನೆಪೋಲಿಯನ್ನನನ್ನು ಸೋಲಿಸಿದವು. ನೆಪೋಲಿಯನ್ನನ ಪತನಾ ನಂತರ ಯೂರೋಪಿನಲ್ಲಿ ಬಹಳ ದೀರ್ಘಕಾಲ ಶಾಂತಿ ನೆಲೆಸಿತ್ತು. 1854 ರಲ್ಲಿ ಕ್ರಿಮಿಯಾ ಯುದ್ಧ ಪ್ರಾರಂಭವಾಗುವವರೆಗೂ ಯಾವುದೇ ದೊಡ್ಡ ಯುದ್ಧ ನಡೆಯಲಿಲ್ಲ.

### *98.3.1 ಹದಿನೆಂಟನೆಯ ಲೂಯಿ ಮತ್ತು 1814 ರ ಸನ್ನದು*

ನೆಪೋಲಿಯನ್ನನ ಪರಾಭವದ ನಂತರ 1814 ರಲ್ಲಿ ಬೋರ್ಬನ್ ಮನೆತನದವರನ್ನು ಎರಡನೆಯ ಬಾರಿಗೆ ಫ್ರಾನ್ಸಿನ ಸಿಂಹಾಸನದ ಮೇಲೆ ಪ್ರತಿಸ್ಥಾಪಿಸಲಾಯಿತು. ಸಿಂಹಾಸನವನ್ನಲಂಕರಿಸಿದ ಹದಿನೆಂಟನೆಯ ಲೂಯಿಯು, ಹದಿನಾರನೆಯ ಲೂಯಿಯ ಸಹೋದರನಾಗಿದ್ದನು. ಹದಿನೆಂಟನೆಯ ಲೂಯಿಯು ಬಹಳ ಬುದ್ಧಿವಂತಿಕೆಯಿಂದ ಸಂವಿಧಾನದ ಸನ್ನದಿನ ಪ್ರಕಾರ ಶಾಸನ ಸಭೆಯಿಂದ ಕೂಡಿದ ಸರ್ಕಾರ ಒದಗಿಸಲು ನಿರ್ಧರಿಸಿದನು. ಈತನು ಪ್ರತಿಗಾಮಿ (ಪ್ರಗತಿ ವಿರೋಧಿ) ಸಂಪ್ರದಾಯಬದ್ಧ ಗುಂಪನ್ನು ತೃಪ್ತಿಪಡಿಸಲು ಪ್ರಯತ್ನಿಸಿದನು. ಕ್ರಾಂತಿಕಾರರ ತ್ರಿವರ್ಣ ಧ್ವಜದ ಬದಲು ಹಿಂದಿನ ರಾಜ ಮನೆತನದವರು ಹೊಂದಿದ್ದ ಲಿಲಿ ಹೂವುಗಳಿಂದ ಕೂಡಿದ್ದ ಬಿಳಿಯ ಬಾವುಟವನ್ನು ಈತನು ಸ್ವೀಕರಿಸಿದನು. ಅದೇ ಸಮಯದಲ್ಲಿ ಅವನು ಮಂದಗಾಮಿ ಸಂಪ್ರದಾಯಸ್ಥರನ್ನು ಮತ್ತು ಉದಾರವಾದಿಗಳನ್ನು ಒಂದನೆಯ ನೆಪೋಲಿಯನ್ನನು ಹೊರಡಿಸಿದ್ದ ಅನೇಕ ಸುಧಾರಣೆಗಳನ್ನು ಮುಂದುವರಿಸುವುದರ ಮೂಲಕ ತೃಪ್ತಿಪಡಿಸಿದನು.

ಹದಿನೆಂಟನೆಯ ಲೂಯಿಯು 1814 ರಲ್ಲಿ ಒಂದು ಸನ್ನದನ್ನು ಹೊರಡಿಸುವುದರ ಮೂಲಕ ಫ್ರಾನ್ಸ್ ಜನತೆಗೆ ಒಂದು ಸಂವಿಧಾನವನ್ನು ನೀಡಿದನು. ಈ ಸನ್ನದು ಎರಡು ಸದನಗಳಿಂದ ಕೂಡಿದ್ದ ಸಂಸತ್‌ನ್ನು ಸ್ಥಾಪಿಸಿತು. ಜೀವನ ಪರ್ಯಂತ ನೇಮಕಗೊಂಡ ಚೇಂಬರ್ ಆಫ್ ಪೀರ್ಸ್ ಮತ್ತು 5 ವರ್ಷಗಳವರೆಗೆ ಚುನಾಯಿಸಲ್ಪಟ್ಟ ಚೇಂಬರ್ ಆಫ್ ಡೆಪ್ಯೂಟೀಸ್ (ಕೆಳಮನೆ) ಆದರೆ 29,000,000 ಜನಸಂಖ್ಯೆಯಲ್ಲಿ ಕೇವಲ 100,000 ಮಂದಿ ಮಾತ್ರ ಮತ ಚಲಾಯಿಸುವ ಹಕ್ಕನ್ನು ಹೊಂದಿದ್ದರು. ಆದುದರಿಂದ ಅಲ್ಪಸಂಖ್ಯಾತರು ಮತ್ರ ಸರ್ಕಾರದಲ್ಲಿ ಭಾಗವಹಿಸುವ ಅಧಿಕಾರವನ್ನು ಹೊಂದಿದ್ದರು.

ಬೋರ್ಬನ್ ಮನೆತನದವರನ್ನು ಫ್ರಾನ್ಸ್‌ನ ಸಿಂಹಾಸನದ ಮೇಲೆ ಪುನರ್‌ಸ್ಥಾಪಿಸಿದುದರ ಪರಿಣಾಮವಾಗಿ ರಾಜಕೀಯ ಕಲಹ ಪ್ರಾರಂಭವಾಯಿತು. ಒಂದು ಕಡೆ ಫ್ರಾನ್ಸಿನ ಮಹಾಕ್ರಾಂತಿಯ ಶತ್ರುಗಳಾದ ಉಗ್ರ ರಾಜಪ್ರಭುತ್ವ ವಾದಿಗಳು ಹೆಚ್ಚುತ್ತಿರುವ ಉದಾರವಾದದ ಉತ್ಸಾಹವನ್ನು ಸಂಪೂರ್ಣವಾಗಿ ನಾಶಮಾಡಿ 1789 ರ ಕ್ರಾಂತಿಯ ಸಾಧನೆಗಳನ್ನು ನಾಶಗೊಳಿಸುವ ಗುರಿಯನ್ನು ಹೊಂದಿದ್ದರು. ಮತ್ತೊಂದು ಕಡೆ ಉಗ್ರ ರಾಜಪ್ರಭುತ್ವವಾದಿಗಳ ವಿರುದ್ಧ ನಿಂತಿದ್ದವರು ಮಂದಗಾಮಿ ಗುಂಪು. ಇವರು ಮಿತ್ರ ರಾಷ್ಟ್ರಗಳು ಫ್ರಾನ್ಸಿನ ಮೇಲೆ ಹೇರಿದ್ದ ರಾಜ ಮನೆತನದ ಆಳ್ವಿಕೆಯನ್ನು ಒಪ್ಪಿಕೊಂಡರು. ಮಂದಗಾಮಿಗಳು ಸನ್ನದಿನ ಪರವಾಗಿ ನಿಂತರು. ಉಗ್ರರಾಜಪ್ರಭುತ್ವ ವಾದಿಗಳು ರಾಜನ ಮೇಲೆ ಸನ್ನದನ್ನು ರದ್ದುಪಡಿಸುವಂತೆ ಒತ್ತಡ ತಂದರು. ಆದರೆ ಅವರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ವಿಫಲರಾದಾಗ ರಾಜಕೀಯ ಹಿಂಸಾಚಾರವನ್ನು ಪ್ರಚೋದಿಸಿದರು. ಇದು 1815ನೇಯ ವರ್ಷದಲ್ಲಿ ಹಲವು ತಿಂಗಳುಗಳ ಕಾಲ ರಾಜಕೀಯ ದೊಂಬಿ ಮತ್ತು ರಕ್ತಪಾತಕ್ಕೆ ಕಾರಣವಾಯಿತು. ನೂರಾರು ಉದಾರವಾದಿಗಳು ಪ್ರತಿಗಾಮಿ ಗುಂಪಿಗೆ ಬಲಿಯಾದರು. ಈ ದೊಂಬಿಯ ಕಾಲದ ಮಧ್ಯದಲ್ಲಿಯೇ ಚುನಾವಣೆಯನ್ನು ನಡೆಸಲಾಯಿತು. ಪುನಃ ಉಗ್ರ ರಾಜಪ್ರಭುತ್ವ ವಾದಿಗಳು ಬಹುಮತವನ್ನು ಗಳಿಸಿಕೊಂಡರು. ಹದಿನೆಂಟನೆಯ ಲೂಯಿಯು ಉಗ್ರ ರಾಜಪ್ರಭುತ್ವ ವಾದಿಗಳ ರೋಷದ ಪರಿಣಾಮಕ್ಕೆ ಭಯಪಟ್ಟನು. ಆದುದರಿಂದ ಚೇಂಬರ್

ಆಫ್ ಡೆಪ್ಯೂಟಿಸ್‌ನ್ನು ವಿಸರ್ಜಿಸಿ ಹೊಸ ಚುನಾವಣೆಗಳಿಗೆ ಆದೇಶ ಹೊರಡಿಸಿದನು. ಈ ಬಾರಿ ಮಂದಗಾಮಿ ಸಂಪ್ರದಾಯವಾದಿಗಳು ಬಹು ಸಂಖ್ಯೆಯಲ್ಲಿ ಚುನಾಯಿಸಲ್ಪಟ್ಟರು. ಅವರು ಸನ್ನದಿಗೆ ನಿಷ್ಠೆ ವ್ಯಕ್ತಪಡಿಸಿದರು ಮತ್ತು ರಾಜನ ಪ್ರಯತ್ನಗಳಿಗೆ ಸಹಾನುಭೂತಿ ವ್ಯಕ್ತಪಡಿಸಿದರು. 1816 ರಿಂದ 1820 ರವರೆಗೆ ಫ್ರಾನ್ಸಿನಲ್ಲಿ ನಡೆದ ಘಟನಾವಳಿಗಳು ಅವರ ಹತೋಟಿಗೊಳಪಟ್ಟಿದ್ದವು. ಅವರ ಆಳ್ವಿಕೆಯ ಕಾಲ ಸ್ಥಿರತೆಯಿಂದ ಕೂಡಿದ್ದ ಅಭಿವೃದ್ಧಿಯ ಕಾಲವಾಗಿತ್ತು.

1820 ರಲ್ಲಿ ರಾಜನ ಸೋದರಳಿಯನನ್ನು ಒಬ್ಬ ದುರಭಿಮಾನಿ ಉದಾರವಾದಿ ಕೊಲೆ ಮಾಡಿದುದರಿಂದ ಶಾಂತಿ ಮತ್ತು ಸುಧಾರಣೆಗಳಿಂದ ಕೂಡಿದ್ದ ವ್ಯವಸ್ಥೆಗೆ ಧಕ್ಕೆ ಉಂಟಾಯಿತು. ಈ ಘಟನೆಯಿಂದಾಗಿ ಉದಾರವಾದಿಗಳು ಸಾರ್ವಜನಿಕರ ಕೋಪಕ್ಕೆ ಗುರಿಯಾದರು. ಆದುದರಿಂದಾಗಿ ಪುನಃ ಉಗ್ರ ರಾಜಪ್ರಭುತ್ವ ವಾದಿಗಳು ಅಧಿಕಾರಕ್ಕೆ ಬರುವುದಕ್ಕೆ ಕಾರಣವಾಯಿತು. ಅವರು ದಮನ ಹಾಗೂ ಪ್ರಗತಿ ವಿರೋಧಿ ನೀತಿಯನ್ನು ಅನುಸರಿಸಿದರು.

1824 ರಲ್ಲಿ ಹದಿನೆಂಟನೆಯ ಲೂಯಿಯು ಮರಣ ಹೊಂದಿದಾಗ ಬೋರ್ಬನ್ ಮನೆತನ ಫ್ರಾನ್ಸಿನಲ್ಲಿ ಸುಭದ್ರವಾಗಿ ಸ್ಥಾಪಿಸಲ್ಪಟ್ಟಿತ್ತು.· ಸಂಪ್ರದಾಯಬದ್ಧ ಪ್ರತಿಗಾಮಿಗಳ ವಿರೋಧ ನೀತಿ ದಿನೇ ದಿನೇ ಹೆಚ್ಚಾಗಲು ಪ್ರಾರಂಭಿಸಿತ್ತು.

### *98.3.2 ಹತ್ತನೆಯ ಚಾರ್ಲ್ಸ್‌ನ ಆಳ್ವಿಕೆ (1824-1830) ಮತ್ತು 1830 ರ ಕ್ರಾಂತಿ*

ಹದಿನೆಂಟನೆಯ ಲೂಯಿಯ ಸಹೋದರ ಕೌಂಟ್ ಆಫ್ ಆರ್ಟಾಯಿಸ್‌ನನ್ನು ಹತ್ತನೆ ಚಾರ್ಲ್ಸ್ ಎಂಬ ಬಿರುದಿನಿಂದ ಫ್ರಾನ್ಸ್‌ನ ಸಿಂಹಾಸನಕ್ಕೆ ತರಲಾಯಿತು. ಅವನು ಬೋರ್ಬನ್ ಮನೆತನ ಪುನಃ ಅಧಿಕಾರಕ್ಕೆ ಬಂದ ದಿನಗಳಿಂದಲೂ ಫ್ರಾನ್ಸಿನ ಉಗ್ರ ರಾಜಪ್ರಭುತ್ವ ವಾದಿಗಳ ಗುಂಪಿನ ನಾಯಕನಾಗಿದ್ದನು. ಚೇಂಬರ್ ಆಫ್ ಡೆಪ್ಯೂಟೀಸ್‌ನಲ್ಲಿದ್ದಂತಹ ರಾಜಪ್ರಭುತ್ವ ವಾದಿಗಳ ಬಹು ಮತವನ್ನು ಉಪಯೋಗಿಸಿಕೊಂಡು ಅವನು ತನ್ನ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ತೀರ್ಮಾನಿಸಿದನು. ಪಾದ್ರಿಗಳ ಪರವಾಗಿದ್ದ ಅವನು ಚರ್ಚ್‌ಗೆ ಅನೇಕ ರೀತಿಯ ಸಹಾಯ ಮಾಡಿದನು. ಹತ್ತನೆಯ ಚಾರ್ಲ್ಸ್‌ನು ಚುನಾವಣೆಯಲ್ಲಿ ಮತ ಚಲಾಯಿಸಲು ಹೆಚ್ಚು ಆಸ್ತಿ ಹೊಂದಿರಬೇಕೆಂದು ನಿಗದಿಗೊಳಿಸಿದುದರಿಂದ ದುಡಿಯುವ ವರ್ಗ ಸರ್ಕಾರದಲ್ಲಿ ಭಾಗವಹಿಸುವ ಅವಕಾಶದಿಂದ ವಂಚಿತರಾದರು. ಪತ್ರಿಕೆಗಳ ಮೇಲೆ ಮತ್ತಷ್ಟು ನಿರ್ಬಂಧ ಹೇರಿದನು.

ಚಾರ್ಲ್ಸ್‌ನು ಪ್ರತಿಗಾಮಿ ನೀತಿಯಿಂದಾಗಿ ಬಹಳ ಬೇಗನೆ ಜನಪ್ರಿಯತೆಯನ್ನು ಕಳೆದುಕೊಂಡನು. 1827 ರಲ್ಲಿ ನಡೆದ ಚುನಾವಣೆಯಲ್ಲಿ ಸಂಸತ್‌ನಲ್ಲಿ ಬಹು ಮತವು ಉಗ್ರವಾದಿಗಳಿಂದ ಉದಾರ ವಾದಿಗಳ ಪಾಲಾಯಿತು. ಪಾರ್ಲಿಮೆಂಟ್ ವಿರೋಧ ವ್ಯಕ್ತಪಡಿಸಿದರೂ ಪೊಲಿಗ್‌ನಾಕ್‌ನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಿದನು. ಬಹಳ ಬೇಗನೆ ಪಾರ್ಲಿಮೆಂಟ್ ಮತ್ತು ಪೊಲಿಗ್‌ನಾಕ್ ನಡುವೆ ಘರ್ಷಣೆ ಪ್ರಾರಂಭವಾಯಿತು. ಸಂಸತ್ ಸದಸ್ಯರು ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರು. ಇದರಿಂದ ಕುಪಿತನಾದ ಚಾರ್ಲ್ಸ್‌ನು ಪಾರ್ಲಿಮೆಂಟನ್ನು 1830 ರ ವಸಂತ ಕಾಲದಲ್ಲಿ ವಿಸರ್ಜಿಸಿ ಹೊಸ ಚುನಾವಣೆಗೆ ಆದೇಶ ನೀಡಿದನು. ಆದರೆ ಈ ಚುನಾವಣೆಯಲ್ಲಿ ರಾಜನಿಗೆ ವಿರುದ್ಧವಾಗಿದ್ದ ಉದಾರವಾದಿಗಳು ಬಹುಮತವನ್ನು ಗಳಿಸಿಕೊಂಡರು.

ಇದಕ್ಕೆ ರಾಜನು 1830 ರ ಜುಲೈನಲ್ಲಿ ನಾಲ್ಕು ಆಜ್ಞೆಗಳನ್ನು ಹೊರಡಿಸುವದರ ಮೂಲಕ ಪ್ರತೀಕಾರ ತೆಗೆದುಕೊಂಡನು.

1. ಪತ್ರಿಕಾ ಸ್ವಾತಂತ್ರ್ಯದ ಮೇಲೆ ಕಠಿಣ ನಿರ್ಬಂಧ ಹೇರಿದನು.
2. ಹೊಸದಾಗಿ ಚುನಾಯಿಸಲ್ಪಟ್ಟ ಸಂಸತ್ ಸಮಾವೇಶಗೊಳ್ಳುವ ಮುನ್ನವೇ ಅದನ್ನು ವಿಸರ್ಜಿಸಿದನು.

3. ಹೊಸ ಚುನಾವಣಾ ಕಾನೂನನ್ನು ಹೊರಡಿಸಿ 3/4 ರಷ್ಟು ಮಂದಿ ಮತ ಚಲಾಯಿಸುವ ಹಕ್ಕನ್ನು ಕಳೆದುಕೊಳ್ಳುವಂತೆ ಮಾಡಿದನು.
4. ಹೊಸ ಚುನಾವಣೆಗಳನ್ನು ಸೆಪ್ಟೆಂಬರ್‌ನಲ್ಲಿ ನಡೆಸಬೇಕೆಂದು ನಿರ್ದೇಶಿಸಿದನು.

ಮೇಲೆ ವಿವರಿಸಿದ ಆಜ್ಞೆಗಳನ್ನು ಹೊರಡಿಸಿದುದರ ಫಲವಾಗಿ 1830 ರ ಜುಲೈ 28ರಂದು ಪ್ಯಾರಿಸ್‌ನಲ್ಲಿ ಕ್ರಾಂತಿ ಪ್ರಾರಂಭವಾಯಿತು. "ಮಂತ್ರಿ ಮಂಡಲಕ್ಕೆ ಧಿಕ್ಕಾರ" "ಸನ್ನದು ಚಿರಕಾಲ ಉಳಿಯಲಿ" ಎಂಬ ಘೋಷಣೆಗಳು ಮೊಳಗಿದವು. ಕ್ರಾಂತಿಯು ಮೂರು ದಿವಸಗಳ ಕಾಲ ನಡೆಯಿತು. ಅಂತಿಮವಾಗಿ 1830 ರ ಜುಲೈ 31 ರಂದು ಹತ್ತನೆಯ ಚಾರ್ಲ್ಸ್‌ನು ತನ್ನ ಹತ್ತು ವರ್ಷದ ಮೊಮ್ಮಗನ ಪರವಾಗಿ ಸಿಂಹಾಸನ ತ್ಯಜಿಸಿ ತನ್ನ ಕುಟುಂಬದೊಡನೆ ಇಂಗ್ಲೆಂಡಿಗೆ ಪಲಾಯನ ಮಾಡಿದನು. ಈ ರೀತಿಯಾಗಿ ಹೆಚ್ಚಿನ ರಕ್ತ ಪಾತವಿಲ್ಲದೆ 1830 ರ ಕ್ರಾಂತಿ ಕೊನೆಗೊಂಡಿತು. ಕ್ರಾಂತಿಯ ನಂತರ ರಿಪಬ್ಲಿಕ್ಕನ್ನರಿಂದ ಕೂಡಿದ್ದ ಹಂಗಾಮಿ ಸರ್ಕಾರ ಸ್ಥಾಪನೆಯಾದರೂ ಕೂಡ ರಾಜನ ಆಳ್ವಿಕೆ ಕೊನೆಗೊಳ್ಳಲಿಲ್ಲ. ಫ್ರಾನ್ಸಿನ ಕ್ರಾಂತಿಯ ಪ್ರಭಾವ ಯೂರೋಪಿನ ಅನೇಕ ರಾಜ್ಯಗಳ ಮೇಲೆ ಬೀರಿತು.

### *98.3.3 ಲೂಯಿ ಫಿಲಿಪ್ (1830-1848) ಮತ್ತು 1848 ರ ಕ್ರಾಂತಿ*

1830 ರ ಜುಲೈ ಕ್ರಾಂತಿಯ ನಂತರ ಫ್ರಾನ್ಸ್ ಹೊಸ ರಾಜಕೀಯ ವ್ಯವಸ್ಥೆಯನ್ನು ಆರಿಸಿಕೊಳ್ಳುವುದರಲ್ಲಿ ಸಮಸ್ಯೆಯನ್ನು ಎದುರಿಸಿತು. ರಿಪಬ್ಲಿಕನ್ನರು ಗಣರಾಜ್ಯ ಸ್ಥಾಪಿಸಲು ಆಸೆಪಟ್ಟರು. ಆದರೆ ಉದಾರವಾದಿಗಳು ಸಂವಿಧಾನಬದ್ಧ ರಾಜತ್ವವನ್ನು ಮುಂದುವರಿಸಲು ಇಚ್ಛಿಸಿದರು. ಶಸಸ್ತ್ರ ಹೋರಾಟ ತಪ್ಪಿಸಲು ರಿಪಬ್ಲಿಕನ್ನರು ಡ್ಯೂಕ್ ಆಫ್ ಆರ್ಲಿಯನ್ಸ್ ಲೂಯಿ ಫಿಲಿಪ್‌ನನ್ನು ಫ್ರಾನ್ಸಿನ ಸಿಂಹಾಸಾನದ ಮೇಲೆ ಸಂವಿಧಾನಬದ್ಧ ರಾಜನನ್ನಾಗಿ ಪ್ರತಿಸ್ಥಾಪಿಸಲು ಸಮ್ಮತಿಸಿದರು.

ಆದರೆ ಲೂಯಿ ಫಿಲಿಪನ ಆಳ್ವಿಕೆಗೆ ಬೆಂಬಲವಾಗಿ ನಿಂತವರು ಕೇವಲ ಕೆಲವೇ ಮಂದಿ. ಅವನು ಹೆಚ್ಚು ಜನರ ಬೆಂಬಲ ಪಡೆಯುವುದರಲ್ಲಿ ವಿಫಲನಾದನು. ಇದರ ಪರಿಣಾಮವಾಗಿ 1830 ರಿಂದ 1840 ರವರೆಗಿನ ಹತ್ತು ವರ್ಷಗಳ ಮಂತ್ರಿ ಮಂಡಲಗಳು ಸುಭದ್ರವಾಗಿರಲಿಲ್ಲ. ಈ ಹತ್ತು ವರ್ಷಗಳಲ್ಲಿ ಹತ್ತು ಮಂತ್ರಿ ಮಂಡಲಗಳು ರಚಿಸಲ್ಪಟ್ಟಿದ್ದವು. ಆದರೆ 1840 ರಿಂದ 1848 ರವರೆಗೆ ಮಂತ್ರಿ ಮಂಡಲ ಪ್ರಧಾನ ಮಂತ್ರಿ ಗೈಜಟ್‌ನ ನೇತೃತ್ವದಲ್ಲಿತ್ತು. ಆದರೆ ಅವನು ಫ್ರಾನ್ಸ್‌ನಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳನ್ನು ಹೊರಡಿಸುವುದರ ಪರವಾಗಿರಲಿಲ್ಲ. ಹೆಚ್ಚಿನ ಜನರಿಗೆ ಮತ ಚಲಾಯಿಸುವ ಹಕ್ಕನ್ನು ನೀಡುವುದಾಗಲಿ, ದುಡಿಯುವ ವರ್ಗಕ್ಕೆ ಸಂಬಂಧಿಸಿದಂತೆ ಯಾವುದೇ ಕ್ಷೇಮಾಭಿವೃದ್ಧಿ ಕಾನೂನುಗಳನ್ನು ಜಾರಿಗೆ ತರಲು ನಿರಾಕರಿಸಿದನು. ಫ್ರಾನ್ಸಿನ ಜನತೆ ಅವನ ವಿರೋಧಿ ನೀತಿಯಿಂದ ಜಿಗುಪ್ಸೆಗೊಂಡರು.

1848 ರ ವೇಳೆಗೆ ಪ್ರಧಾನ ಮಂತ್ರಿಯಾಗಿದ್ದ ಗೈಜಟ್ ಸರ್ವಾಧಿಕಾರಿಯಂತೆ ವರ್ತಿಸಲು ಪ್ರಾರಂಭಿಸಿದನು. ತಮ್ಮ ಬೇಡಿಕೆಗಳನ್ನು ಸಲ್ಲಿಸುವ ಎಲ್ಲ ಮಾರ್ಗಗಳು ಮುಚ್ಚಿದ ಮೇಲೆ ಸಮಾಜವಾದಿಗಳು ಮತ್ತು ರಿಪಬ್ಲಿಕನ್ನರು ಗುಪ್ತ ಸಂಘಗಳನ್ನು ಸ್ಥಾಪಿಸಿಕೊಂಡರು. ಹಲವು ದೊಂಬಿಗಳು ಉಂಟಾದವು. ಹತ್ತು ಬಾರಿ ಚಕ್ರವರ್ತಿಯನ್ನು ಕೊಲ್ಲಲು ಪ್ರಯತ್ನ ಮಾಡಲಾಯಿತು.

1847 ರಲ್ಲಿ ದೊಡ್ಡ ದೊಡ್ಡ ಸಭೆಗಳನ್ನು (banquets) ಏರ್ಪಡಿಸಿ ಅಲ್ಲಿ ತಮ್ಮ ಬೇಡಿಕೆಗಳ ಬಗ್ಗೆ ಚರ್ಚಿಸಿದರು. 1847 ರ ಜುಲೈ ಮತ್ತು ಡಿಸೆಂಬರ್ ನಡುವೆ ಇಂತಹ 70 ಸಭೆಗಳು ನಡೆದವು. ಸುಮಾರು 1,70,000 ಮಂದಿ ಭಾಗವಹಿಸಿದ್ದರು. ಇಂತಹ ಬೆಳವಣಿಗೆಯಿಂದ ಸರ್ಕಾರ ಹೆಚ್ಚು ಆತಂಕಕ್ಕೆ ಒಳಗಾಯಿತು. ಅದು 1848 ರ ಫೆಬ್ರವರಿ 22 ರಂದು ಏರ್ಪಡಿಸಿದ್ದ ಸಭೆಯನ್ನು ರದ್ದುಪಡಿಸಿತು. ಸರ್ಕಾರದ ಈ ನಿರ್ಧಾರವೇ 1848 ರ ಕ್ರಾಂತಿಗೆ ಕಾರಣವಾಯಿತು.

ಸರ್ಕಾರ ರದ್ದುಪಡಿಸಿದರೂ ನಿಗದಿಪಡಿಸಿದಂತೆ ಆ ದಿನ ವಿದ್ಯಾರ್ಥಿಗಳು ಮತ್ತು ಇನ್ನಿತರರು ಸಭೆ ಸೇರಿದರು. ಅಲ್ಲಿ ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಆದರೆ ಸಾಯಂಕಾಲ ಪ್ಯಾರಿಸ್ ನಗರದ ಬೀದಿ ಬೀದಿಗಳಲ್ಲಿ ತಡೆಗಟ್ಟುಗಳನ್ನೂ ನಿರ್ಮಿಸಲಾಯಿತು. ರಾಷ್ಟ್ರೀಯ ಪಡೆಗಳಿಗೆ ಈ ದೊಂಬಿಕಾರರನ್ನು ಸದೆಬಡಿದು ಶಾಂತಿ ಸ್ಥಾಪಿಸುವಂತೆ ಆಜ್ಞಾಪಿಸಲಾಯಿತು. ಆದರೆ ಅವರು ಕ್ರಾಂತಿಕಾರರಿಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದ ಚಕ್ರವರ್ತಿಯು ಗೈಜಟ್‌ನನ್ನು ವಜಾಮಾಡಿ ಅವನ ಸ್ಥಳದಲ್ಲಿ ಥಿಯರ್ಸ್‌ನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಿಸಿದನು. ಆದರೆ ಜನರು ಇದರಿಂದ ತೃಪ್ತಿಗೊಳ್ಳಲಿಲ್ಲ. ಅದೇ ದಿನ ಗೈಜಟ್ ಮನೆಯ ಮುಂದೆ ಅವರು ಸಭೆ ಸೇರಿದರು. ಈ ವೇಳೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಗುಂಡು ಹಾರಿಸಿದನು. ಆ ಗುಂಡು ನೇರವಾಗಿ ಮುಖ್ಯ ಸೇನಾಪತಿಗೆ ತಗುಲಿ ಅವನು ಮರಣವನ್ನಪ್ಪಿದನು. ಇದರಿಂದ ಕುಪಿತರಾದ ಸೈನಿಕರು ಜನರ ಮೇಲೆ ಯದ್ವಾ ತದ್ವಾ ಗುಂಡು ಹಾರಿಸಿದರು. ಇದರ ಪರಿಣಾಮವಾಗಿ 82 ಜನರು ಕೊಲ್ಲಲ್ಪಟ್ಟರು ಅನೇಕರು ಗಾಯಗೊಂಡರು. ಕ್ರಾಂತಿಕಾರರು ಈ ಶವಗಳನ್ನು ಬಂಡಿಗಳಲ್ಲಿ ತುಂಬಿಕೊಂಡು ನಗರದಲ್ಲಿ ಮೆರವಣಿಗೆ ಮಾಡಿದರು. ಪ್ರತೀಕಾರದ ಕೂಗು ಹಾಕಿದರು. ಮೂರನೆಯ ದಿನ ಪ್ಯಾರಿಸ್ ನಗರದ ಬೀದಿಗಳಲ್ಲಿ ಅಡ್ಡಗಟ್ಟುಗಳನ್ನು ನಿರ್ಮಿಸಲಾಯಿತು. ಎಲ್ಲಾ ಕಡೆಯು "ಹತ್ತನೆಯ ಚಾರ್ಲ್ಸ್ ರೀತಿಯೆ ಲೂಯಿ ಫಿಲಿಪ್ ನಮ್ಮನ್ನು ಕೊಲ್ಲುತ್ತಿದ್ದಾನೆ. ಅವನು ಕೂಡ ಹತ್ತನೆಯ ಚಾರ್ಲ್ಸ್ ಜೊತೆ ಸೇರಿಕೊಳ್ಳಲಿ" ಎಂಬ ಪ್ರಕಟಣೆಗಳನ್ನು ಬೀದಿಗಳಲ್ಲಿ ಅಂಟಿಸಲಾಯಿತು. ಜನರ ಆಕ್ರೋಶದ ವಿರುದ್ಧ ಹೋರಾಟ ನಡೆಸುವುದು ಅಸಾಧ್ಯವೆಂದು ಅರಿತ ಲೂಯಿ ಫಿಲಿಪ್ 1848 ರ ಫೆಬ್ರವರಿ ತಿಂಗಳಲ್ಲಿ ತನ್ನ ಮೊಮ್ಮಗನ ಪರವಾಗಿ ಸಿಂಹಾಸನ ತ್ಯಜಿಸಿ ವೇಷ ಮರೆಸಿಕೊಂಡು ಇಂಗ್ಲೆಂಡಿಗೆ ಪಲಾಯನ ಮಾಡಿದನು. ಹಲವು ನಾಯಕರುಗಳು ಒಂದು ಹಂಗಾಮಿ ಸರ್ಕಾರವನ್ನು ಸ್ಥಾಪಿಸಿ, ಫ್ರಾನ್ಸ್ ಒಂದು ಗಣರಾಜ್ಯವೆಂದು ಘೋಷಿಸಿದರು. ಈ ರೀತಿಯಾಗಿ ಫ್ರಾನ್ಸ್‌ನಲ್ಲಿ ಎರಡನೆಯ ಬಾರಿಗೆ ಗಣರಾಜ್ಯ ಸ್ಥಾಪನೆಗೊಂಡಿತು.

### *98.3.4 ಎರಡನೆಯ ಗಣರಾಜ್ಯ*

ಹಂಗಾಮಿ ಸರ್ಕಾರವು ರಾಷ್ಟ್ರೀಯ ಸಭೆಗೆ ಚುನಾವಣೆಯನ್ನು ಪ್ರಕಟಿಸಿತು. 21 ವರ್ಷ ವಯೋಮಿತಿಯುಳ್ಳ ಎಲ್ಲ ಫ್ರೆಂಚ್ ಪುರುಷರು ಮತ ಚಲಾಯಿಸುವ ಹಕ್ಕನ್ನು ಪಡೆದುಕೊಂಡರು. ಸಾರ್ವತ್ರಿಕ ಚುನಾವಣೆ 1848 ರ ಏಪ್ರಿಲ್ 23 ಮತ್ತು 24 ರಂದು ನಡೆಯಿತು. ಈ ಚುನಾವಣೆಯಲ್ಲಿ ಉದಾರವಾದಿಗಳು ಮತ್ತು ರಾಜತ್ವಾಭಿಮಾನಿಗಳು ಬಹು ಮತವನ್ನು ಗಳಿಸಿದರು. ಹಂಗಾಮಿ ಸರ್ಕಾರವು ಅಧಿಕಾರವನ್ನು ರಾಷ್ಟ್ರೀಯ ಸಭೆಗೆ ಹಸ್ತಾಂತರಿಸಿ ತನ್ನ ರಾಜೀನಾಮೆ ಸಲ್ಲಿಸಿತು. ಮೇ ತಿಂಗಳ ನಾಲ್ಕನೇ ತಾರೀಖಿನಂದು ರಾಷ್ಟ್ರೀಯ ಸಭೆಯು ಸಮಾವೇಶಗೊಂಡು ಸರ್ಕಾರದ ಕರ್ತವ್ಯಗಳನ್ನು ನಿರ್ವಹಿಸಲು ಒಂದು ಕಾರ್ಯಕಾರಿ ಸಮಿತಿಯನ್ನು ಚುನಾಯಿಸಿತು. 1848 ರಲ್ಲಿ ರಾಷ್ಟ್ರೀಯ ಸಭೆಯು ಹೊಸ ರಾಜ್ಯಾಂಗವನ್ನು ರಚಿಸಿತು. ಈ ರಾಜ್ಯಾಂಗವು ಏಕ ಸದನ ಶಾಸನ ಸಭೆ ಮತ್ತು ಒಂದೇ ಬಾರಿ ಅಧ್ಯಕ್ಷನಾಗಿ ಸೇವೆ ಸಲ್ಲಿಸುವ ವ್ಯವಸ್ಥೆಯನ್ನು ಜಾರಿಗೆ ತಂದಿತು. ರಾಷ್ಟ್ರೀಯ ಸಭೆಯ ಸದಸ್ಯರನ್ನು ಮತ್ತು ಅಧ್ಯಕ್ಷನನ್ನು ನೇರವಾಗಿ ಸಾರ್ವತ್ರಿಕ ಚುನಾವಣೆಯ ಮೂಲಕ ಚುನಾಯಿಸ ಬೇಕಾಗಿತ್ತು.

ಲೂಯಿ ನೆಪೋಲಿಯನ್ ಬೊನಪಾರ್ಟೆಯು ನೆಪೋಲಿಯನ್ ಮಹಾಶಯನ ಸೋದರನ ಮಗ. 1848 ರ ಕ್ರಾಂತಿ ಪ್ರಾರಂಭವಾದಾಗ ಲೂಯಿ ನೆಪೋಲಿಯನ್ ಲಂಡನ್ ನಗರದಲ್ಲಿದ್ದನು. ಕ್ರಾಂತಿ ವಿಷಯ ತಿಳಿದ ನಂತರ ಫ್ರಾನ್ಸ್‌ಗೆ ಹಿಂದಿರುಗಿದನು. ಅವನು ಅಧ್ಯಕ್ಷನಾಗಿ ನಾಲ್ಕು ವರ್ಷಗಳ ಅವಧಿಯ ಕೇವಲ ಒಂದು ಬಾರಿಗೆ ಮಾತ್ರ ಚುನಾಯಿಸಲ್ಪಟ್ಟನು. ಅಧ್ಯಕ್ಷನಾಗಿ ನಾಗರಿಕ ಮತ್ತು ಸೈನಿಕ ಅಧಿಕಾರ ಹೊಂದಿದ್ದನು. ಒಟ್ಟಿನಲ್ಲಿ ಸಂಪೂರ್ಣವಾಗಿ ಫ್ರಾನ್ಸಿನ ಆಡಳಿತ ಅವನ ಕೈಯಲ್ಲಿತ್ತು. ಅವನು ನಾಲ್ಕು ವರ್ಷಗಳ ಅವಧಿ ಮುಗಿದ ನಂತರವು ಅಧಿಕಾರದಲ್ಲಿ ಮುಂದುವರಿಯುವ ಯೋಜನೆ ಹೊಂದಿದ್ದನು.

### 98.3.5 ಎರಡನೆಯ ಸಾಮ್ರಾಜ್ಯ ಮತ್ತು ಮೂರನೆಯ ನೆಪೋಲಿಯನ್ (1852-1870)

1851 ರ ಡಿಸೆಂಬರ್ 1-2 ನೆಯ ತಾರೀಖಿನಂದು ಚಾಣಾಕ್ಷತನದಿಂದ ಯೋಜಿಸಿದ್ದ ಕ್ಷಿಪ್ರ ಕ್ರಾಂತಿಯನ್ನು ಲೂಯಿ ನೆಪೋಲಿಯನ್ ನಡೆಸಿದನು. 78 ಮಂದಿ ವಿರೋಧಿ ನಾಯಕರನ್ನು ಬಂಧಿಸುವಂತೆ ಆಜ್ಞಾಪಿಸಿದನು. ತಕ್ಷಣವೇ ಹತ್ತು ವರ್ಷಗಳ ಕಾಲ ಅಧ್ಯಕ್ಷನಾಗಿ ಮುಂದುವರಿಯಲು ಇಷ್ಟಪಟ್ಟಿರುವುದಾಗಿ ಪ್ರಕಟಿಸಿದನು. ಚುನಾವಣೆಯ ಮೂಲಕ ಜನರ ಸಮ್ಮತಿಯನ್ನು ಪಡೆದುಕೊಂಡನು. 1852 ರ ಡಿಸೆಂಬರ್ ಎರಡರಂದು ಅಧ್ಯಕ್ಷನು ಒಂದು ಘೋಷಣೆಯ ಮೂಲಕ 'ಮೂರನೆಯ ನೆಪೋಲಿಯನ್' ಎಂಬ ಬಿರುದು ಧರಿಸಿ ತಾನು ಫ್ರಾನ್ಸಿನ ಚಕ್ರವರ್ತಿ ಎಂದು ಸಾರಿದನು. ಅವನು ಹೊಸ ರಾಜ್ಯಾಂಗವನ್ನು ರಚಿಸಿದನು. ಚಕ್ರವರ್ತಿಯಲ್ಲೇ ರಾಜ್ಯದ ಅಧಿಕಾರ ಸಂಪೂರ್ಣವಾಗಿ ಕೇಂದ್ರಿಕೃತಗೊಂಡಿತು. ಒಳಾಡಳಿತ ಮತ್ತು ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಚಕ್ರವರ್ತಿಯದೇ ಅಂತಿಮ ತೀರ್ಮಾನ.

ಮೂರನೆಯ ನೆಪೋಲಿಯನ್ ಚಕ್ರವರ್ತಿ ಎಂದು ಘೋಷಿಸಿಕೊಂಡ ಎರಡು ವರ್ಷಗಳಲ್ಲೇ ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಒಂದು ಪ್ರಮುಖ ಘಟನೆ ನಡೆಯಿತು. ಅದೇ ಕ್ರಿಮಿಯಾ ಯುದ್ಧ (1854-1856). ಈ ಯುದ್ಧವು ತುರ್ಕಿ ಮತ್ತು ರಷ್ಯಾದ ನಡುವೆ ನಡೆಯಿತು. ತುರ್ಕಿಯ ಬೆಂಬಲಕ್ಕೆ ಫ್ರಾನ್ಸ್ ಮತ್ತು ಇತರ ರಾಷ್ಟ್ರಗಳು ಬಂದವು. ಆದರೆ ರಷ್ಯ ಏಕಾಂಗಿಯಾಗಿ ಹೋರಾಟ ನಡೆಸಿ ಸೋಲನ್ನನುಭವಿಸಿತು. ಪ್ಯಾರಿಸ್ ಒಪ್ಪಂದದ ಮೂಲಕ ಕ್ರಿಮಿಯಾ ಯುದ್ಧ ಕೊನೆಗೊಂಡಿತು.

ಮೆಕ್ಸಿಕೋದ ಆಂತರಿಕ ಯುದ್ಧದಲ್ಲೂ ಮೂರನೆಯ ನೆಪೋಲಿಯನ್ ಹಸ್ತಕ್ಷೇಪ ನಡೆಸಿದನು. ಅಲ್ಲಿ ಗಣರಾಜ್ಯವನ್ನು ತೊಡೆದು ಹಾಕಿ ಮ್ಯಾಕ್ಸಿಮಿಲಿಯನ್ ಎಂಬುವವನನ್ನು ಚಕ್ರವರ್ತಿಯನ್ನಾಗಿ ನೇಮಕ ಮಾಡಿದನು. ಅಮೇರಿಕ ಮೆಕ್ಸಿಕೋದಲ್ಲಿ ಫ್ರಾನ್ಸಿನ ನೀತಿಯನ್ನು ವಿರೋಧಿಸಿತು. ಆದುದರಿಂದ ತಕ್ಷಣವೇ ಫ್ರಾನ್ಸ್ ತನ್ನ ಸೈನ್ಯವನ್ನು ಮೆಕ್ಸಿಕೋದಿಂದ ಹಿಂದಕ್ಕೆ ಕರೆಯಿಸಿಕೊಳ್ಳಬೇಕಾಯಿತು. ಮ್ಯಾಕ್ಸಿ ಮಿಲಿಯನ್ ಅಧಿಕಾರದಲ್ಲಿ ಮುಂದುವರಿಯಲು ಸಾಧ್ಯವಾಗಲಿಲ್ಲ. ಅವನ ಶತ್ರುಗಳು ಅವನನ್ನು ಕೊಲೆ ಮಾಡಿದರು. ನೆಪೋಲಿಯನ್ನನ ಸಾಹಸ ಮೆಕ್ಸಿಕೋದಲ್ಲಿ ವಿಫಲವಾಯಿತು.

1866ರ ಆಸ್ಟ್ರೋ-ಪ್ರಷ್ಯನ್ ಯುದ್ಧದ ಸಮಯದಲ್ಲಿ ಮೂರನೆಯ ನೆಪೋಲಿಯನ್ ತಟಸ್ಥ ನೀತಿಯನ್ನನುಸರಿಸಿದನು. ಯುದ್ಧ ಪ್ರಾರಂಭವಾಗುವುದಕ್ಕೆ ಮುಂಚೆ ಬಿಸ್ಮಾರ್ಕನು ಫ್ರಾನ್ಸಿನ ಮೂರನೆಯ ನೆಪೋಲಿಯನ್ನನನ್ನು ಭೇಟಿ ಮಾಡಿ ಯುದ್ಧದ ಸಮಯದಲ್ಲಿ ತಟಸ್ಥ ನೀತಿಯನ್ನು ಅನುಸರಿಸುವಂತೆ ಕೇಳಿಕೊಂಡನು. ಇದಕ್ಕೆ ಬೆಲೆಯಾಗಿ ಮುಂದೆ ಫ್ರಾನ್ಸ್‌ಗೆ ಪರಿಹಾರ ನೀಡಲಾಗುವುದೆಂದು ಭರವಸೆ ನೀಡಿದನು. ನೆಪೋಲಿಯನ್ನನು ಇದನ್ನು ನಂಬಿದನು. ಇದರ ಪರಿಣಾಮವಾಗಿ ಆಸ್ಟ್ರಿಯ ಕೇವಲ ಏಳು ವಾರಗಳಲ್ಲಿ ಸೋಲನ್ನನುಭವಿಸಿತು. ತಟಸ್ಥ ನೀತಿಯನ್ನನುಸರಿಸುವುದರ ಮೂಲಕ ನೆಪೋಲಿಯನ್ನನು ಒಂದು ದೊಡ್ಡ ಪ್ರಮಾದ ವೆಸಗಿದಂತಾಯಿತು.

ಮೂರನೆಯ ನೆಪೋಲಿಯನ್ನನು ಮಾಡಿದ ಇಂತಹ ಪ್ರಮಾದಗಳು 1870-1871 ರಲ್ಲಿ ಫ್ರಾನ್ಸ್ ಮತ್ತು ಪ್ರಷ್ಯಾದ ನಡುವೆ ನಡೆದ ಯುದ್ಧದಲ್ಲಿ ಫ್ರಾನ್ಸ್‌ನ ಸೋಲಿಗೆ ಕಾರಣವಾದವು. ಈ ಎರಡು ರಾಜ್ಯಗಳ ಸಂಬಂಧವು ಸ್ಪೇಯಿನಿನ ಉತ್ತರಾಧಿಕಾರತ್ವಕ್ಕೆ ಸಂಬಂಧಿಸಿದಂತೆ ಹದಗೆಟ್ಟಿತು. 1870 ರಲ್ಲಿ ಫ್ರಾನ್ಸಿನ ಚಕ್ರವರ್ತಿ ಯುದ್ಧವನ್ನು ಘೋಷಿಸಿದನು. ಈ ವೇಳೆಗೆ ಯುದ್ಧವನ್ನು ನಿರೀಕ್ಷಿಸಿ ಸಿದ್ಧತೆ ಮಾಡಿಕೊಂಡಿದ್ದ ಪ್ರಷ್ಯಾದ ಸೈನಿಕರು ಫ್ರಾನ್ಸಿನ ಮೇಲೆ ದಾಳಿ ನಡೆಸಿದರು. ಅನೇಕ ಸ್ಥಳಗಳಲ್ಲಿ ಫ್ರೆಂಚ್ ಸೈನ್ಯ ಸೋಲನ್ನನುಭವಿಸಿತು. 1870 ರ ಸೆಪ್ಟೆಂಬರ್ ಎರಡರಂದು ಮೂರನೆಯ ನೆಪೋಲಿಯನ್ ತನ್ನ ಸೈನಿಕರೊಂದಿಗೆ ಪ್ರಷ್ಯಾದ ಸೈನ್ಯಕ್ಕೆ ಶರಣಾಗತನಾದನು. ಅಂತಿಮವಾಗಿ 1871ರ

ಜನವರಿ ತಿಂಗಳಲ್ಲಿ ಬಿಸ್ಮಾರ್ಕ್ ಪ್ಯಾರಿಸನ್ನು ವಶಪಡಿಸಿಕೊಂಡನು. ಆದುದರಿಂದಾಗಿ ಫ್ರಾನ್ಸ್ ಬಿಸ್ಮಾರ್ಕನ ಜೊತೆ 1871 ರ ಮೇ ತಿಂಗಳಲ್ಲಿ ಫ್ರಾಂಕ್ ಫರ್ಟ್ ಒಪ್ಪಂದವನ್ನು ಮಾಡಿಕೊಂಡಿತು. ಎರಡನೆಯ ಫ್ರಾನ್ಸಿನ ಸಾಮ್ರಾಜ್ಯ ಪತನವಾದ ನಂತರ ಮೂರನೆಯ ಗಣರಾಜ್ಯ ಸ್ಥಾಪಿತವಾಯಿತು. ಈ ರೀತಿಯಾಗಿ ಮೂರನೆಯ ನೆಪೋಲಿಯನ್ನನ ಆಳ್ವಿಕೆ ಕೊನೆಗೊಂಡಿತು.

## 98.4 ಆಸ್ಟ್ರಿಯ

1815 ರ ನಂತರ ಆಸ್ಟ್ರಿಯ ಸಾಮ್ರಾಜ್ಯ ಆಸ್ಟ್ರಿಯವನ್ನೊಳಗೊಂಡಂತೆ, ಬೊಹಿಮಿಯ, ಗೆಲಿಷಿಯ, ಹಂಗೇರಿ ರಾಜ್ಯ, ಡಾಲ್ಮೇಷಿಯನ್ ತೀರ ಪ್ರದೇಶದಲ್ಲಿದ್ದ ಇಲ್ಲಿರಿಯ ಮತ್ತು ಇಟಲಿಯ ಉತ್ತರದ ಪ್ರಾಂತ್ಯಗಳಾದ ಲೊಂಬಾರ್ಡಿ ಮತ್ತು ವೆನಿಷಿಯಾಗಳಿಂದ ಕೂಡಿತ್ತು. ಹಾಪ್ಸಬರ್ಗ್ ಸಾಮ್ರಾಜ್ಯದಲ್ಲಿ ನೆಲೆಸಿದ್ದ ಮೂವತ್ತು ಮಿಲಿಯನ್ ಜನರು ಅವರ ಕುಲದ ಮೂಲ, ಐತಿಹಾಸಿಕ ಹಿನ್ನೆಲೆ, ಭಾಷೆ ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಭಿನ್ನವಾಗಿದ್ದರು. ಆಸ್ಟ್ರಿಯ ಸಂಸ್ಥಾನಗಳಲ್ಲಿ (duchies) ಜರ್ಮನರು ಅಧಿಕ ಸಂಖ್ಯೆಯಲ್ಲಿದ್ದರು; ಆದರೆ ಬೊಹಿಮಿಯ ಜೆಕ್‌ರು ಮತ್ತು ಸ್ಲೊವಾಕ್ ರಿಂದ ಕೂಡಿತ್ತು; ಗೆಲೆಷಿಯದಲ್ಲಿ ಪೊಲ್‌ರು (polish) ಮತ್ತು ರುಥೇನಿಯನ್ನರು ನೆಲೆಸಿದ್ದರು; ಹಂಗೇರಿಯಾದಲ್ಲಿ ಮಗ್ಯಾರರಲ್ಲದೆ, ಕ್ರೋಟರು, ರುಥೇನಿಯನ್ನರು, ರುಮೇನಿಯನ್ನರು ಮತ್ತು ಸ್ಲೋವಕ್‌ರು ನೆಲೆಸಿದ್ದರು; ಲೊಂಬಾರ್ಡಿ ಮತ್ತು ವೆನಿಷಿಯಗಳಲ್ಲಿ ಇಟಲಿಯನ್ನರು ನೆಲೆಸಿದ್ದರು. ವಿವಿಧ ಜನಾಂಗಗಳಿಂದ ಕೂಡಿದ್ದ ಆಸ್ಟ್ರಿಯ ಸಾಮ್ರಾಜ್ಯದ ಜನರು ಯಾವುದೇ ಸರ್ವಸಮನಾದ ಲಕ್ಷಣಗಳನ್ನು ಹೊಂದಿರಲಿಲ್ಲ.

### *98.4.1 ಒಂದನೆಯ ಫ್ರಾನ್ಸಿಸ್ (1792-1835) ಮತ್ತು ಒಂದನೆಯ ಫರ್ಡಿನೆಂಡ್(1835-1848)*

ಒಂದನೆಯ ಫ್ರಾನ್ಸಿಸ್ ಮತ್ತು ಮೆಟರ್ನಿಕ್ಕನಿಗೆ ಆಸ್ಟ್ರಿಯ ಸಾಮ್ರಾಜ್ಯದಲ್ಲಿದ್ದ ವಿವಿಧ ಜನಾಂಗಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು ಹೇಗೆಂಬುದು ಮೊಟ್ಟ ಮೊದಲನೆ ಸಮಸ್ಯೆಯಾಗಿತ್ತು. ಸುಧಾರಣೆಗೆ ಸಂಬಂಧಿಸಿದ ಎಲ್ಲ ಬೇಡಿಕೆಗಳನ್ನು ತಡೆ ಹಿಡಿಯುವುದು ಅವರ ನೀತಿಯಾಗಿತ್ತು. ಸಾಮಾಜಿಕವಾಗಿ ಜನರು ಶ್ರೀಮಂತ ಮತ್ತು ಬಡವ ಎಂಬ ಎರಡು ವರ್ಗಗಳಾಗಿ ವಿಂಗಡಿಸಲ್ಪಟ್ಟಿದ್ದರು. ಶ್ರೀಮಂತರು ಎಲ್ಲ ಸೌಕರ್ಯಗಳನ್ನು ಹೊಂದಿದ್ದರು. ಹೆಚ್ಚಿನ ಭೂಮಿ ಅವರ ಒಡೆತನದಲ್ಲಿತ್ತು. ಮತ್ತೊಂದು ಕಡೆ ಹೆಚ್ಚಿನ ಸಂಖ್ಯೆಯಲ್ಲಿದ್ದ ಬಡವರ ಪರಿಸ್ಥಿತಿ ಶೋಚನೀಯವಾಗಿತ್ತು. 1815 ರಲ್ಲಿ ಇಂತಹ ಸಾಮಾಜಿಕ ವ್ಯವಸ್ಥೆಯನ್ನು ಆಸ್ಟ್ರಿಯದಲ್ಲಿ ಕಾಣಬಹುದಾಗಿದೆ.

ಒಂದನೆಯ ಫ್ರಾನ್ಸಿಸ್‌ನ ಕಾಲದಲ್ಲೇ ಆಸ್ಟ್ರಿಯ ನೆಪೋಲಿಯನ್ನನ ವಿರುದ್ಧ ಅನೇಕ ಯುದ್ಧಗಳನ್ನು ಕೈಗೊಂಡಿತ್ತು. ಅಂತಿಮವಾಗಿ ನೆಪೋಲಿಯನ್ನನ ಪತನದಲ್ಲಿ ಆಸ್ಟ್ರಿಯ ನಿರ್ಣಾಯಕ ಪಾತ್ರವನ್ನು ವಹಿಸಿತ್ತು. ನಂತರ ಒಂದು ಸಮ್ಮೇಳನ ಆಸ್ಟ್ರಿಯಾದ ರಾಜಧಾನಿ ವಿಯೆನ್ನಾದಲ್ಲಿ ನಡೆಯಿತು.

ಒಂದನೆಯ ಫ್ರಾನ್ಸಿಸ್‌ನ ಮರಣಾಂತರ ಒಂದನೆಯ ಫರ್ಡಿನೆಂಡ್ ಆಸ್ಟ್ರಿಯಾದ ಚಕ್ರವರ್ತಿಯಾದನು. ಅವನ ಆಳ್ವಿಕೆಯ ಕಾಲದಲ್ಲೂ ಮೆಟರ್ನಿಕ್ ಆಸ್ಟ್ರಿಯಾದ ಛಾನ್ಸಲರ್ ಆಗಿ ಮುಂದುವರಿದನು.

### *98.4.2 ಮೆಟರ್ನಿಕ್*

ಮೆಟರ್ನಿಕ್ಕನು ಆಸ್ಟ್ರಿಯಾದ ಛಾನ್ಸಲರ್ (ಪ್ರಧಾನ ಮಂತ್ರಿ) ಆಗಿ ನಲವತ್ತು ವರ್ಷಗಳ ಕಾಲ ಅಧಿಕಾರದಲ್ಲಿದ್ದನು (1809-1848). ಫ್ರಾನ್ಸಿಸ್‌ನ ಕೈಕೆಳಗೆ 1835 ರವರೆಗೆ ಮತ್ತು ಅವನ

ಉತ್ತರಾಧಿಕಾರಿ ಒಂದನೆಯ ಫರ್ಡಿನೆಂಡ್ ಕೈಕೆಳಗೆ 1835 ರಿಂದ 1848 ರವರೆಗೆ ಸೇವೆ ಸಲ್ಲಿಸಿದನು. ಈ ಅವಧಿಯಲ್ಲಿ ಆಸ್ಟ್ರಿಯಾದಲ್ಲಿ ಅವನು ಪರಮಾಧಿಕಾರವನ್ನು ಹೊಂದಿದ್ದನು. ಅದೇ ರೀತಿ ಯೂರೋಪಿನ ರಾಜಕೀಯ ಘಟನಾವಳಿಗಳಲ್ಲೂ ಸುಮಾರು ಮೂವತ್ತು ವರ್ಷಗಳ ಕಾಲ (1815-1848) ಈತನು ಬಹಳ ಮುಖ್ಯವಾದ ಪಾತ್ರವನ್ನು ವಹಿಸಿದ್ದನು. ಆದುದರಿಂದ ಈ ಕಾಲವನ್ನು ಯೂರೋಪಿನ ಇತಿಹಾಸದಲ್ಲಿ "ಮೆಟರ್ನಿಕ್‌ನಯುಗ" ಎಂದು ವರ್ಣಿಸಲಾಗಿದೆ. ಈತನು ಯೂರೋಪಿನಲ್ಲಿ ಉದಾರ ತತ್ವಗಳ ವಿರುದ್ಧ ಹೋರಾಟ ನಡೆಸಿ ರಾಜತ್ವದ ಹಿತಾಸಕ್ತಿಗಳನ್ನು ಕಾಪಾಡಲು ಪ್ರಾಮಾಣಿಕವಾದ ಹೋರಾಟ ನಡೆಸಿದನು.

ಮೆಟರ್ನಿಕ್‌ನ ಕಾಲದ ಆಳ್ವಿಕೆಯ ಮುಖ್ಯ ಉದ್ದೇಶವೇನೆಂದರೆ ಆಸ್ಟ್ರಿಯಾದಲ್ಲಿದ್ದಂತಹ ಪರಿಸ್ಥಿತಿಗಳ ಯಥಾಸ್ಥಿತಿ ಕಾಪಾಡುವುದಾಗಿತ್ತು. ಮೆಟರ್ನಿಕ್‌ನು ಇದರಲ್ಲಿ ಯಶಸ್ವಿಯಾದನು. ಮೆಟರ್ನಿಕ್‌ನ ಪದ್ಧತಿಯು ಅರಕ್ಷಕರು ಮಧ್ಯ ಪ್ರವೇಶಿಸುವ, ವಿಸ್ತಾರವಾದ ಬೇಹುಗಾರಿಕೆ ವ್ಯವಸ್ಥೆ, ಭಾವನೆಗಳ ಮೇಲೆ ನಿರ್ಬಂಧ, ನಾಟಕ ಮಂದಿರಗಳ, ಪತ್ರಿಕೆಗಳ ಮತ್ತು ಪುಸ್ತಕಗಳ ಮೇಲೆ ನಿರ್ಬಂಧ ಹೇರುವುದರಿಂದ ಕೂಡಿತ್ತು. ರಾಜ್ಯಶಾಸ್ತ್ರ ಮತ್ತು ಇತಿಹಾಸ ವಿಷಯಗಳ ಅಧ್ಯಯನವನ್ನು ಸಂಪೂರ್ಣವಾಗಿ ಕಡೆಗಣಿಸಲಾಯಿತು.

ಬೇಹುಗಾರರು ಸರ್ಕಾರಿ ಕಛೇರಿಗಳಲ್ಲಿ, ಮನೋರಂಜನ ಸ್ಥಳಗಳಲ್ಲಿ ಮತ್ತು ವಿದ್ಯಾ ಸಂಸ್ಥೆಗಳಲ್ಲಿ ಎಲ್ಲ ಚಟುವಟಿಕೆಗಳನ್ನು ಗಮನಿಸುತ್ತಿದ್ದರು. ಸರ್ಕಾರಕ್ಕೆ ವಿಶ್ವವಿದ್ಯಾನಿಲಯಗಳು ಉದಾರ ತತ್ವಗಳನ್ನು ಹರಡುವ ಕೇಂದ್ರಗಳಾಗಬಹುದು ಎಂಬ ಭಯವಿತ್ತು. ಅಧ್ಯಾಪಕರು ಮತ್ತು ವಿದ್ಯಾರ್ಥಿ ವೃಂದದ ಘನತೆಗೆ ಕುಂದು ತರುವಂತಹ ಕಟ್ಟಳೆಗಳನ್ನು ಜಾರಿಗೆ ತರಲಾಯಿತು. ವಿಶ್ವವಿದ್ಯಾನಿಲಯದ ಗ್ರಂಥಾಲಯದಿಂದ ಪ್ರತಿಯೊಬ್ಬ ಅಧ್ಯಾಪಕನು ತೆಗೆದುಕೊಂಡು ಹೋಗುವಂತಹ ಪುಸ್ತಕಗಳ ಪಟ್ಟಿಯನ್ನು ಬರೆದಿಡುವಂತೆ ಸರ್ಕಾರ ಸೂಚಿಸಿತು. ಸರ್ಕಾರವೇ ನಿಗಧಿಪಡಿಸಿದ ಪಠ್ಯ ಪುಸ್ತಕಗಳನ್ನು ಶಾಲೆಗಳಲ್ಲಿ ಬೋಧಿಸಬೇಕಾಗಿತ್ತು. ವಿದ್ಯಾರ್ಥಿಗಳು ಯಾವುದೇ ಸಂಘಗಳನ್ನು ಸ್ಥಾಪಿಸಿಕೊಳ್ಳಲು ಅನುಮತಿ ನೀಡಲಿಲ್ಲ. ಅವರು ಉನ್ನತ ವ್ಯಾಸಂಗಕ್ಕೆ ವಿದೇಶಗಳಿಗೆ ತೆರಳಲೂ ಅನುಮತಿ ಇರಲಿಲ್ಲ. ಯೂರೋಪಿನ ಉದಾರವಾದ ತತ್ವಗಳು ಆಸ್ಟ್ರಿಯಾಕ್ಕೆ ಯಾವುದೇ ಪ್ರಭಾವ ಬೀರದಂತೆ ಕ್ರಮಕೈಗೊಳ್ಳಲಾಯಿತು. ಮೆಟರ್ನಿಕ್‌ನು ತನ್ನ ವ್ಯವಸ್ಥೆಯನ್ನು ಆಸ್ಟ್ರಿಯಾದಲ್ಲಿ ಸುಭದ್ರವಾಗಿ ಸ್ಥಾಪಿಸಿದ ನಂತರ, ನೆರೆಯ ರಾಜ್ಯಗಳಲ್ಲಿ ತನ್ನ ಹಿಡಿತದಲ್ಲಿದ್ದ ಪ್ರದೇಶಗಳಲ್ಲೂ ಜಾರಿಗೆ ತರಲು ನಿರ್ಧರಿಸಿದನು. ವಿಶೇಷವಾಗಿ ಜರ್ಮನಿ ಮತ್ತು ಇಟಲಿಯಲ್ಲಿ ಈ ವ್ಯವಸ್ಥೆಯನ್ನು ಸ್ಥಾಪಿಸಲು ಕ್ರಮಕೈಗೊಂಡನು.

ಮೆಟರ್ನಿಕ್ಕನು ಹೊರ ರಾಜ್ಯಗಳಲ್ಲೂ ತನ್ನ ಪದ್ಧತಿಯನ್ನು ಅನುಸ್ಠಾನಕ್ಕೆ ತರಲು ಪ್ರಯತ್ನ ನಡೆಸಿದನು. ಅದು ಎಷ್ಟರ ಮಟ್ಟಿಗೆ ಆಸ್ಟ್ರಿಯ 1815 ರಿಂದ 1848 ರವರೆಗೆ ಯೂರೋಪಿನ ರಾಜಕೀಯದಲ್ಲಿ ತನ್ನ ಮೇಲುಗೈ ಸಾಧಿಸಿತು ಎಂಬುದನ್ನು ತೋರಿಸುತ್ತದೆ. ವಿಯೆನ್ನಾ ಈ ಕಾಲದಲ್ಲಿ ಯೂರೋಪಿನ ವ್ಯವಹಾರಗಳ ಕೇಂದ್ರಬಿಂದುವಾಗಿತ್ತು.

ಮೆಟರ್ನಿಕ್ಕನು ವಿಯೆನ್ನ ಕಾಂಗ್ರೆಸ್‌ನಲ್ಲಿ ಕ್ರಿಯಾತ್ಮಕ ಪಾತ್ರವಹಿಸಿದ್ದನು. ಅವನನ್ನು ಅದರ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಆರಿಸಲಾಯಿತು. ಈ ಕಾಂಗ್ರೆಸ್‌ನ ಮುಖ್ಯಕೆಲಸವು ಫ್ರಾನ್ಸ್ ಬಿಟ್ಟುಕೊಟ್ಟಿದ್ದ ಪ್ರದೇಶಗಳನ್ನು ಹಂಚುವುದಾಗಿತ್ತು. ಆಸ್ಟ್ರಿಯಾ ಪುನಃ ಪೋಲೆಂಡಿನ ಒಂದು ಭಾಗವನ್ನು ಪಡೆಯಿತು. ಡಾಲ್ಮೇಷಿಯನ್ ತೀರದಲ್ಲಿದ್ದ ಇಲ್ಲಿರಿಯನ್ ಪ್ರದೇಶವನ್ನು ಕೂಡ ಆಸ್ಟ್ರಿಯ ಪಡೆಯಿತು. ಉತ್ತರ ಇಟಲಿಯಲ್ಲಿದ್ದ ಲೊಂಬಾರ್ಡಿ ಮತ್ತು ವೆನಿಷಿಯ ರಾಜ್ಯಗಳು ಆಸ್ಟ್ರಿಯಾದ ವಶವಾದವು.

ವಿಯೆನ್ನ ಕಾಂಗ್ರೆಸ್‌ನಲ್ಲಿ ಮೂವತ್ತೆಂಟು ರಾಜ್ಯಗಳಿಂದ ಕೂಡಿದ್ದ ಒಂದು ಜರ್ಮನ್ ಒಕ್ಕೂಟವನ್ನು ಸ್ಥಾಪಿಸಲಾಯಿತು. ಒಕ್ಕೂಟದ ಪಾರ್ಲಿಮೆಂಟ್ ಅಥವಾ ಡಯಟ್ ಈ ರಾಜ್ಯಗಳ ರಾಜರುಗಳು ಕಳುಹಿಸುತ್ತಿದ್ದ ಪ್ರತಿನಿಧಿಗಳಿಂದ ಕೂಡಿತ್ತು. ಅದರ ಅಧ್ಯಕ್ಷತೆಯನ್ನು ಆಸ್ಟ್ರಿಯಾ ವಹಿಸುತ್ತಿತ್ತು. ಮೆಟರ್ನಿಕ್ ಜರ್ಮನಿಯ ಒಕ್ಕೂಟದ ಎಲ್ಲ ಚಟುವಟಿಕೆಗಳನ್ನು ನಿಯಂತ್ರಿಸಿದನು.

### *98.4.3 ಅಧಿವೇಶನಗಳು*

ಸುಮಾರು ಇಪ್ಪತ್ತೈದು ವರ್ಷಗಳ ಕಾಲ (1789-1815) ವಿನಾಶಕಾರಕ ಯುದ್ಧಗಳು ನಡೆದಿವೆ, ಮುಂದೆ ಇಂತಹ ಯುದ್ಧಗಳು ನಡೆಯದಂತೆ ಎಚ್ಚರಿಕೆ ವಹಿಸಬೇಕೆಂಬುದೆ ಮೆಟರ್ನಿಕ್‌ನ ಮುಖ್ಯ ಉದ್ದೇಶವಾಗಿತ್ತು. ಅವನು ವಿಯೆನ್ನ ಒಪ್ಪಂದವು ಶಾಶ್ವತವಾಗಿ ಉಳಿಯಬೇಕೆಂಬ ಆಕಾಂಕ್ಷೆಯನ್ನು ಹೊಂದಿದ್ದನು. ಈ ಉದ್ದೇಶದಿಂದಲೆ ಕ್ವಾಡ್ರಪಲ್ ಒಪ್ಪಂದ (ಚತುರ್ರಾಷ್ಟ್ರಗಳ ಕೂಟ) ಮುಂದುವರಿಯುವಂತೆ ಮಾಡಿ ಅದನ್ನು ಶಾಶ್ವತವಾಗಿ 'ಯೂರೋಪಿಯನ್ ಒಕ್ಕೂಟ' ವನ್ನಾಗಿ ಪರಿವರ್ತಿಸಿದನು. ಆಸ್ಟ್ರಿಯ, ಪ್ರಷ್ಯ, ರಷ್ಯ ಮತ್ತು ಇಂಗ್ಲೆಂಡ್ ಈ ಯೂರೋಪಿಯನ್ ಒಕ್ಕೂಟದ ಸದಸ್ಯರಾಗಿದ್ದರು. ಸದಸ್ಯರುಗಳು ಯಾರಾದರು ಯೂರೋಪಿನ ಶಾಂತಿಗೆ ಧಕ್ಕೆ ಉಂಟು ಮಾಡಿದರೆ ಅಂತಹವರ ವಿರುದ್ಧ ಕ್ರಮಕೈಗೊಳ್ಳಲು ಆಗಿಂದಾಗ್ಗೆ ಸಭೆಗಳನ್ನು ನಡೆಸಲು ತೀರ್ಮಾನಿಸಿದರು. ಈ ರೀತಿಯಾಗಿ ನಾಲ್ಕು ರಾಜ್ಯಗಳಿಂದ ಕೂಡಿದ್ದ 'ಯೂರೋಪಿಯನ್ ಒಕ್ಕೂಟ' ಅನೇಕ ಸಭೆಗಳನ್ನು ನಡೆಸಿತು.

ಯೂರೋಪಿನ ಒಕ್ಕೂಟದ ಮೊದಲನೆ ಅಂತರ ರಾಷ್ಟ್ರೀಯ ಸಭೆಯು 1818 ರಲ್ಲಿ ಆಕ್ಷ್-ಲಾ-ಚಾಪಲ್‌ನಲ್ಲಿ ನಡೆಯಿತು. ಮಿತ್ರ ರಾಷ್ಟ್ರಗಳಿಗೆ ನೀಡಬೇಕಾಗಿದ್ದ ಹಣವನ್ನು ಫ್ರಾನ್ಸ್ ಸಂದಾಯ ಮಾಡಿದುದರಿಂದ, ಇದುವರೆಗೆ ಫ್ರಾನ್ಸ್‌ನಲ್ಲಿ ಬೀಡಬಿಟ್ಟಿದ್ದ ಮಿತ್ರ ರಾಷ್ಟ್ರಗಳ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳಲು ಈ ಸಭೆಯಲ್ಲಿ ತೀರ್ಮಾನಿಸಲಾಯಿತು. ನಾಲ್ಕು ರಾಷ್ಟ್ರಗಳಿಗೆ ಸಮನಾಗಿ ಫ್ರಾನ್ಸ್‌ನ್ನು ಯೂರೋಪಿನ ಒಕ್ಕೂಟಕ್ಕೆ ಸೇರಿಸಿಕೊಳ್ಳಲಾಯಿತು. ಆದುದರಿಂದಾಗಿ ಕ್ವಾಡ್ರಪಲ್ ಒಕ್ಕೂಟ ಐದು ರಾಷ್ಟ್ರಗಳಿಂದ ಕೂಡಿದ ಒಕ್ಕೂಟವಾಯಿತು.

ಇದೇ ಸಮಯದಲ್ಲಿ ಉದಯಿಸಿದ ಮತ್ತೊಂದು ಒಪ್ಪಂದವೆಂದರೆ 'ಹೋಲಿ ಅಲಿಯನ್ಸ್'. ಇದು ಝಾರ್ ಅಲೆಕ್ಸಾಂಡರನ ಶಿಶು. ರಷ್ಯ, ಆಸ್ಟ್ರಿಯ ಮತ್ತು ಪ್ರಷ್ಯ ಈ ಒಪ್ಪಂದಕ್ಕೆ ಸಹಿ ಹಾಕಿದವು. ಒಳ ಮತ್ತು ವಿದೇಶಾಂಗ ವ್ಯವಹಾರಗಳಲ್ಲಿ ಸದಸ್ಯರುಗಳು ಬೈಬಲ್ ಯಾವ ತತ್ವವನ್ನು ಪ್ರತಿಪಾದಿಸುತ್ತಿದೆಯೋ ಅದರಂತೆಯೇ ನಡೆದುಕೊಳ್ಳಬೇಕೆಂದು ವಿವರಿಸಲಾಯಿತು. ಇದರ ಮೂಲ ತತ್ವಗಳನ್ನು ಸಮಕಾಲೀನ ರಾಜಕೀಯ ರಂಗದಲ್ಲಿ ಅನುಸ್ಠಾನಕ್ಕೆ ತರಲು ಸಾಧ್ಯವಾಗಲಿಲ್ಲ. ಕೇವಲ ಕೆಲವೇ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಝಾರನ ಕಲ್ಪನೆಯ ಕೂಸು ಇದಾಗಿತ್ತು. ಈ ಒಪ್ಪಂದಕ್ಕೆ ಬ್ರಿಟನ್ ಸಹಿ ಹಾಕಲು ನಿರಾಕರಿಸಿತು.

1818 ರ ಆಕ್ಸ್-ಲಾ-ಚಾಪಲ್ ಸಮ್ಮೇಳನದ ನಂತರ ವಿವಿಧ ಸ್ಥಳಗಳಲ್ಲಿ ಅನೇಕ ಸಮ್ಮೇಳನಗಳು ನಡೆದವು. ಟ್ರೊಪ್ಪಾವ್ (1820) ಮತ್ತು ಲೈಬಕ್ (1821) ಗಳಲ್ಲಿ ಸಮಾವೇಶಗೊಂಡ ಸಮ್ಮೇಳನಗಳಲ್ಲಿ ಸ್ಪ್ಯಾನಿಷ್ ಸಮಸ್ಯೆಯನ್ನು ಚರ್ಚಿಸಲಾಯಿತು. ಸ್ಪೇನಿನ ಕ್ರಾಂತಿಕಾರರು ಅಲ್ಲಿಯ ರಾಜನ ಮೇಲೆ ಒತ್ತಡ ತಂದು 1812 ರ ಪ್ರಜಾಪ್ರಭುತ್ವ ಸಂವಿಧಾನವನ್ನು ಪುನರ್ ಸ್ಥಾಪಿಸುವುದರಲ್ಲಿ ಯಶಸ್ವಿಯಾದರು. ಪ್ರಬಲ ರಾಷ್ಟ್ರಗಳ ನಡುವೆ ಸ್ಪೆಯಿನಿಗೆ ಸೈನ್ಯವನ್ನು ಕಳುಹಿಸಿ ಅಲ್ಲಿಯ ಕ್ರಾಂತಿಯನ್ನು ಹತ್ತಿಕ್ಕಲು ಕ್ರಮಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯಗಳು ತಲೆದೋರಿದವು. ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಲಿಲ್ಲ. ಆದರೆ ಇಟಲಿಯ ನೇಪಲ್ಸ್‌ನ ದಂಗೆಯನ್ನ ಹತ್ತಿಕ್ಕಲು ಸೈನ್ಯ ಕಳುಹಿಸಿಕೊಡಲಾಯಿತು. ಈ ರೀತಿ ಸದಸ್ಯ ರಾಷ್ಟ್ರಗಳಲ್ಲಿ ಒಡಕುಂಟಾಗಲು ಪ್ರಾರಂಭಿಸಿತು.

ವೆರೋನದಲ್ಲಿ ನಡೆದ ಕೊನೆಯ ಸಮ್ಮೇಳನವು ಎರಡು ಪ್ರಮುಖ ಸಮಸ್ಯೆಗಳನ್ನು ಎದುರಿಸಿತು - ಗ್ರೀಕರ ಸ್ವಾತಂತ್ರ್ಯ ಸಂಗ್ರಾಮ ಹಾಗೂ ಸ್ಪ್ಯಾನಿಷ್ ದಂಗೆ. ಗ್ರೀಕರು ತುರ್ಕಿಯ ಸುಲ್ತಾನನಿಂದ ಬಿಡುಗಡೆ ಹೊಂದಲು ದಂಗೆಯೆದ್ದರು. (1821) ತುರ್ಕಿಯ ಸೈನಿಕರು ಈ ದಂಗೆಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. ರಷ್ಯ ತನ್ನ ಸೈನ್ಯ ಕಳುಹಿಸಿ ಗ್ರೀಕರಿಗೆ ಸಹಾಯ ಮಾಡಲು ಮುಂದಾಯಿತು. ಆದರೆ ಗ್ರೇಟ್‌ಬ್ರಿಟನ್ ಮತ್ತು ಆಸ್ಟ್ರಿಯ ಇದನ್ನು ಪ್ರಬಲವಾಗಿ ವಿರೋಧಿಸಿದವು. ಆದರೆ ಯೂರೋಪಿಯನ್ ಒಕ್ಕೂಟ ಹೊಡೆದು ಚೂರಾಗಲು ಗ್ರೇಟ್ ಬ್ರಿಟನ್ನಿನ ವಿರುದ್ಧವಿದ್ದರೂ ಆಸ್ಟ್ರಿಯ ಮತ್ತು ರಷ್ಯ ಬೆಂಬಲ ಪಡೆದು ಸ್ಪೈಯಿನಿಗೆ ಫ್ರಾನ್ಸ್ ಸೈನ್ಯವನ್ನು ಕಳುಹಿಸಿಕೊಟ್ಟಿದುದು. ಇದರಿಂದ ಕುಪಿತಗೊಂಡ ಗ್ರೇಟ್ ಬ್ರಿಟನ್ ಒಕ್ಕೂಟದಿಂದ ನಿರ್ಗಮಿಸಿತು. ಈ ಘಟನೆಯು ಅಂತಿಮವಾಗಿ ಕ್ರಾಂಗ್ರೆಸ್ ಪದ್ಧತಿ ಪತನವಾಗಲು ಕಾರಣವಾಯಿತು. ಯೂರೋಪಿನ ವಿವಿಧ ಭಾಗಗಳಲ್ಲಿ ನಡೆದ ಕ್ರಾಂತಿಗಳು ಅಂತಿಮವಾಗಿ ವಿಯೆನ್ನಾ ಕ್ರಾಂಗ್ರೆಸ್ ಎಣೆದಿದ್ದ ಬಲೆಯನ್ನು ನಾಶಗೊಳಿಸಿದವು.

### *98.4.4 ಆಸ್ಟ್ರಿಯಾದ ಮೇಲೆ 1848 ರ ಫ್ರಾನ್ಸಿನ ಕ್ರಾಂತಿಯ ಪ್ರಭಾವ*

ಫ್ರಾನ್ಸಿನಲ್ಲಿ 1848 ರ ಕ್ರಾಂತಿಯಿಂದಾಗಿ ಲೂಯಿ ಫಿಲಿಪ್‌ನ ಅಧಿಕಾರ ಪತನವಾದಾಗ, ಯೂರೋಪಿನಾದ್ಯಂತ ನಡುಕ ಉಂಟಾಯಿತು. ಫ್ರಾನ್ಸಿನ ಕ್ರಾಂತಿಯ ಸುದ್ದಿಯು ತಲುಪುತ್ತಿದ್ದಂತೆ ಆಸ್ಟ್ರಿಯಾ ಸಾಮ್ರಾಜ್ಯದ ವಿವಧ ಭಾಗಗಳಲ್ಲಿ ಕ್ರಾಂತಿಗಳು ಪ್ರಾರಂಭವಾದವು. ವಿಯೆನ್ನಾದಲ್ಲಿ ದುಡಿಯುವ ಮತ್ತು ವಿದ್ಯಾರ್ಥಿಗಳು ಕ್ರಾಂತಿಯನ್ನು ಪ್ರಾರಂಭಿಸಿದರು. ಕ್ರಾಂತಿಕಾರರು ಅನಂತರ ಚಕ್ರವರ್ತಿಯ ಅರಮನೆಗೆ ತೆರಳಿದರು. ಅಲ್ಲಿ ಡಯಟ್ ಸಭೆ ಸೇರಿ ಚರ್ಚೆ ನಡೆಸುತ್ತಿತ್ತು. ಮೆಟರ್ನಿಕ್ಕನಿಗೆ ಧಿಕ್ಕಾರ ಎಂಬ ಘೋಷಣೆಗಳನ್ನು ಕೂಗಿದರು. ಮೆಟರ್ನಿಕ್ಕನು ತಕ್ಷಣವೇ ರಾಜೀನಾಮೆ ಸಲ್ಲಿಸಿದನು. ಅನಂತರ ಗ್ರೇಟ್ ಬ್ರಿಟನ್‌ಗೆ ಪಲಾಯನ ಮಾಡಿದನು. ಚಕ್ರವರ್ತಿ ಫರ್ಡಿನೆಂಡ್ ಒಂದು ರಾಜ್ಯಾಂಗವನ್ನು ನೀಡಿದನು. ಜನರಿಗೆ ನಾಗರಿಕ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಘೋಷಿಸಿದನು. ದ್ವಿಸದನವುಳ್ಳ ಸಂಸತ್ ಅಸ್ತಿತ್ವಕ್ಕೆ ಬಂದಿತು.

ಆಸ್ಟ್ರಿಯಾದ ಹಿಡಿತದಲ್ಲಿದ್ದ ಪ್ರದೇಶಗಳು ಕೂಡ ದಂಗೆ ಎದ್ದವು. ಬೊಹಿಮಿಯ, ಹಂಗೇರಿ, ಲೋಂಬಾರ್ಡೊ-ವೆನಿಷಿಯನ್ ರಾಜ್ಯಗಳಲ್ಲಿ ಕ್ರಾಂತಿಗಳು ಪ್ರಾರಂಭವಾದವು. ಇಂತಹ ಅರಾಜಕತೆಯ ಸಮಯದಲ್ಲಿ ಆಸ್ಟ್ರಿಯಾ ಸಾಮ್ರಾಜ್ಯವನ್ನು ರಕ್ಷಿಸಿದ ಕೀರ್ತಿ ಆಸ್ಟ್ರಿಯಾದ ಸೈನ್ಯಕ್ಕೆ ಸಲ್ಲುತ್ತದೆ. ಆಸ್ಟ್ರಿಯ ಸೈನ್ಯ ಈ ಎಲ್ಲಾ ಕ್ರಾಂತಿಗಳನ್ನು ಹತ್ತಿಕ್ಕುವುದರಲ್ಲಿ ಯಶಸ್ವಿಯಾಯಿತು. 1850 ರ ವೇಳೆಗೆ ಆಸ್ಟ್ರಿಯ ಪುನಃ ತನ್ನ ಪರಾಮಾಧಿಕಾರವನ್ನು ಈ ರಾಜ್ಯಗಳ ಮೇಲೆ ಸ್ಥಾಪಿಸುವುದರಲ್ಲಿ ಯಶಸ್ವಿಯಾಯಿತು. ಎಲ್ಲಾ ಕಡೆಯು ನಿರಂಕುಶ ಪ್ರಭುತ್ವವನ್ನು ಪುನರ್‌ಸ್ಥಾಪಿಸಲಾಯಿತು. ಹಂಗೇರಿಯು ಆಸ್ಟ್ರಿಯಾದ ಹೆಚ್ಚಿನ ಆಕ್ರೋಶಕ್ಕೆ ಒಳಗಾಯಿತು. ಹಂಗೇರಿಯಾದ ಡಯಟ್‌ನ್ನು ವಿಸರ್ಜಿಸಲಾಯಿತು. ಹಂಗೇರಿಯನ್ನು ಐದು ಭಾಗಗಳಾಗಿ ವಿಂಗಡಿಸಿ ಒಬ್ಬೊಬ್ಬ ರಾಜನನ್ನು ನೇಮಿಸಲಾಯಿತು.

ಸುಮಾರು ಒಂದು ದಶಕದ ಕಾಲ ಆಸ್ಟ್ರಿಯಾದ ನಿರಂಕುಶ ಪ್ರಭುತ್ವದ ಆಳ್ವಿಕೆ ಹಂಗೇರಿಯಲ್ಲಿ ಮುಂದುವರಿಯಿತು. ಆದರೆ 1859 ರಲ್ಲಿ ಪೀಡ್‌ಮೌಂಟ್‌ನಿಂದ ಸೋಲನ್ನನುಭವಿಸಿ ಇಟಲಿಯಲ್ಲಿ ಲೊಂಬಾರ್ಡಿಯನ್ನು ಕಳೆದುಕೊಂಡಿತು. 1866 ರಲ್ಲಿ ನಡೆದ ಆಸ್ಟ್ರೋ-ಪ್ರಷ್ಯನ್ ಯುದ್ಧದಲ್ಲಿ ಪ್ರಷ್ಯಾದಿಂದ ಹೀನಾಯ ಸೋಲನ್ನು ಅನುಭವಿಸಿತು. ಈ ಸೋಲಿನಿಂದಾಗಿ ವೆನಿಷಿಯಾವನ್ನು ಕಳೆದುಕೊಂಡಿತಲ್ಲದೆ ಆಸ್ಟ್ರಿಯ ಜರ್ಮನಿಯ ಒಕ್ಕೂಟದಿಂದ ಉಚ್ಚಾಟಿಸಲ್ಪಟ್ಟಿತು.

ಮೇಲೆ ವಿವರಿಸಿದ ಅಪಜಯಗಳಿಂದಾಗಿ, ಆಸ್ಟ್ರಿಯ ತನ್ನ ಹಿಡಿತದಲ್ಲಿದ್ದ ಹಂಗೇರಿಯ ಬಗ್ಗೆ ತನ್ನ ನೀತಿಯನ್ನು ಬದಲಾಯಿಸಬೇಕಾಯಿತು. ಆಸ್ಟ್ರಿಯಾದ ಈ ಅಪಜಯಗಳು ಹಂಗೇರಿಗೆ ವರವಾದವು. ಆಸ್ಟ್ರಿಯಾದ ಚಕ್ರವರ್ತಿ ಫ್ರಾನ್ಸಿಸ್ ಜೋಸೆಪ್ ತನ್ನ ಹಂಗೇರಿಯಾದ ಪ್ರಜೆಗಳಿಗೆ

ರಿಯಾಯಿತಿಗಳನ್ನು ಪ್ರಕಟಿಸಬೇಕಾಯಿತು. 1867 ರಲ್ಲಿ ಹಂಗೇರಿಯ ಜನತೆಯೊಂದಿಗೆ ಒಂದು ರಾಜಿ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದ ಒಂದು ಹೊಸ ನಮೂನೆಯ ರಾಜ್ಯ ವ್ಯವಸ್ಥೆಯನ್ನು ಸೃಷ್ಟಿಸಿತು. ಈ ಒಪ್ಪಂದದ ಪ್ರಕಾರ ಆಸ್ಟ್ರಿಯಾ ಸಾಮ್ರಾಜ್ಯ ಆಸ್ಟ್ರಿಯಾ-ಹಂಗೇರಿ ಎಂದು ನಾಮಾಂಕಿತಗೊಂಡಿತು. ದ್ವಿರಾಜತ್ವ ವ್ಯವಸ್ಥೆ ಜಾರಿಗೆ ಬಂದಿತು. ಆಸ್ಟ್ರಿಯಾ ಮತ್ತು ಹಂಗೇರಿ ಪ್ರತ್ಯೇಕ ಸ್ವತಂತ್ರ ರಾಜ್ಯಗಳಾಗಿದ್ದವು. ಪ್ರತಿಯೊಂದು ತನ್ನದೇ ಆದ ರಾಜಧಾನಿ ಹೊಂದಿತ್ತು. ಆಸ್ಟ್ರಿಯಾದ ರಾಜಧಾನಿ ವಿಯೆನ್ನಾ ಮತ್ತು ಬುಡ್‌ಪೆಸ್ಟ್ ಹಂಗೇರಿಯ ರಾಜಧಾನಿ. ಒಂದು ವಿಶೇಷವೇನೆಂದರೆ ಎರಡು ರಾಜ್ಯಗಳಿಗೂ ಒಬ್ಬನೇ ರಾಜ. ಆಸ್ಟ್ರಿಯಾದಲ್ಲಿ ಅವನನ್ನು ಚಕ್ರವರ್ತಿ ಎಂದು ಕರೆಯಲಾಗುತ್ತಿತ್ತು. ಹಂಗೇರಿಯಲ್ಲಿ ಅವನನ್ನು ರಾಜ ಎಂದು ಕರೆಯಲಾಗುತ್ತಿತ್ತು. ಪ್ರತಿಯೊಂದು ರಾಜ್ಯವು ತನ್ನದೇ ಆದ ಸಂಸತ್ತನ್ನು ಹೊಂದಿತ್ತು ಮತ್ತು ಮಂತ್ರಿಮಂಡಲವು ಇತ್ತು. ಪ್ರತಿಯೊಂದು ರಾಜ್ಯದ ಆಡಳಿತದಲ್ಲೂ ಯಾವುದೇ ಹಸ್ತಕ್ಷೇಪವಿರಲಿಲ್ಲ.

ಆದರೆ ಎರಡು ರಾಜ್ಯಗಳು ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಒಂದಾಗಿದ್ದವು. ವಿದೇಶಾಂಗ ನೀತಿಗೆ, ಯುದ್ಧ ಮತ್ತು ಹಣಕಾಸು ವ್ಯವಸ್ಥೆ ಸಂಬಂಧಿಸಿದ ಪ್ರತಿಯೊಂದು ಇಲಾಖೆಗೂ ಎರಡು ರಾಜ್ಯಗಳಿಂದ ಕೂಡಿದ್ದ ಜಂಟಿ ಮಂತ್ರಿಮಂಡಲ ವ್ಯವಸ್ಥೆ ಇತ್ತು. ಇಂತಹ ವ್ಯವಸ್ಥೆಯು ಸುಮಾರು 50 ವರ್ಷಗಳ ಕಾಲ ಮುಂದುವರಿಯಿತು. ಮೊದಲನೆ ಜಾಗತಿಕ ಯುದ್ಧ 1918 ರಲ್ಲಿ ಕೊನೆಗೊಂಡಾಗ ಈ ದ್ವಿರಾಜತ್ವ ವ್ಯವಸ್ಥೆ ಕೊನೆಗೊಂಡಿತು.

## 98.5 ರಷ್ಯ

ಹತ್ತೊಂಬತ್ತನೆ ಶತಮಾನದಲ್ಲಿ ಯೂರೋಪಿನಲ್ಲೆ ರಷ್ಯ ಒಂದು ವಿಶಾಲವಾದ ದೇಶವಾಗಿತ್ತು. ಪ್ರಪಂಚದಲ್ಲೆ ಬ್ರಿಟಿಷ್ ಸಾಮ್ರಾಜ್ಯವನ್ನು ಬಿಟ್ಟರೆ ರಷ್ಯ ಒಂದು ದೊಡ್ಡ ಸಾಮ್ರಾಜ್ಯವಾಗಿತ್ತು. ಅದರ ಗಡಿಗಳು ಉತ್ತರದಲ್ಲಿ ಬಾಲ್ಟಿಕ್ ಸಮುದ್ರ ಮತ್ತು ಆರ್ಕ್‌ಟಿಕ್ ಸಮುದ್ರಗಳಿಂದ, ದಕ್ಷಿಣದಲ್ಲಿ ಕ್ಯಾಸ್ಪಿಯನ್ ಸಮುದ್ರದವರೆಗೂ, ಪಶ್ಚಿಮದಲ್ಲಿ ಪ್ರಷ್ಯ ಮತ್ತು ಆಸ್ಟ್ರಿಯಾದ ಪೂರ್ವದ ಗಡಿಗಳಿಂದ ಪೂರ್ವದಲ್ಲಿ ಪೆಸಿಫಿಕ್ ಸಮುದ್ರದವರೆಗೂ ಹಬ್ಬಿದ್ದವು. ರಷ್ಯ 80 ಮಿಲಿಯನ್ ಚದರ ಮೈಲಿಗಳಷ್ಟು ಅಥವಾ ಪ್ರಪಂಚದ $^{1}/_{6}$ ರಷ್ಟು ಭೂಪ್ರದೇಶವನ್ನು ಆವರಿಸಿತ್ತು.

ಹತ್ತೊಂಬತ್ತನೆಯ ಶತಮಾನದಲ್ಲಿ ರಷ್ಯಾದಲ್ಲಿ ಯಾವುದೇ ಕ್ರಾಂತಿಯ ಭಯ ಉಂಟಾಗಲಿಲ್ಲ. ಆದಾಗ್ಯೂ ಒಂದನೆಯ ಅಲೆಕ್ಸಾಂಡರ್ (1805-1825), ಒಂದನೆಯ ನಿಕೊಲಸ್ (1825-1855) ಮತ್ತು ಎರಡನೆಯ ಅಲೆಕ್ಸಾಂಡರ್ (1855-1881) ರ ಆಳ್ವಿಕೆಗಳ ಕಾಲವು ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳ ಯಾವುದೇ ಬದಲಾವಣೆಯನ್ನು ಕಾಣದೆ ಇದ್ದರೂ ರಷ್ಯಾದ ಇತಿಹಾಸದಲ್ಲಿ ಹೊಸ ಯುಗದ ಪ್ರಾರಂಭವನ್ನು ಬಿಂಬಿಸುತ್ತವೆ.

### *98.5.1 ಒಂದನೆಯ ಅಲೆಕ್ಸಾಂಡರ್ (1801-1825)*

1801 ರಲ್ಲಿ ಒಂದನೆಯ ಅಲೆಕ್ಸಾಂಡರನು ಝಾರನಾದಾಗ ಅವನ ಆಳ್ವಿಕೆಯ ಕಾಲವು ವಿಪುಲ ಸುಧಾರಣೆಗಳ ಪ್ರಾರಂಭದ ಕಾಲವಾಗಿರುತ್ತದೆ ಎಂಬ ನಂಬಿಕೆ ಉಂಟಾಗಿತ್ತು. ಆಳ್ವಿಕೆಯ ಮೊದಲರ್ಧ ಕಾಲದಲ್ಲಿ ಉದಾರ ನೀತಿಯ ಕಡೆಗೆ ಒಲವನ್ನು ಹೊಂದಿದ್ದನು. ಕ್ರಿ.ಶ. 1809 ರಲ್ಲಿ ರಾಜ್ಯದ ಕಾರ್ಯದರ್ಶಿ ಸ್ಪೆರಾನ್‌ಸ್ಕಿ ರಾಜ್ಯಾಂಗ ಮತ್ತು ಆಡಳಿತಕ್ಕೆ ಸಂಬಂಧಿಸಿದ ಸುಧಾರಣೆಗಳ ಒಂದು ಯೋಜನೆಯನ್ನು ಸಿದ್ಧಪಡಿಸಿದನು. ಸ್ಟೇಟ್ ಕೌನ್ಸಿಲ್‌ನನ್ನು ಸ್ಥಾಪಿಸುವುದು ಈ ಯೋಜನೆಯ ಪ್ರಮುಖ ಅಂಶವಾಗಿತ್ತು. ರಕ್ತಗತವಾಗಿ ಬಂದಿದ್ದ ಸಂಪ್ರದಾಯಬದ್ಧ ಗುಣಗಳಿಂದಾಗಿ ಒಂದನೆಯ ಅಲೆಕ್ಸಾಂಡರ್ ಸ್ಪೆರನ್‌ಸ್ಕಿಯ ಇನ್ನಿತರ ಸುಧಾರಣೆಗಳನ್ನು ಜಾರಿಗೆ ತರಲು ಇಷ್ಟಪಡಲಿಲ್ಲ. ನೆಪೋಲಿಯನ್ನನ್ನು ಹಿಮ್ಮೆಟ್ಟಿಸಿಕೊಂಡು ಹೋಗಿದ್ದ ಹಲವು ರಷ್ಯನ್ ದಂಡನಾಯಕರುಗಳು ಪಶ್ಚಿಮದಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಹಲವು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಗಮನಿಸಿ ಪ್ರಭಾವಿತಗೊಂಡರು. ಅವರು ಯುದ್ಧ ಮುಗಿದ ಮೇಲೆ ರಷ್ಯಾದಲ್ಲಿ ಗುಪ್ತ ಸಂಸ್ಥೆಗಳನ್ನು ಸ್ಥಾಪಿಸಿದರು.

ಆದರೆ ಅವುಗಳನ್ನು ನಿರ್ದಯೆಯಿಂದ ಅಲೆಕ್ಸಾಂಡರ್ ನಾಶಪಡಿಸಿದನು. ಒಂದನೆಯ ಅಲೆಕ್ಸಾಂಡರನ ಇಂತಹ ಕೃತ್ಯಗಳು ರಾಜಕೀಯ ವಿರೋಧ ಬೆಳೆಯಲು ಕಾರಣವಾಯಿತು.

ಒಂದನೆಯ ಅಲೆಕ್ಸಾಂಡರನ ಆಳ್ವಿಕೆಯ ಕಾಲದಲ್ಲಿ ರಷ್ಯ ನೆಪೋಲಿಯನ್ನನ ಯುದ್ಧಗಳಲ್ಲಿ ಭಾಗವಹಿಸಿತ್ತು. ಇಂಗ್ಲೆಂಡ್, ಆಸ್ಟ್ರಿಯ, ರಷ್ಯ ಮತ್ತು ಪ್ರಷ್ಯಾಗಳನ್ನೊಳಗೊಂಡಿದ್ದ ನಾಲ್ಕು ರಾಷ್ಟ್ರಗಳ ಒಕ್ಕೂಟ 1815 ರ ಜೂನ್ ತಿಂಗಳಲ್ಲಿ ನಡೆದ ವಾಟರ್‌ಲೂ ಕದನದಲ್ಲಿ ನೆಪೋಲಿಯನ್ನನನ್ನು ಸದೆ ಬಡಿಯುವುದರಲ್ಲಿ ಯಶಸ್ವಿಯಾಯಿತು. ಒಂದನೆಯ ಅಲೆಕ್ಸಾಂಡರ್ ಈ ಯುದ್ಧದಲ್ಲಿ ಪ್ರಮುಖ ಪಾತ್ರವಹಿಸಿದ್ದನು. 1815 ರ ವಿಯೆನ್ನಾ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ ಅನೇಕ ಚಕ್ರವರ್ತಿಗಳು ಮತ್ತು ಮಂತ್ರಿಗಳ ಪೈಕಿ, ರಷ್ಯಾದ ಝಾರ್ ಚಕ್ರವರ್ತಿಯು ಭಾಗಹಿಸಿದುದು ಪ್ರಮುಖವಾಗಿತ್ತು. ಏಕೆಂದರೆ ವಿಯೆನ್ನಾ ಕಾಂಗ್ರೆಸ್‌ನ ನಡಾವಳಿಗಳಲ್ಲಿ ಅವನೊಬ್ಬನೆ ಬಹಳ ಕರುಣೆಯಿಂದ ನಡೆದುಕೊಂಡ ಚಕ್ರವರ್ತಿಯಾಗಿದ್ದನು. ಅವನು ಸೋತ ಫ್ರಾನ್ಸಿನ ಬಗ್ಗೆ ಉದಾರವಾಗಿ ನಡೆದುಕೊಂಡು ಒಪ್ಪಂದ ಮಾಡಿಕೊಳ್ಳುವಂತೆ ಭಾಗವಹಿಸಿದ್ದ ಎಲ್ಲ ಪ್ರಮುಖರನ್ನು ಒತ್ತಾಯಿಸಿದನು.

ವಿಯೆನ್ನಾ ಕಾಂಗ್ರೆಸ್‌ನಲ್ಲಿ ತೆಗೆದುಕೊಂಡ ನಿರ್ಧಾರಗಳ ಪ್ರಕಾರ ಒಂದನೆಯ ಅಲೆಕ್ಸಾಂಡರನು ಅಂತರ ರಾಷ್ಟ್ರೀಯ ವ್ಯವಸ್ಥೆಯ ನಿರ್ವಹಣೆಗೆ ಯೂರೋಪಿನ ರಾಷ್ಟ್ರಗಳೊಡನೆ ಸಹಕರಿಸಿದನು. 1815 ರ ನವೆಂಬರ್ ತಿಂಗಳಲ್ಲಿ ಪ್ರಷ್ಯ, ಆಸ್ಟ್ರಿಯ ಮತ್ತು ಗ್ರೇಟ್ ಬ್ರಿಟನ್‌ನೊಡನೆ ರಷ್ಯ ಒಂದು ಒಪ್ಪಂದವನ್ನು ಮಾಡಿಕೊಂಡಿತು. ಈ ರೀತಿಯಾಗಿ ನಾಲ್ಕು ರಾಜ್ಯಗಳ ಮೈತ್ರಿ (ಕ್ವಾಡ್ರುಪಲ್ ಅಲಿಯನ್ಸ್) ಅಸ್ತಿತ್ವಕ್ಕೆ ಬಂತು. 1822 ರ ನಂತರ ಗ್ರೇಟ್ ಬ್ರಿಟನ್ ಬೇರೆ ರಾಜ್ಯಗಳಲ್ಲಿ ಹಸ್ತಕ್ಷೇಪ ಮಾಡುವುದರ ಬಗ್ಗೆ ಇಷ್ಟಪಡಲಿಲ್ಲ. ಆದ್ದರಿಂದ ಈ ಮೈತ್ರಿಕೂಟದ ಯಾವ ಕಾರ್ಯಕ್ರಮಗಳಲ್ಲೂ ಭಾಗವಹಿಸಲಿಲ್ಲ. ಅಲೆಕ್ಸಾಂಡರ್ 1822 ರ ನಂತರವು ರಾಜತ್ವದ ಹಕ್ಕು ಬಾದ್ಯತೆ (legitamacy) ಯ ತತ್ವವನ್ನು ಪ್ರತಿಪಾದಿಸುವುದಕ್ಕೆ ಮನ್ನಣೆ ನೀಡಿದನು ಮತ್ತು ಬೇರೆ ರಾಜ್ಯಗಳಲ್ಲಿ ರಾಜನ ಅಧಿಕಾರ ಮುಂದುವರಿಯಲು ಮತ್ತು ಕ್ರಾಂತಿಗಳನ್ನು ಹತ್ತಿಕ್ಕಲು ಸಹಕಾರ ಮಾಡಿದನು.

1815 ರಲ್ಲಿ ರಷ್ಯಾದ ಝಾರ್ ಪವಿತ್ರ ಮೈತ್ರಿ ಕೂಟವನ್ನು (Holy Alliance) ರಚಿಸುವುದಕ್ಕೆ ಕಾರಣನಾದನು. ಗ್ರೇಟ್‌ಬ್ರಿಟನ್ ಹೊರತುಪಡಿಸಿ ಯೂರೋಪಿನ ಇನ್ನುಳಿದ ರಾಜ್ಯಗಳ ಚಕ್ರವರ್ತಿಗಳು ಈ ಮೈತ್ರಿ ಕೂಟದ ಒಪ್ಪಂದಕ್ಕೆ ಸಹಿ ಹಾಕಿದರು. ಈ ಪವಿತ್ರ ಮೈತ್ರಿ ಕೂಟ ಹೆಚ್ಚಿನ ಪ್ರಭಾವ ಬೀರಲಿಲ್ಲ. ಅದು ಪ್ರತಿಗಾಮಿ ಯುಗದ ಚಿಹ್ನೆಯಾಗಿತ್ತು.

ಮೆಟರ್ನಿಕ್ಕನು ಒಂದನೆಯ ಅಲೆಕ್ಸಾಂಡರನ ಉದಾರ ನೀತಿಯ ಲಕ್ಷಣಗಳನ್ನು ಕಂಡು ಭಯಪಟ್ಟನು. ಆದ್ದರಿಂದ ಅವನಿಗೆ ಎಚ್ಚರಿಕೆಯಿಂದ ಮುಂದುವರಿಯುವಂತೆ ಒತ್ತಾಯಿಸಿದನು. ಕೇವಲ ಮೂರು ತಿಂಗಳುಗಳಲ್ಲಿ ಅವನ ದುರ್ಬಲ ಮನಸ್ಸನ್ನು ಬದಲಾಯಿಸುವುದರಲ್ಲಿ ಮೆಟರ್ನಿಕ್ಕನು ಯಶಸ್ವಿಯಾದನು. ಉದಾರ ನೀತಿಯಿಂದ ಕೂಡಿದ್ದ ಝಾರನು ಪ್ರಗತಿ ವಿರೋಧಿಯಾದನು. ಅವನು ಮೆಟರ್ನಿಕ್ಕನಂತೆ ಪ್ರತಿಗಾಮಿ ನೀತಿಯ ಕಟ್ಟಾ ಬೆಂಬಲಿಗನಾದನು. ಸುಮಾರು ಇಪ್ಪತ್ತೈದು ವರ್ಷಗಳ ಆಳ್ವಿಕೆಯ ನಂತರ 1825 ರಲ್ಲಿ ಮರಣ ಹೊಂದಿದನು.

### *98.5.2 ಒಂದನೆಯ ನಿಕೊಲಸ್ (1825-1855)*

1825 ರಲ್ಲಿ ಸಿಂಹಾಸನಕ್ಕೆ ಬಂದ ಒಂದನೆಯ ನಿಕೊಲಸ್‌ನು 1855 ರವರೆಗೆ ಆಳ್ವಿಕೆ ನಡೆಸಿದನು. ನಿರಂಕುಶ ಪ್ರಭುತ್ವದಲ್ಲಿ ಅಚಲವಾಗಿ ನಂಬಿಕೆಯಿಟ್ಟಿದ್ದ ನಿಕೊಲಸ್‌ನು ರಷ್ಯಾದಲ್ಲಿ ಉದಾರ ನೀತಿಯ ತತ್ವಗಳನ್ನು ಧ್ವಂಸ ಮಾಡಿ, ವಿದೇಶಗಳಲ್ಲಿ ಸಂಪ್ರದಾಯಬದ್ಧ ನೀತಿಯನ್ನು ರಕ್ಷಿಸಲು ನಿರ್ಧರಿಸಿದನು. ಅವನ ಆಳ್ವಿಕೆಯ ಪ್ರಾರಂಭದ ದಿನಗಳಲ್ಲೆ ಡಿಸೆಂಬರಿಸ್ಟ್ ದಂಗೆಯು

ವಿರುದ್ಧ ಹೋರಾಡಬೇಕಾಯಿತು. ಅನೇಕ ಸೈನಿಕರು ಒಂದನೆಯ ನಿಕೊಲಸ್‌ನ ಹಿರಿಯ ಸಹೋದರನಾದ ಕಾನ್‌ಸ್ಟಂಟೈನ್‌ನನ್ನು ಬೆಂಬಲಿಸಿ 1825 ರ ಡಿಸೆಂಬರ್ ಹದಿನಾಲ್ಕರಂದು ದಂಗೆ ಎದ್ದರು. ಇದು ಹೊಸದಾಗಿ ಅಧಿಕಾರಕ್ಕೆ ಬಂದ ಝಾರನಿಗೆ ವಿಧೇಯರಾಗಿ ನಡೆದುಕೊಳ್ಳುವುದಾಗಿ ಪ್ರತಿಜ್ಞೆಯನ್ನು ತೆಗೆದುಕೊಳ್ಳುವ ಸಮಾರಂಭದ ದಿನವಾಗಿತ್ತು. ಈ ದಿನ ದಂಗೆಯೆದ್ದ ಘಟನೆಯನ್ನು "ಡಿಸೆಂಬರಿಸ್ಟ್ ಒಳಸಂಚು" ಎಂದು ರಷ್ಯಾದ ಇತಿಹಾಸದಲ್ಲಿ ವಿವರಿಸಲಾಗಿದೆ. ಈದಿನ ಒಂದನೆಯ ನಿಕೊಲಸ್‌ನನ್ನು ಪದಚ್ಯುತಿಗೊಳಿಸಲು ದಂಗೆ ಎದ್ದರು. ಆದರೆ ನಿಕೊಲಸ್‌ನು ಈ ದಂಗೆಯನ್ನು ಅಡಗಿಸುವುದರಲ್ಲಿ ಯಶಸ್ವಿಯಾದನು. ಅನೇಕ ದಂಗೆಕೋರರು ಕೊಲ್ಲಲ್ಪಟ್ಟರು ಮತ್ತು ಅನೇಕರನ್ನು ಸೈಬೀರಿಯಾಕ್ಕೆ ಗಡಿಪಾರು ಮಾಡಲಾಯಿತು.

ಒಂದನೆಯ ನಿಕೊಲಸ್‌ನು ಯೂರೋಪಿನ ಪ್ರತಿಗಾಮಿ ರಾಜರುಗಳಿಗೆ ಅಪರಿಮಿತ ಸಹಾಯವನ್ನು ನೀಡಿದನು. ರಷ್ಯಾದ ಆರಕ್ಷಕರು ಸ್ವೇಚ್ಛಾನುಸಾರ ವರ್ತಿಸಿ ಮುಗ್ಧ ಜನರನ್ನು ಹಿಂಸಿಸಿ ಜನರ ಜೀವನವನ್ನು ಅತಿ ಸಂಕಟಕ್ಕೆ ಒಳಗಾಗುವಂತೆ ಮಾಡಿದನು. ಒಂದೇ ಒಂದು ಕ್ಷೇತ್ರದಲ್ಲಿ ಒಂದನೆಯ ನಿಕೊಲಸ್‌ನ ಸಾಧನೆಯು ಪ್ರಮುಖವೆನಿಸಿಕೊಂಡಿದೆ. ಹಾಲಿ ಜಾರಿಯಲ್ಲಿದ್ದ ಕಾನೂನುಗಳನ್ನು ಸಂಗ್ರಹಿಸುವ ಕೆಲಸವನ್ನು ಕೈಗೆತ್ತಿಕೊಂಡನು. ಸ್ಪೆರನ್‌ಸ್ಕಿಯ ನಿರ್ದೇಶನದಲ್ಲಿ ಅರವತ್ನಾಲ್ಕು ಸಂಪುಟಗಳಲ್ಲಿ ಕಾನೂನು ಸಂಗ್ರಹ ಕೆಲಸವನ್ನು ಪೂರ್ಣಗೊಳಿಸಲಾಯಿತು. ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದಂತೆ ರಷ್ಯಾದ ಇತಿಹಾಸದಲ್ಲಿ ಇದೊಂದು ಮುಖ್ಯವಾದ ಘಟನೆ.

ಒಂದನೆಯ ನಿಕೊಲಸ್‌ನ ವಿದೇಶಾಂಗ ನೀತಿ ಯಾವುದೇ ಯಶಸ್ಸಿನಿಂದ ಕೂಡಿರಲಿಲ್ಲ. 1830 ರಲ್ಲಿ ಪೋಲೆಂಡಿನ ಜನತೆ ಸ್ವಾತಂತ್ರ್ಯ ಪಡೆದುಕೊಳ್ಳುವುದಕ್ಕೋಸ್ಕರ ದಂಗೆ ಎದ್ದರು. 1831 ರ ವೇಳೆಗೆ ಈ ದಂಗೆಯನ್ನು ಅಡಗಿಸುವುದರಲ್ಲಿ ಸಫಲನಾದನು. ಪೋಲೆಂಡ್ ರಷ್ಯ ಸಾಮ್ರಾಜ್ಯದ ಒಂದು ಭಾಗವಾಗಿ ಸೇರ್ಪಡೆಯಾಯಿತು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ಮೆಚ್ಚಬಹುದಾದ ಒಂದೇ ಒಂದು ಕೆಲಸವೆಂದರೆ ಅವನು ಗ್ರೀಕರ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ನೀಡಿದುದು. ಗ್ರೀಕರು ತುರ್ಕಿಯ ಸುಲ್ತಾನನಿಂದ ಸ್ವಾತಂತ್ರ್ಯ ಪಡೆದುಕೊಳ್ಳಲು ದಂಗೆ ಎದ್ದರು. ಅಂತಹ ಸಮಯದಲ್ಲಿ ಗ್ರೀಕರಿಗೆ ಸ್ವಾತಂತ್ರ್ಯ ಗಳಿಸಿಕೊಳ್ಳಲು ಸಹಾಯ ಮಾಡಿದನು.

ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ ದುರದೃಷ್ಟವೆಂದರೆ 1854-1856 ರಲ್ಲಿ ನಡೆದ ಕ್ರಿಮಿಯ ಯುದ್ಧದಲ್ಲಿ ಸೋಲನ್ನನುಭವಿಸಿದುದು. 1853 ರಲ್ಲಿ ರಷ್ಯನರು ಬೆತ್ಲೆಹೆಂನಲ್ಲಿದ್ದ ಚರ್ಚಿನ ಮುಖ್ಯ ದ್ವಾರದ ಬೀಗದೆಸಳನ್ನು ಗ್ರೀಕ್ ಸಂಪ್ರದಾಯ ಕ್ರೈಸ್ತರಿಗೆ ನೀಡುವಂತೆ ಹಾಗೂ ಬೆಳ್ಳಿಯ ನಕ್ಷತ್ರವನ್ನು ಯೇಸು ಕ್ರಿಸ್ತನ ಹುಟ್ಟು ಹಬ್ಬದ ಜ್ಞಾಪಕಾರ್ಥವಾಗಿ ಚರ್ಚ್‌ನಲ್ಲಿ ಇಡಲು ಮನವಿ ಮಾಡಿದರು. ತುರ್ಕಿಯ ಸುಲ್ತಾನನು ಈಗಾಗಲೇ ಕ್ಯಾಥೊಲಿಕ್ಕರಿಗೆ ನೀಡಿದ್ದ ಹಕ್ಕುಗಳನ್ನು ಹಿಂತೆಗೆದುಕೊಳ್ಳದಂತೆ ಮತ್ತು ರಷ್ಯಾದ ಬೇಡಿಕೆಗಳಿಗೆ ಮಣಿಯದಂತೆ ಫ್ರಾನ್ಸ್ ತುರ್ಕಿಯ ಸುಲ್ತಾನನ ಮೇಲೆ ಒತ್ತಡ ತಂದಿತು. ಆದುದರಿಂದ ರಷ್ಯನರ ಬೇಡಿಕೆಗಳನ್ನು ತುರ್ಕಿಯ ಸುಲ್ತಾನನು ಈಡೇರಿಸಲಿಲ್ಲ. ನಿಕೊಲಸ್‌ನು ಈ ರಾಜತಾಂತ್ರಿಕ ಸೋಲನ್ನು ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಇದರ ಪರಿಣಾಮವಾಗಿ ರಷ್ಯ ಮತ್ತು ತುಕಿರ್ಯಯ ನಡುವೆ ಯುದ್ಧ ಪ್ರಾರಂಭವಾಯಿತು. ನಂತರ 1854 ರ ಏಪ್ರಿಲ್‌ನಲ್ಲಿ ರಷ್ಯಾದ ವಿರುದ್ಧ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್ ಈ ಯುದ್ಧದಲ್ಲಿ ತುರ್ಕಿಯ ಪರ ಭಾಗವಹಿಸಿದವು. ಆಂಗ್ಲೊ-ಫ್ರೆಂಚ್ ಸೈನಿಕರು ರಷ್ಯನರ ನೌಕಾ ಕೇಂದ್ರವಾದ ಸೆಬೆಸ್ಟಪೋಲ್ ಮೇಲೆ ದಾಳಿ ಮಾಡಿ ಮುತ್ತಿಗೆ ಹಾಕಿದವು. ಆಸ್ಟ್ರಿಯಾವು ಕೂಡ ರಷ್ಯಾದ ವಿರೋಧ ನಿಲುವನ್ನನುಸರಿಸಿತು. ಅಂತಿಮವಾಗಿ ರಷ್ಯ ಮಿತ್ರ ರಾಷ್ಟ್ರಗಳಿಂದ ಸೋಲನ್ನನುಭವಿಸಿತು. ಆದರೆ ಯುದ್ಧ ನಡೆಯುತ್ತಿದ್ದ ಸಮಯದಲ್ಲೇ 1855 ರ ಮಾರ್ಚಿ ಎರಡರಂದು ಒಂದನೆಯ ನಿಕೊಲಸ್‌ನು ಮರಣವಾದನು. ನಂತರ ಅವನ ಉತ್ತರಾಧಿಕಾರಿ ಎರಡನೆಯ ಅಲೆಕ್ಸಾಂಡರನು 1856 ರ ಮಾರ್ಚಿ ತಿಂಗಳಿನಲ್ಲಿ ಪ್ಯಾರಿಸ್ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಅಂಶಗಳು ರಷ್ಯಾಕ್ಕೆ ಹೆಚ್ಚು ಅನಾನುಕೂಲದಿಂದ ಕೂಡಿದ್ದವು.

### 98.5.3 *ಎರಡನೆಯ ಅಲೆಕ್ಸಾಂಡರ್ (1855-1881)*

ಒಂದನೆಯ ನಿಕೊಲೆಸ್‌ನ ಮರಣಾ ನಂತರ ಅವನ ಮಗ ಎರಡನೆಯ ಅಲೆಕ್ಸಾಂಡರ್ ರಷ್ಯಾದ ಚಕ್ರವರ್ತಿಯಾದನು. ತನ್ನ ತಂದೆಯ ರೀತಿಯೇ ಈತನು ಕೂಡ ಪ್ರತಿಗಾಮಿ. ಆದರೆ ಕ್ರಿಮಿಯ ಯುದ್ಧದಲ್ಲಿ ರಷ್ಯ ಸೋಲನ್ನನುಭವಿಸಿದ ನಂತರ, ಅವನು ರಷ್ಯಾದಲ್ಲಿ ಸುಧಾರಣೆಗಳ ಅಗತ್ಯತೆಯನ್ನು ಅರಿತುಕೊಂಡನು. ಪರಿಸ್ಥಿತಿಯ ಒತ್ತಡದಿಂದಾಗಿ ಅವನು ಸುಧಾರಣೆಗಳನ್ನು ಜಾರಿಗೆ ತರಲೇಬೇಕಾಯಿತು. ಆದುದರಿಂದ ರಷ್ಯಾದ ಇತಿಹಾಸದಲ್ಲಿ ಅವನ ಕಾಲವನ್ನು "ಸುಧಾರಣೆಗಳ ಯುಗ" ವೆಂದು ವರ್ಣಿಸಲಾಗಿದೆ. ಗುಲಾಮಗಿರಿಯ ಪದ್ಧತಿಯ ಬಗ್ಗೆ ಆತನ ತಂದೆ ಒಂದನೆಯ ನಿಕೊಲಸ್‌ನು ಕೂಡ ಗಮನಹರಿಸಿದ್ದನು. ಅವನು ಕೂಡ ಗುಲಾಮಗಿರಿ ಪದ್ಧತಿ ಒಂದು ಸಾಮಾಜಿಕ ಅನಿಷ್ಠ ಎಂದು ಅರಿತಿದ್ದನು. ಅನೇಕ ಬುದ್ಧಿ ಜೀವಿಗಳು ಕೂಡ ಈ ವ್ಯವಸ್ಥೆಯನ್ನು ಖಂಡಿಸಿದರು. ಆಗಿಂದಾಗ್ಗೆ ರೈತರ ದಂಗೆಗಳು ಕಾಣಿಸಿಕೊಂಡವು. ಆದರೆ ಗುಲಾಮಗಿರಿಯ ವಿರುದ್ಧ ನಿಂತಿದ್ದವರು ಶ್ರೀಮಂತರು. ಆದರೆ ಈಗ ಕ್ರಿಮಿಯ ಯುದ್ಧದ ನಂತರ ರಷ್ಯದ ಪರಿಸ್ಥಿತಿಯು ಹದಗೆಟ್ಟಿದುದರಿಂದ ಝಾರ್ ಕ್ರಮಕೈಕೊಳ್ಳಬೇಕಾಗಿತ್ತು. ಎರಡನೆಯ ಅಲೆಕ್ಸಾಂಡರ್ 1861 ರ ಫೆಬ್ರವರಿ ಹತ್ತೊಂಬತ್ತರಂದು ಒಂದು ಮಸೂದೆಯನ್ನು ಹೊರಡಿಸುವುದರ ಮೂಲಕ ಗುಲಾಮಗಿರಿಯನ್ನು ರದ್ದುಪಡಿಸಿದನು. ಆದುದರಿಂದ ಎರಡನೆಯ ಅಲೆಕ್ಸಾಂಡರನಿಗೆ "ಝಾರ್ ವಿಮೋಚನಕಾರ" ಎಂಬ ಬಿರುದನ್ನು ನೀಡಲಾಗಿದೆ. ಬಿಡುಗಡೆ ಹೊಂದಿದ ಗುಲಾಮರಿಗೆ ಭೂಮಿಯನ್ನು ನೀಡಲಾಯಿತು. ಆದರೆ ಅವರಿಗೆ ವೈಯಕ್ತಿಕವಾಗಿ ನೀಡುವುದರ ಬದಲು ಭೂಮಿಯನ್ನು ಗ್ರಾಮ ಸಮೂದಾಯಕ್ಕೆ (Mir) ನೀಡಲಾಯಿತು. ಗುಲಾಮರನ್ನು ಕಳೆದುಕೊಂಡ ಶ್ರೀಮಂತರಿಗೆ ಪರಿಹಾರ ನೀಡಲಾಯಿತು. ಈ ಹಣವನ್ನು ಬಿಡುಗಡೆ ಹೊಂದಿದ ಗುಲಾಮರು 49 ವರ್ಷಗಳಲ್ಲಿ ಕಂತುಗಳಲ್ಲಿ ಸರ್ಕಾರಕ್ಕೆ ಕಟ್ಟಿಕೊಡಬೇಕಾಗಿತ್ತು. ಈ ಹಣವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಸಲ್ಲಿಸುವುದು ಗ್ರಾಮ ಸಮೂದಾಯದ ಕೆಲಸವಾಗಿತ್ತು. ಆದರೆ ಬಂಧ ವಿಮೋಚನ ಕಾಯಿದೆಯಿಂದ ಬಿಡುಗಡೆ ಹೊಂದಿದ ಗುಲಾಮರ ಪರಿಸ್ಥಿತಿಯಲ್ಲಿ ಅಂತಹ ಸುಧಾರಣೆ ಕಂಡುಬರುವುದಿಲ್ಲ. ಏಕೆಂದರೆ ಶ್ರೀಮಂತರ ಒಡೆತನದಿಂದ ಬಿಡುಗಡೆ ಹೊಂದಿದ ಗುಲಾಮರು ಗ್ರಾಮ ಸಮೂದಾಯದ ಒಡೆತನಕ್ಕೆ ಒಪ್ಪಿಸಲ್ಪಟ್ಟರು. ಇದರಿಂದ ಅವರಿಗೆ ಸ್ವಾತಂತ್ರ್ಯ ದೊರಕಿದಂತಾಗಲಿಲ್ಲ. ಭೂಮಿಯನ್ನು ಕೂಡ ವೈಯಕ್ತಿಕವಾಗಿ ನೀಡಲಿಲ್ಲ. ಭೂಮಿಗೆ ತೆರ ಬೇಕಾಗಿದ್ದ ಹಣವು ಕೂಡ ದುಬಾರಿಯಾಗಿತ್ತು. ಈ ಎಲ್ಲಾ ಕಾರಣಗಳಿಂದ ಗುಲಾಮಗಿರಿಯಿಂದ ಬಿಡುಗಡೆ ಹೊಂದಿದ ರೈತರಲ್ಲಿ ಯಾವ ಸುಧಾರಣೆಯು ಕಂಡು ಬರುವುದಿಲ್ಲ.

ಅಲೆಕ್ಸಾಂಡರನ ಕಾಲದ ಅತಿ ಮುಖ್ಯವಾದ ಸುಧಾರಣೆ ಗುಲಾಮಗಿರಿಗೆ ಸಂಬಂಧಿಸಿದುದು ಎಂಬುದರಲ್ಲಿ ಯಾವು ಅನುಮಾನವು ಇಲ್ಲ. ಇದರ ಜೊತೆಗೆ ಇನ್ನೂ ಅನೇಕ ಸುಧಾರಣೆಗಳನ್ನು ಹೊರಡಿಸಿಲಾಯಿತು. ಸ್ಥಳೀಯ ಸಂಸ್ಥೆ, ನ್ಯಾಯಾಂಗ, ವಿದ್ಯಾಭ್ಯಾಸ, ಸೈನ್ಯಕ್ಕೆ ಸಂಬಂಧಿಸಿದಂತೆ ಇನ್ನೂ ಅನೇಕ ಸುಧಾರಣೆಗಳನ್ನು ಝಾರನು ಹೊರಡಿಸಿದನು.

ಎರಡನೆಯ ಅಲೆಕ್ಸಾಂಡರನ ಆಳ್ವಿಕೆಯ ಪ್ರಾರಂಭಕ್ಕೆ ಸಂಬಂಧಿಸಿದಂತೆ ವಿದೇಶಾಂಗ ನೀತಿಯಲ್ಲಿ ಉಂಟಾದ ಘಟನೆ ಎಂದರೆ 1856 ರ ಪ್ಯಾರಿಸ್ ಒಪ್ಪಂದ. ಅವನು ಅಧಿಕಾರಕ್ಕೆ ಬಂದ ಸಮಯದಲ್ಲಿ ಕ್ರಿಮಿಯ ಯುದ್ಧ ಮುಂದುವರಿದಿತ್ತು. ರಷ್ಯ ಯುದ್ಧದಲ್ಲಿ ಸೋಲನ್ನನುಭವಿಸಿದ ಮೇಲೆ ಪ್ಯಾರಿಸ್ ಒಪ್ಪಂದವನ್ನು ಅಲೆಕ್ಸಾಂಡರ್ ಮಾಡಿಕೊಳ್ಳಬೇಕಾಯಿತು. 1856 ರ ಮಾರ್ಚಿ ತಿಂಗಳಿನಲ್ಲಿ ಮಾಡಿಕೊಂಡ ಈ ಒಪ್ಪಂದದ ಪ್ರಕಾರ ಕಪ್ಪು ಸಮುದ್ರವನ್ನು ತಟಸ್ಥ್ಯಗೊಳಿಸಲಾಯಿತು. ಕಪ್ಪು ಸಮುದ್ರದಲ್ಲಿ ರಷ್ಯಾದ ಯುದ್ಧ ನೌಕೆಗಳು ಯಾನ ಮಾಡದಂತೆ ನಿಷೇಧಿಸಲಾಯಿತು. ಬೆಸ್ಸಾರ್ಬಿಯಾದ ಒಂದು ಭಾಗವನ್ನು ಕೂಡ ರಷ್ಯ ಕಳೆದುಕೊಂಡಿತು. ಆದುದರಿಂದ ಕ್ರಿಮಿಯಾ ಯುದ್ಧದಿಂದಾಗಿ ಭಾರಿ ಹಿನ್ನಡೆ ಉಂಟಾಯಿತು. ಆದರೆ ಯೂರೋಪಿನಲ್ಲಿ ರಾಜಕೀಯ ಪರಿಸ್ಥಿತಿ ಬದಲಾವಣೆಯಾದಂತೆ ರಷ್ಯ ಪ್ಯಾರಿಸ್ ಒಪ್ಪಂದದ ಅಂಶಗಳನ್ನು ತೊಡೆದು ಹಾಕಲು ಪ್ರಯತ್ನಿಸಿತು.

1870-1871 ರಲ್ಲಿ ಫ್ರಾಂಕೊ-ಪ್ರಷ್ಯನ್ ಯುದ್ಧ ನಡೆದ ಸಮಯದಲ್ಲಿ ಕಪ್ಪು ಸಮುದ್ರಕ್ಕೆ ಸಂಬಂಧಿಸಿದ ಪ್ಯಾರಿಸ್ ಒಪ್ಪಂದದ ಅಂಶಗಳನ್ನು ಕಿತ್ತೊಗೆಯಿತು.

ಕ್ರಿಮಿಯಾ ಯುದ್ಧದ ನಂತರ ಸುಮಾರು ಇಪ್ಪತ್ತು ವರ್ಷಗಳ ಕಾಲ ಬಾಲ್ಕನ್ ಸಮಸ್ಯೆಯಲ್ಲಿ ರಷ್ಯ ಹಸ್ತಕ್ಷೇಪ ಮಾಡಲಿಲ್ಲ. 1875 ರ ವೇಳೆಗೆ ಪುನಃ ಬಾಲ್ಕನ್ ರಾಜ್ಯಗಳನ್ನು ತುರ್ಕಿಯ ರಾಜಕೀಯ ಮತ್ತು ಧಾರ್ಮಿಕ ಹಿಡಿತದಿಂದ ಬಿಡಿಸಲು ಸಮಸ್ತ ಸ್ಲಾವ್ ಸಂಘಟನಾ ಚಳವಳಿಯನ್ನು ರಷ್ಯ ಪ್ರಾರಂಭಿಸಿತು. ಆದುದರಿಂದಾಗಿ ರಾಷ್ಟ್ರೀಯ ಚಳವಳಿ ಬಾಲ್ಕನ್ ರಾಜ್ಯಗಳಲ್ಲಿ ಪ್ರಾರಂಭವಾಯಿತು. ತುರ್ಕಿಯ ವಿರುದ್ಧ ಅನೇಕ ಬಾಲ್ಕನ್ ರಾಜ್ಯಗಳು ದಂಗೆ ಎದ್ದವು. ಸರ್ಬಿಯಾ ಮತ್ತು ಮಾಂಟಿನಿಗ್ರೊಗಳಲ್ಲಿ ದಂಗೆ ಪ್ರಾರಂಭವಾದವು. ಅನಂತರ ಬಲ್ಗೇರಿಯಾದ ಜನರು ದಂಗೆ ಎದ್ದರು. ಅನೇಕ ಬಾಲ್ಕನ್ ರಾಜ್ಯಗಳು ತುರ್ಕಿಯ ವಿರುದ್ಧ ಯುದ್ಧವನ್ನು ಘೋಷಿಸಿದವು. ಬಾಲ್ಕನ್ ರಾಜ್ಯಗಳನ್ನು ಸೋಲಿಸಿ, ದಂಗೆಗಳನ್ನು ಹತ್ತಿಕ್ಕಿ ತುರ್ಕಿಯ ಸುಲ್ತಾನನು ತನ್ನ ದಮನಕಾರಿ ನೀತಿಯನ್ನು ಮುಂದುವರಿಸಿದ್ದನು. ಇಂತಹ ಸಮಯದಲ್ಲಿ ಬಾಲ್ಕನ್ ರಾಜ್ಯಗಳನ್ನು ಕಾಪಾಡಲು ತುರ್ಕಿಯ ವಿರುದ್ಧ ರಷ್ಯ ಯುದ್ಧವನ್ನೇ ಸಾರಿತು. ಈ ರೀತಿಯಾಗಿ 1877-1878 ರಲ್ಲಿ ರಷ್ಯ-ತುರ್ಕಿಯ ನಡುವೆ ಯುದ್ಧ ನಡೆಯಿತು. ಆ ಯುದ್ಧದಲ್ಲಿ ಅಂತಿಮವಾಗಿ ತುರ್ಕಿ ಸೋಲನ್ನನುಭವಿಸಿ ರಷ್ಯಾದೊಡನೆ ಸ್ಯಾನ್‌ಸ್ಟಿಫಾನೊ ಒಪ್ಪಂದವನ್ನು 1878 ರ ಮಾರ್ಚಿ ತಿಂಗಳಲ್ಲಿ ಮಾಡಿಕೊಂಡಿತು. ಈ ಒಪ್ಪಂದವು ವಿಶಾಲ ಹಾಗೂ ಸ್ವಾಯತತ್ತ ಬಲ್ಗೇರಿಯ ರಾಜ್ಯವನ್ನು ಸೃಷ್ಟಿಸಿತು. ರಷ್ಯಾಕ್ಕೆ ಈ ಒಪ್ಪಂದದಲ್ಲಿ ಬಾಟುಮ್, ಅರ್ಧಹಾನ್ ಮತ್ತು ಬೆಸ್ಸಾಬಿಯಾಗಳನ್ನು ನೀಡಲಾಯಿತು. ತುರ್ಕಿಯು ಸರ್ಬಿಯಾ, ಮಾಂಟಿನಿಗ್ರೊ ಮತ್ತು ರುಮೇನಿಯಕ್ಕೆ ಸ್ವಾತಂತ್ರ್ಯ ನೀಡಿತು. ಆದರೆ ಸ್ಯಾನ್ ಸ್ಟಿಫಾನೊ ಒಪ್ಪಂದದ ಅಂಶಗಳು ಬಹಳ ಕಾಲ ಮುಂದುವರಿಯಲಿಲ್ಲ. ಪ್ರಬಲ ರಾಷ್ಟ್ರಗಳಾದ ಗ್ರೇಟ್ ಬ್ರಿಟನ್, ಫ್ರಾನ್ಸ್ ಮತ್ತು ಆಸ್ಟ್ರಿಯ ಪೌರ್ವಾತ್ಯ ಸಮಸ್ಯೆ ಅಂತರರಾಷ್ಟ್ರೀಯ ಸಮಸ್ಯೆ ಆದುದರಿಂದ ರಷ್ಯ ಒಂದೇ ತೀರ್ಮಾನ ತೆಗೆದುಕೊಂಡು ತುರ್ಕಿಯೊಡನೆ ಒಪ್ಪಂದ ಮಾಡಿಕೊಳ್ಳಲು ಸಾಧ್ಯವಿಲ್ಲವೆಂದು ಹೆದರಿಸಿದವು. ಆಗ ರಷ್ಯ ಈ ರಾಷ್ಟ್ರಗಳ ವಿರುದ್ಧ ಏಕಾಂಗಿಯಾಗಿ ಯುದ್ಧ ಮಾಡಲು ಸಾಧ್ಯವಿಲ್ಲವೆಂದು ಭಾವಿಸಿ, ಸ್ಯಾನ್‌ಸ್ಟಿಫಾನೊ ಒಪ್ಪಂದವನ್ನು ಪರಿಷ್ಕರಿಸಲು ಸಮ್ಮತಿಯನ್ನು ಸೂಚಿಸಿತು. ಇದರ ಫಲವಾಗಿ 1878 ರಲ್ಲಿ ಬರ್ಲಿನ್ ಸಮ್ಮೇಳನ ನಡೆದು ಒಂದು ಹೊಸ ಒಪ್ಪಂದವನ್ನು ಯೂರೋಪಿನ ಎಲ್ಲ ರಾಜ್ಯಗಳು ಸೇರಿ ಮಾಡಿಕೊಂಡವು. ಇದೇ ಬರ್ಲಿನ್ ಒಪ್ಪಂದ. ಇದರ ಅಧ್ಯಕ್ಷತೆಯನ್ನು ವಹಿಸಿದ್ದವನು ಜರ್ಮನಿಯ ಛಾನ್ಸಲರ್ ಬಿಸ್ಮಾರ್ಕ್. ಬರ್ಲಿನ್ ಸಮ್ಮೇಳನದಲ್ಲಿ ವಿಸ್ತಾರವಾದ ಬಲ್ಗೇರಿಯವನ್ನು ಹಂಚಲಾಯಿತು. ಸರ್ಬಿಯ ಮತ್ತು ಮಾಂಟಿನಿಗ್ರೊಗಳ ಅಧಿಕಾರವು ಕುಂಠಿತಗೊಂಡಿತು. ಬಿಸ್ಮಾರ್ಕ್‌ನು ಆಸ್ಟ್ರಿಯ-ಹಂಗೇರಿಯ ಪರವಾಗಿ ನಿಂತನು. ಇದರಿಂದ ರಷ್ಯಾಕ್ಕೆ ಹೆಚ್ಚು ನಿರಾಶೆಯಾಯಿತು. ಎರಡನೆಯ ಅಲೆಕ್ಸಾಂಡರನು ತನ್ನ ವಿದೇಶಾಂಗ ನೀತಿಯಲ್ಲಿ ಸಂಪೂರ್ಣವಾಗಿ ವಿಫಲನಾದನು ಎಂಬುದು ಮೇಲಿನ ವಿವರಣೆಯಿಂದ ಮನದಟ್ಟಾಗುತ್ತದೆ.

## 98.6 ಸಂಕ್ಷಿಪ್ತ ಅವಲೋಕನ

ಸಂಸತ್ತಿನ ಸುಧಾರಣೆಗೆ ಸಂಬಂಧಿಸಿದ 1832 ಮತ್ತು 1867 ರ ಮಸೂದೆಗಳು ಇಂಗ್ಲೆಂಡಿನಲ್ಲಿ ಹೆಚ್ಚು ಜನರಿಗೆ ಮತ ಹಾಕುವ ಹಕ್ಕನ್ನು ವಿಸ್ತರಿಸಿದವು. 1833 ರ ಮಸೂದೆಯು ಇಂಗ್ಲೆಂಡಿನಲ್ಲಿ ಗುಲಾಮಗಿರಿಯ ಪದ್ಧತಿಯನ್ನು ರದ್ದುಪಡಿಸಿತು. 1833 ರ ಕಾಯಿದೆಯು ಹತ್ತಿ ಮತ್ತು ಉಣ್ಣೆ ಬಟ್ಟೆಗಳನ್ನು ತಯಾರಿಸುವ ಗಿರಣಿಗಳಲ್ಲಿ ಮಕ್ಕಳನ್ನು ನೇಮಿಸಿಕೊಳ್ಳದಂತೆ ನಿಷೇದಿಸಿತು. 1846 ರಲ್ಲಿ ಕಾರ್ನ್ ಲಾ ವನ್ನು ರದ್ದುಪಡಿಸುವುದರ ಮೂಲಕ ಮುಕ್ತ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಲಾಯಿತು. 1842 ರ ಕಾಯಿದೆಯು ಬಾಲಕಿಯರು ಮತ್ತು ಸ್ತ್ರೀಯರು ಗಣಿಗಳಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವುದನ್ನು ತಡೆಗಟ್ಟಿತು. ಇಂಗ್ಲೆಂಡ್ ಯೂರೋಪಿಯನ್ ಒಕ್ಕೂಟದ ಸದಸ್ಯನಾಗಿ ಅನೇಕ ಸಮ್ಮೇಳನಗಳಲ್ಲಿ ಭಾಗವಹಿಸಿ ಅಂತರ ರಾಷ್ಟ್ರೀಯ ಸಮಸ್ಯೆಗಳನ್ನು

ಬಗೆಹರಿಸಿತು. ಆದರೆ ಭಿನ್ನಾಭಿಪ್ರಾಯಗಳಿಂದಾಗಿ ಇಂಗ್ಲೆಂಡ್ 1821 ರ ನಂತರ ಯೂರೋಪಿಯನ್ ಒಕ್ಕೂಟದಿಂದ ಹಿಂದೆ ಸರಿಯಿತು. ರಷ್ಯಾವು ಆಟೋಮನ್ ಸಾಮ್ರಾಜ್ಯದಲ್ಲಿ ತನ್ನ ಪ್ರಭಾವವನ್ನ ಹೆಚ್ಚಿಸಿಕೊಳ್ಳದಂತೆ ಇಂಗ್ಲೆಂಡ್ ಅದನ್ನು ತಡೆಗಟ್ಟುವುದರಲ್ಲಿ ಯಶಸ್ವಿಯಾಯಿತು. ತುರ್ಕಿಯ ಸಾಮ್ರಾಜ್ಯದ ಪರವಾಗಿ ಕ್ರಿಮಿಯಾ ಯುದ್ಧದಲ್ಲಿ ಭಾಗವಹಿಸಿ ರಷ್ಯಾವನ್ನು ಸದೆ ಬಡಿಯಿತು.

1814 ರಲ್ಲಿ ಹದಿನೆಂಟನೆಯ ಲೂಯಿ ಫ್ರಾನ್ಸಿನ ಸಿಂಹಾಸನವನ್ನಲಂಕರಿಸಿದನು. 1814 ರಲ್ಲಿ ಈತನು ಸಂವಿಧಾನ ಸನ್ನದನ್ನು ಜನರಿಗೆ ನೀಡಿದನು. ಅವನ ಆಳ್ವಿಕೆಯ ಕಾಲದಲ್ಲಿ ಉಗ್ರ ರಾಜ ಪ್ರಭುತ್ವ ವಾದಿಗಳ ಮತ್ತು ಮಂದಗಾಮಿ ಸಂಪ್ರದಾಯಸ್ಥರ ನಡುವೆ ಸರ್ಕಾರವನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಲು ಪೈಪೋಟಿ ನಡೆಯಿತು. ಹದಿನೆಂಟನೆಯ ಲೂಯಿಯ ನಂತರ ಹತ್ತನೆಯ ಚಾರ್ಲ್ಸ್ ಅಧಿಕಾರಕ್ಕೆ ಬಂದನು. ಈತನು ಉಗ್ರ ರಾಜಪ್ರಭುತ್ವ ವಾದಿಗಳ ಪರವಾಗಿದ್ದನು. ಆದುದರಿಂದ 1830 ರ ಕ್ರಾಂತಿಯು ನಡೆಯಿತು. ಅವನು ತನ್ನ ಅಧಿಕಾರ ಕಳೆದುಕೊಂಡನು. ಅನಂತರ ಲೂಯಿ ಫಿಲಿಪ್ಪನು ರಾಜನಾದನು. ಈತನು ಉದಾರತೆಯಿಂದ ಕೂಡಿದ್ದ ಅರಸನಾಗಿದ್ದನು. ಆದಾಗ್ಯೂ ಕೂಡ ಈತನ ಉದಾರ ನೀತಿಗಳಿಂದ ಜನರು ತೃಪ್ತರಾಗಲಿಲ್ಲ. ಆದುದರಿಂದ 1848ರಲ್ಲಿ ಫ್ರಾನ್ಸಿನಲ್ಲಿ ಮತ್ತೊಂದು ಕ್ರಾಂತಿ ನಡೆಯಿತು. ಈ ಕ್ರಾಂತಿಯ ನಂತರ ಎರಡನೆಯ ಗಣರಾಜ್ಯ ಸ್ಥಾಪಿಸಲ್ಪಟ್ಟಿತು. ಲೂಯಿ ನೆಪೋಲಿಯನ್ನನು ಗಣರಾಜ್ಯದ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟನು. ಅಧ್ಯಕ್ಷನ ಅವಧಿ ನಾಲ್ಕು ವರ್ಷಗಳು ಮಾತ್ರ. ಆದರೆ ಲೂಯಿ ನೆಪೋಲಿಯನ್ನನು ನಾಲ್ಕು ವರ್ಷಗಳ ಅಂತ್ಯದ ವೇಳೆಗೆ ಒಂದು ಕ್ಷಿಪ್ರ ಕ್ರಾಂತಿಯನ್ನು ನಡೆಸಿ 1852 ರಲ್ಲಿ ತಾನೇ ಫ್ರಾನ್ಸಿನ ಚಕ್ರವರ್ತಿ ಎಂದು ಘೋಷಿಸಿಕೊಂಡನು. ನಂತರ ಮೂರನೇ ನೆಪೋಲಿಯನ್ ಎಂಬ ಬಿರುದನ್ನು ಧರಿಸಿಕೊಂಡನು. ಸುಮಾರು ಇಪ್ಪತ್ತು ವರ್ಷಗಳ ಕಾಲ ಅವನು ಫ್ರಾನ್ಸಿನ ಚಕ್ರವರ್ತಿಯಾಗಿದ್ದನು. ಮೆಟರ್ನಿಕ್‌ನ ಪತನಾ ನಂತರ ಮೂರನೆಯ ನೆಪೋಲಿಯನ್ ಯೂರೋಪಿನ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸಿದನು. ಆದರೆ ಅವನ ಆಳ್ವಿಕೆಯು 1870-1871 ರಲ್ಲಿ ನಡೆದ ಫ್ರಾಂಕೋ-ಪ್ರಷ್ಯನ್ ಯುದ್ಧದಲ್ಲಿ ಫ್ರಾನ್ಸ್ ಸೋಲನ್ನನುಭವಿಸಿದ ಮೇಲೆ ನೆಪೋಲಿಯನ್ನನ ಆಳ್ವಿಕೆ ಕೊನೆಗೊಂಡಿತು. ಅನಂತರ ಮೂರನೇ ಗಣರಾಜ್ಯವು ಸ್ಥಾಪಿಸಲ್ಪಟ್ಟಿತು.

ಮೆಟರ್ನಿಕ್‌ನು 1809 ರಿಂದ 1848 ರವರೆಗೆ ಆಸ್ಟ್ರಿಯಾದ ಛಾನ್ಸಲರ್ ಆಗಿದ್ದನು. ಅವನು ಯೂರೋಪಿನ ರಾಜಕೀಯ ರಂಗದಲ್ಲಿ 1815 ರಿಂದ 1848 ರವರೆಗೆ ಬಹಳ ಪ್ರಮುಖ ಪಾತ್ರ ವಹಿಸಿದ್ದನು. ಪ್ರತಿಗಾಮಿ ಆಳ್ವಿಕೆಯನ್ನು ಆಸ್ಟ್ರಿಯಾದಲ್ಲಿ ಸ್ಥಾಪಿಸಿದನು. ಅನಂತರ ಪ್ರತಿಗಾಮಿ ಆಳ್ವಿಕೆಯನ್ನು ಇತರ ಯೂರೋಪಿಯನ್ ರಾಜ್ಯಗಳಲ್ಲೂ ಕೂಡ ಸುಮಾರು ಮೂವತ್ತು ವರ್ಷಗಳ ಕಾಲ ಸ್ಥಾಪಿಸುವುದರಲ್ಲಿ ಯಶಸ್ವಿಯಾದನು. ಕ್ರಾಂತಿಗಳನ್ನು ಹತ್ತಿಕ್ಕಿ ಯೂರೋಪಿನಲ್ಲಿ ರಾಜತ್ವದ ಹಿತಾಸಕ್ತಿಗಳನ್ನು ಕಾಪಾಡುವ ದೃಷ್ಟಿಯಿಂದ ಯೂರೋಪಿನ ಒಕ್ಕೂಟವನ್ನೂ ಸ್ಥಾಪಿಸಿ ಅದರಲ್ಲಿ ಪ್ರಮುಖ ಪಾತ್ರ ವಹಿಸಿದನು. 1848 ರಲ್ಲಿ ಆಸ್ಟ್ರಿಯಾದಲ್ಲಿ ಕ್ರಾಂತಿ ಸಂಭವಿಸಿದಾಗ ಇಂಗ್ಲೆಂಡಿಗೆ ಪಲಾಯನ ಮಾಡಿದನು. ಅನಂತರ ಆಸ್ಟ್ರಿಯಾವು 1859 ರಲ್ಲಿ ಪೀಡ್‌ಮಾಂಟ್‌ನಿಂದ ಮತ್ತು 1866 ರಲ್ಲಿ ಪ್ರಷ್ಯಾದಿಂದ ಸೋಲನ್ನನುಭವಿಸಿತು. ಇದರ ಪರಿಣಾಮವಾಗಿ ಆಸ್ಟ್ರಿಯ ಅನೇಕ ಪ್ರದೇಶಗಳನ್ನು ಕಳೆದುಕೊಂಡಿತು. ಇದಾದನಂತರ ಆಸ್ಟ್ರಿಯಾದ ಚಕ್ರವರ್ತಿ ಹಂಗೇರಿಯೊಡನೆ 1867 ರಲ್ಲಿ ರಾಜಿ ಒಪ್ಪಂದವನ್ನು ಮಾಡಿಕೊಂಡನು. ಈ ರೀತಿಯಾಗಿ ಆಸ್ಟ್ರೋ-ಹಂಗೇರಿಯನ್ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದು 1918 ರವರೆಗೆ ಮುಂದುವರಿಯಿತು.

ರಷ್ಯಾದಲ್ಲಿ ಝಾರ್ ದೊರೆಗಳ ನಿರಂಕುಶ ಆಡಳಿತ ಮುಂದುವರಿಯಿತು. ಆದರೆ ಕ್ರಿಮಿಯಾ ಯುದ್ಧದ ಸೋಲಿನಿಂದಾಗಿ ಪರಿಸ್ಥಿತಿ ರಷ್ಯಾದಲ್ಲಿ ಹದಗೆಟ್ಟಿತು. ರೈತರ ದಂಗೆಗಳು ಹೆಚ್ಚಾದವು. ಪರಿಸ್ಥಿತಿಯು ಹದಗೆಡುವುದನ್ನು ಗಮನಿಸಿದ ಎರಡನೆಯ ಅಲೆಕ್ಸಾಂಡರ್ ಅನೇಕ ಸುಧಾರಣೆಗಳನ್ನು ಜಾರಿಗೆ ತಂದನು. 1861 ರ ಬಂಧ ವಿಮೋಚನಾ ಕಾಯಿದೆಯನ್ನು ಹೊರಡಿಸಿ 'ಗುಲಾಮಗಿರಿ

ಪದ್ಧತಿಯನ್ನು ರದ್ದುಪಡಿಸಿದನು. ಅದೇ ರೀತಿ ಸ್ಥಳೀಯ ಸರ್ಕಾರ, ವಿದ್ಯಾಭ್ಯಾಸ, ನ್ಯಾಯಾಂಗ ಮತ್ತು ಸೈನ್ಯಕ್ಕೆ ಸಂಬಂಧಿಸಿದ ಸುಧಾರಣೆಗಳು ಜಾರಿಗೆ ಬಂದವು. ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ 1854-1856 ರಲ್ಲಿ ನಡೆದ ಕ್ರಿಮಿಯಾ ಯುದ್ಧದಲ್ಲಿ ರಷ್ಯ ಅಪಮಾನಕರವಾದ ಸೋಲನ್ನನುಭವಿಸಿತು. ಅನಂತರ 1856 ರಲ್ಲಿ ಮಾಡಿಕೊಂಡ ಪ್ಯಾರಿಸ್ ಒಪ್ಪಂದದಿಂದಾಗಿ ರಷ್ಯ ಕಪ್ಪು ಸಮುದ್ರದ ಮೇಲೆ ತನ್ನ ಸ್ವಾಮ್ಯವನ್ನು ಕಳೆದುಕೊಂಡಿತು ಹಾಗೂ ಅನೇಕ ಪ್ರದೇಶಗಳನ್ನು ಬಿಟ್ಟು ಕೊಡಬೇಕಾಯಿತು.

## 98.7 ಕ್ಲಿಷ್ಟ ಪದಗಳ ಅರ್ಥ

ಕೌಂಟಿ - ಪ್ರಾಂತ್ಯ

ಬರೊ - ಪೌರಸಂಸ್ಥೆಯುಳ್ಳ ಪಟ್ಟಣ

ಕೌಂಟ್ - ಒಂದು ಪ್ರಾಂತ್ಯದ ಮುಖ್ಯಸ್ಥ

ಡಚಿ - ಒಂದು ಸಂಸ್ಥಾನ (ಪ್ರಾಂತ್ಯ)

## 98.8 ಮಾದರಿ ಪ್ರಶ್ನೆಗಳು

1. 1815 ರ ನಂತರ ಇಂಗ್ಲೆಂಡಿನಲ್ಲಿ ಜಾರಿಗೆ ತಂದ ಸುಧಾರಣೆಗಳನ್ನು ಕುರಿತು ಬರೆಯಿರಿ.

...............................................................................................

...............................................................................................

...............................................................................................

2. 1830 ಮತ್ತು 1848 ರಲ್ಲಿ ಫ್ರಾನ್ಸಿನಲ್ಲಿ ಕ್ರಾಂತಿಗಳು ಸಂಭವಿಸಲು ಕಾರಣವಾದ ಘಟನೆಗಳನ್ನು ವಿವರಿಸಿ ಮತ್ತು ಯೂರೋಪಿನ ಮೇಲೆ ಈ ಕ್ರಾಂತಿಗಳ ಪ್ರಭಾವವನ್ನು ವಿವರಿಸಿ.

...............................................................................................

...............................................................................................

...............................................................................................

3. 1815 ರಿಂದ 1848 ರವರೆಗೆ ಯೂರೋಪಿನಲ್ಲಿ ಮೆಟರ್ನಿಕ್‌ನ ಪಾತ್ರವನ್ನು ವಿವರಿಸಿ.

...............................................................................................

...............................................................................................

...............................................................................................

4. 1815 ರಿಂದ 1870ರವರೆಗೆ ರಷ್ಯಾದಲ್ಲಿ ಝಾರ್ ದೊರೆಗಳ ಆಳ್ವಿಕೆಯನ್ನು ಕುರಿತು ವಿಮರ್ಶಾತ್ಮಕವಾಗಿ ಬರೆಯಿರಿ.

..........................................................................................

..........................................................................................

..........................................................................................

## 98.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


Ergang, R. and Donald G. Rohr - **Europe Since Waterloo,** Delhi, 1981

Carlton J.H. Hayes, Marshall Whithed Baldwin, and Charles Woolsly Cole - **History of Europe,** Newyork,1956

Dalal, B.P - **Russia in 20th Century,** Bombay, 1978

Hazen, C.D. - **Modern Europe upto 1945,** New Delhi, 1979

Ketelbey, C.D.M. - **A History of Modern Times from 1789,** Bombay, 1976



ಪ್ರೊ. ಶಿವಣ್ಣ


EUROPE
IN 1815
RUSSIAN EMPIRE
POLAND
KINGDOM OF PRUSSIA
SAXONY
CONFEDERATION
AUSTRIAN
EMPIRE
FRANCE
SWITZ
LOM
KINGDOM OF SARDINIA
PAPAL STATES
TUS
CORSICA
KINGDOM
of the
BOSNIA
OTTOMAN
EMPIRE
SPAIN
PORTUGAL
Atlantic Ocean
Mediterranean Sea
Adriatic Sea
Black Sea

## ಬ್ಲಾಕ್ - 1

## ಘಟಕ - 99 ಪೌರ್ವಾತ್ಯ ಪ್ರಶ್ನೆ : 1871 ರವರೆಗಿನ ಬೆಳವಣಿಗೆಗಳು

ರಚನೆ


**99.0** ಉದ್ದೇಶಗಳು

**99.1** ಪೀಠಿಕೆ

**99.2** ಸರ್ಬಿಯ ದಂಗೆ

**99.3** ಗ್ರೀಕರ ಸ್ವಾತಂತ್ರ್ಯ ಹೋರಾಟ

**99.3.1** ಕಾರಣಗಳು

**99.3.2** ರಷ್ಯಾದ ಹಸ್ತಕ್ಷೇಪ

**99.3.3** ಆಡ್ರಿಯಾನೊಪಲ್ ಒಪ್ಪಂದದ ಅಂಶಗಳು

**99.4** ಸಿರಿಯನ್ ಪ್ರಶ್ನೆ

**99.4.1** ಅಂಕೈರ್ ಸ್ಕೆಲೆಸ್ಸಿ ಒಪ್ಪಂದ

**99.4.2** 1841ರ ಲಂಡನ್ ಒಪ್ಪಂದ

**99.5** ಕ್ರಿಮಿಯ ಯುದ್ಧ

**99.5.1** ಕಾರಣಗಳು

**99.5.2** ಯುದ್ಧದ ಪ್ರಾರಂಭ

**99.5.3** ಯುದ್ಧದ ಗತಿ

**99.5.4** ಪ್ಯಾರಿಸ್ ಒಪ್ಪಂದ (1856)

**99.5.5** ಯುದ್ಧದ ಫಲಿತಾಂಶಗಳು

**99.6** ನಾವು ಘಟಕ ಸಾರಾಂಶವನ್ನು ಅವಲೋಕಿಸೋಣ

**99.7** ಕ್ಲಿಷ್ಟ ಪದಗಳ ಅರ್ಥ

**99.8** ಮಾದರಿ ಪ್ರಶ್ನೆಗಳು

**99.9** ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು

## 99.0 ಉದ್ದೇಶಗಳು

ಈ ಘಟಕದ ಅಧ್ಯಯನದಿಂದ ನಾವು ತಿಳಿದುಕೊಳ್ಳುವ ಅಂಶಗಳೆಂದರೆ :

- ಪೌರ್ವಾತ್ಯ ಸಮಸ್ಯೆಯ ಅರ್ಥ
- ಬಲಿಷ್ಠರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರಿಯ ಮತ್ತು ರಷ್ಯಾಗಳ ಹಿತಾಸಕ್ತಿಗಳು
- ಬಾಲ್ಕನ್ ರಾಜ್ಯಗಳ ಅತೃಪ್ತಿ
- 1821 ರಿಂದ 1829 ರವರೆಗೆ ನಡೆದ ಗ್ರೀಕರ ಸ್ವಾತಂತ್ರ್ಯ ಸಂಗ್ರಾಮ
- ಪೌರ್ವಾತ್ಯ ಸಮಸ್ಯೆಯಲ್ಲಿ ರಷ್ಯಾದ ಪ್ರಭಾವ ಮತ್ತು1833 ಅಂಕೈರ್ ಸ್ಕೆಲೆಸ್ಸಿ ಒಪ್ಪಂದ (Unkair Skelessi)
- ಕ್ರಿಮಿಯಾ ಯುದ್ಧಕ್ಕೆ ಕಾರಣಗಳು
- ತುರ್ಕಿಯ ಪರವಾಗಿ ಕ್ರಿಮಿಯಾ ಯುದ್ಧದಲ್ಲಿ ಹೋರಾಡಿದ ಇಂಗ್ಲೆಂಡ್, ಫ್ರಾನ್ಸ್ ಮತ್ತು ಸಾರ್ಡೀನಿಯ
- ಕ್ರಿಮಿಯಾ ಯುದ್ಧದಲ್ಲಿ ಆಸ್ಟ್ರಿಯ ಮತ್ತು ಪ್ರಷ್ಯಾದ ನಿಲುವು
- ಕ್ರಿಮಿಯಾ ಯುದ್ಧದ ಪ್ರಮುಖ ಕದನಗಳು
- 1856 ರ ಪ್ಯಾರಿಸ್ ಒಪ್ಪಂದದ ಅಂಶಗಳು
- ಯುದ್ಧದ ಫಲಿತಾಂಶಗಳು

## 99.1 ಪೀಠಿಕೆ

ಯುರೋಪಿನಲ್ಲಿ ತುರ್ಕಿಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ 'ಪೌರ್ವಾತ್ಯ ಸಮಸ್ಯೆ' ಎಂಬ ಪದದ ಬಳಕೆಯು ಮೊದಲನೆ ಬಾರಿಗೆ 1815ರ ವಿಯೆನ್ನ ಕಾಂಗ್ರೆಸ್‌ನಲ್ಲಿ ಉಲ್ಲೇಖಿಸಲ್ಪಟ್ಟಿತು. ತುರ್ಕಿಯು ಹದಿನೈದನೆಯ ಶತಮಾನದ ವೇಳೆಗೆ ಒಂದು ಪ್ರಬಲ ಸಾಮ್ರಾಜ್ಯವನ್ನು ನಿರ್ಮಿಸಿ ಯುರೋಪಿನ ಬಾಲ್ಕನ್ ರಾಜ್ಯಗಳನ್ನು ಹಾಗೂ ಕಪ್ಪು ಸಮುದ್ರದ ಸುತ್ತುಮುತ್ತಲೂ ಇದ್ದ ಹಲವು ಪ್ರದೇಶಗಳ ಮೇಲೆ ತನ್ನ ಅಧಿಕಾರವನ್ನು ಸ್ಥಾಪಿಸಿತ್ತು. ತುರ್ಕಿಯು ಒಂದು ಪ್ರಬಲ ಸಾಮ್ರಾಜ್ಯವಾಗಿ ಅಧಿಕಾರದಲ್ಲಿ ಮುಂದುವರಿಯುವವರೆಗೆ, ಯುರೋಪಿಯನ್ ರಾಜ್ಯಗಳು ಬಾಲ್ಕನ್ ರಾಜ್ಯಗಳಿಗೆ ಸಂಬಂಧಿಸಿದಂತೆ ಯಾವ ಸಮಸ್ಯೆಯನ್ನು ಎದುರಿಸಲಿಲ್ಲ. ಆದರೆ ಹದಿನೆಂಟನೆಯ ಶತಮಾನದ ಅಂತ್ಯದ ವೇಳೆಗೆ ತುರ್ಕಿಯ ಸಾಮ್ರಾಜ್ಯ ಅವನತಿ ಪ್ರಾರಂಭವಾದುದರಿಂದ ಅದರ ವಶದಲ್ಲಿದ್ದ ವಿವಿಧ ರಾಷ್ಟ್ರೀಯತೆಗೆ ಸೇರಿದ್ದ ರಾಜ್ಯಗಳು ಸ್ವಾತಂತ್ರ್ಯಗಳಿಸಿಕೊಳ್ಳುವುದರ ಕಡೆ ಗಮನ ಹರಿಸಿದವು. ಗ್ರೀಕರ, ಸರ್ಬಿಯನ್‌ರ, ರುಮೇನಿಯನ್ನರ, ಬಲ್ಗೇರಿಯನ್ನರ ಮತ್ತು ಸ್ಲಾವ್ ರಾಷ್ಟ್ರೀಯನ್ನರ ದಂಗೆಗಳು ಯುರೋಪಿಯನ್ ರಾಷ್ಟ್ರಗಳಿಗೆ ಗಂಭೀರ ಸಮಸ್ಯೆಗಳನ್ನೊಡ್ಡಿದವು. ಈ ಬಾಲ್ಕನ್ ರಾಜ್ಯಗಳಲ್ಲಿ ದಂಗೆಗಳನ್ನು ಅಡಗಿಸಿ ಶಾಂತಿಯನ್ನು ಸ್ಥಾಪಿಸುವುದರಲ್ಲಿ ತುರ್ಕಿಯು ವಿಫಲವಾಯಿತು. ತುರ್ಕಿಯು ಒಂದು ದುರ್ಬಲ ಸಾಮ್ರಾಜ್ಯವಾಗಿದ್ದು, ಅದು ಯುರೋಪಿನ ರಾಜತಾಂತ್ರಿಕ ಆಟದಲ್ಲಿ ಒಂದು ದಾಳವಾಯಿತು."ತುರ್ಕಿಯ ಸಮಸ್ಯೆಯು ಕ್ಲಿಷ್ಟ ಸ್ವರೂಪದಂತದಾಗಿದ್ದು ಅದು ಆಗಿಂದಾಗ್ಗೆ ಯುರೋಪಿಯನ್ ರಾಷ್ಟ್ರಗಳ ನಡುವೆ ಅಸೂಯೆ ಮತ್ತು ಮತ್ಸರವನ್ನುಂಟು ಮಾಡಿತು"ಎಂಬುದಾಗಿ ಜೆ.ಎ.ಆರ್. ಮ್ಯಾರಿಯೆಟ್ ಅವರು ಅಭಿಪ್ರಾಯಪಟ್ಟಿದ್ದಾರೆ. ಯುರೋಪಿಯನ್ ರಾಷ್ಟ್ರಗಳು ತುರ್ಕಿಯಲ್ಲಿ ಆಸಕ್ತಿ ಹೊಂದಲು ಕಾರಣವೇನೆಂದರೆ ಅದು ಪೂರ್ವ ದೇಶಗಳಿಗೆ ಹೋಗಲು ಒಂದು ಬೀಗದ ಎಸಳಿನಂತಿತ್ತು. ರಷ್ಯಾವು ತುರ್ಕಿ ಸಾಮ್ರಾಜ್ಯದ ಪತನದಲ್ಲಿ ಆಸಕ್ತಿ ತಳೆದಿತ್ತು. ಏಕೆಂದರೆ ಪತನದ ನಂತರ ಅನೇಕ ಬಾಲ್ಕನ್ ರಾಜ್ಯಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಬೇಕೆಂಬ ಮಹದಾಸೆಯನ್ನು ಹೊಂದಿತ್ತು. ಇದರ ಜೊತೆಗೆ ಕಪ್ಪು ಸಮುದ್ರದ ಮೇಲೆ ತನ್ನ ಪರಮಾಧಿಕಾರವನ್ನು ಸ್ಥಾಪಿಸಿ ಅದರ

ಜಲಸಂಧಿಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಮೆಡಿಟರೇನಿಯನ್ ಸಮುದ್ರಕ್ಕೆ ಹೋಗಲು ದಾರಿಯನ್ನು ಸುಗಮ ಮಾಡಿಕೊಳ್ಳಬೇಕೆಂಬ ಗುರಿಯನ್ನು ಹೊಂದಿತ್ತು. ಆದರೆ ರಷ್ಯಾದ ಈ ನೀತಿಯನ್ನು ಉಳಿದ ಯುರೋಪಿಯನ್ ರಾಷ್ಟ್ರಗಳು ಬಲವಾಗಿ ವಿರೋಧಿಸಿದವು. ಮುಖ್ಯವಾಗಿ ಗ್ರೇಟ್ ಬ್ರಿಟನ್ ಇದನ್ನು ವಿರೋಧಿಸಿತು.

ಆದುದರಿಂದಾಗಿ ತುರ್ಕಿಯ ಸಾಮ್ರಾಜ್ಯದ ಪತನವು ಯುರೋಪಿಯನ್ ರಾಷ್ಟ್ರಗಳಿಗೆ ಸಮಸ್ಯೆಯನ್ನುಂಟು ಮಾಡಿತು. ಆದುದರಿಂದ ಯುರೋಪಿನ 'ಪೂರ್ವದ ಸಮಸ್ಯೆ'ಉಂಟಾಯಿತು. ಅದನ್ನೇ ಪೌರ್ವಾತ್ಯ ಸಮಸ್ಯೆ ಎಂದು ಕರೆಯಲಾಗಿದೆ. ಆದುದರಿಂದಾಗಿ "ತುರ್ಕಿಯನ್ನು ಯುರೋಪಿನ ರೋಗಗ್ರಸ್ತ ಮನುಷ್ಯ" ಎಂದು ವಿವರಿಸಲಾಗಿದೆ.

ಪೌರ್ವಾತ್ಯ ಸಮಸ್ಯೆಯಲ್ಲಿ ರಾಜಕೀಯ ಸಮಸ್ಯೆಗಳ ಜೊತೆಗೆ, ಧಾರ್ಮಿಕ ಮತ್ತು ಆರ್ಥಿಕ ಕಾರಣಗಳು ಸೇರಿಕೊಂಡಿವೆ. ಬಾಲ್ಕನ್ ರಾಜ್ಯಗಳಲ್ಲಿ ಕ್ರೈಸ್ತರು ಹಾಗೂ ತುರ್ಕಿಯರು ನೆಲಸಿದ್ದರು. ಆದುದರಿಂದಾಗಿ ಧಾರ್ಮಿಕ ಘರ್ಷಣೆಗಳು ಆಗಿಂದಾಗ್ಗೆ ಉಂಟಾಗುತ್ತಿದ್ದವು. ಕ್ರೈಸ್ತರಲ್ಲೇ ಎರಡು ಗುಂಪುಗಳಿದ್ದರು. ಕ್ಯಾಥೊಲಿಕ್ಕರು ಫ್ರಾನ್ಸಿನ ಬೆಂಬಲ ಪಡೆದು ರೋಮನ್ ಚರ್ಚ್‌ಗೆ ನಿಷ್ಠೆಯಿಂದ ಇದ್ದರು. ಆದರೆ ಗ್ರೀಕ್ ಸಂಪ್ರದಾಯಚರ್ಚ್‌ಗೆ ಸೇರಿದ್ದವರು ರಷ್ಯಾದ ನಾಯಕತ್ವದಲ್ಲಿ ನಂಬಿಕೆ ಇಟ್ಟಿದ್ದರು. ಇಂಗ್ಲೆಂಡ್, ಆಸ್ಟ್ರಿಯ, ರಷ್ಯಾ ಆರ್ಥಿಕ ವಿಷಯಕ್ಕೆ ಸಂಬಂಧಿಸಿದಂತೆಯೂ ಬಾಲ್ಕನ್ ರಾಜ್ಯಗಳಲ್ಲಿ ಆಸಕ್ತಿ ಹೊಂದಿದ್ದವು. ಆದುದರಿಂದಾಗಿ ಎಲ್ಲ ಬಲಿಷ್ಠ ರಾಷ್ಟ್ರಗಳು ಬಾಲ್ಕನ್ ರಾಜ್ಯಗಳಲ್ಲಿ ಸಂಘರ್ಷಕ್ಕೊಳಪಟ್ಟ ವಿವಿಧ ಆಸಕ್ತಿಗಳನ್ನು ಹೊಂದಿದ್ದವು.

## 99.2 ಸರ್ಬಿಯ ದಂಗೆ

ತುರ್ಕಿಯ ಸುಲ್ತಾನನ ವಿರುದ್ಧ ಮೊಟ್ಟಮೊದಲನೆಯದಾಗಿ ಸರ್ಬಿಯನ್ನರು 1804ರಲ್ಲಿ ದಂಗೆ ಎದ್ದರು. 1817ರವರೆಗೂ ಮಧ್ಯೆ ಮಧ್ಯೆ ನಿಲ್ಲಿಸಿ ತಮ್ಮ ಹೋರಾಟವನ್ನು ವೀರಾವೇಶದಿಂದ ಮುಂದುವರಿಸಿದರು. ಅವರು ಇದರ ಪ್ರತಿಫಲವಾಗಿ ಸುಲ್ತಾನನಿಂದ ಕೆಲವು ರಿಯಾಯಿತಿಗಳನ್ನು ಪಡೆದುಕೊಂಡರು. ಸುಲ್ತಾನನ ಪರಮಾಧಿಕಾರ ಮುಂದುವರಿದರೂ, ಸರ್ಬಿಯನ್ನರಿಗೆ ವಂಶಪಾರಂಪರ್ಯವಾಗಿ ಆಳ್ವಿಕೆ ನಡೆಸಿದ ಸ್ಥಳೀಯ ಓಬ್ರೆನೋವಿಚ್ ಮನೆತನಕ್ಕೆ ಸೇರಿದ ರಾಜಕುಮಾರನ ಆಳ್ವಿಕೆಯಡಿಯಲ್ಲಿ ಸ್ವಾಯತ್ತತೆಯನ್ನು ಪಡೆದುಕೊಂಡರು.

## 99.3 ಗ್ರೀಕರ ಸ್ವಾತಂತ್ರ್ಯ ಹೋರಾಟ

***99.3.1 ಕಾರಣಗಳು:*** ಬಾಲ್ಕನ್ ರಾಜ್ಯಗಳಲೆಲ್ಲ ಗ್ರೀಕರು ತುರ್ಕಿಯ ಸುಲ್ತಾನನ ದಯೆಯಿಂದ ಕೂಡಿದ ಆಡಳಿತಕ್ಕೊಳಪಟ್ಟವರಾಗಿದ್ದರು. ಗ್ರೀಕರು ನಾಗರೀಕ ಆಡಳಿತದಲ್ಲಿ, ತುರ್ಕಿಯ ವಿದೇಶಾಂಗ ಕಚೇರಿಯಲ್ಲಿ ಮತ್ತು ನೌಕಾದಳದಲ್ಲಿ ಉನ್ನತ ಹುದ್ದೆಗಳನ್ನು ಹೊಂದಿದ್ದರು. ಅವರು ಸ್ವಲ್ಪ ಮಟ್ಟಿಗೆ ಸ್ವಾಯತತ್ತೆಯನ್ನು ಹೊಂದಿದ್ದರು. ಆದರು ಕೂಡ ಗ್ರೀಕರು ಪಶ್ಚಿಮ ಯುರೋಪಿನಲ್ಲಿ ನಡೆದ ಫ್ರಾನ್ಸಿನ ಮಹಾಕ್ರಾಂತಿ ಮತ್ತು ನೆಪೋಲಿಯನ್ನನ ಯುದ್ಧಗಳಿಂದ ಪ್ರಭಾವಿತರಾಗಿದ್ದರು. ನೆಪೋಲಿಯನ್ನನ ಪತನಾನಂತರ ಸಮಾವೇಶಗೊಂಡ ವಿಯೆನ್ನ ಕಾಂಗ್ರೆಸ್ ಗ್ರೀಸ್‌ನ್ನು ತುರ್ಕಿಯ ಸಾಮ್ರಾಜ್ಯದಿಂದ ಬೇರ್ಪಡಿಸಿ ಅದಕ್ಕೆ ಒಂದು ಪ್ರತ್ಯೇಕ ಅಸ್ತಿತ್ವವನ್ನು ನೀಡಲು ಪ್ರಯತ್ನಿಸಲಿಲ್ಲ.

ಗ್ರೀಕರಲ್ಲಿ ಹತ್ತೊಂಬತ್ತನೆಯ ಶತಮಾನದ ಪ್ರಾರಂಭದ ವೇಳೆಗೆ, ತಮ್ಮ ಗತವೈಭವದ ಬಗ್ಗೆ ಮಾನಸಿಕ ಪುನರುಜ್ಜೀವನ ಉಂಟಾಯಿತು. ಅನೇಕ ಗುಪ್ತ ಸಂಘಗಳು ಉದಯಿಸಿದವು. ಗ್ರೀಕರು ವಿದೇಶಿ ಆಳ್ವಿಕೆಯ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಲು ಪ್ರಾರಂಭಿಸಿದರು. ತುರ್ಕಿಯ ಸುಲ್ತಾನನಿಗೂ ಮತ್ತು ಅವನ ಅದೀನದಲ್ಲಿದ್ದ ಆಲಿಪಾಷನಿಗೂ ಮನಸ್ತಾಪ ಉಂಟಾಯಿತು. ಈ ಅವಕಾಶವನ್ನು ಸದುಪಯೋಗಿಸಿಕೊಂಡು ಗ್ರೀಕರು ಸುಲ್ತಾನನ ವಿರುದ್ಧ 1822ರಲ್ಲಿ ದಂಗೆ ಎದ್ದರು. ಮೊರಿಯಾದಲ್ಲಿ ನೂರಾರು ಮುಸ್ಲಿಮರನ್ನು ಕೊಲೆಗೈದರು. ಸುಲ್ತಾನನು ಒಂದು ದೊಡ್ಡ ಸೈನ್ಯವನ್ನು

ಕಳುಹಿಸಿ ಮ್ಯಾಸಿಡೋನಿಯಾದಲ್ಲಿದ್ದ ಕ್ರೈಸ್ತರನ್ನು ಅಧಿಕ ಸಂಖ್ಯೆಯಲ್ಲಿ ಕೊಲೆಗೈಸಿದನು. ಕಾನ್‌ಸ್ಟಾಂಟಿನೋಪಲ್ ನಲ್ಲಿದ್ದ ಗ್ರೀಸ್‌ನ ಪೇಟ್ರಿಯಾರ್ಕ್‌ನನ್ನು ಕೊಲ್ಲಿಸಿದನು. ಇನ್ನೂ ಅನೇಕ ಮಂದಿ ಪಾದ್ರಿಗಳನ್ನು ಯಮಲೋಕಕ್ಕೆ ಕಳುಹಿಸಲಾಯಿತು. ಆದುದರಿಂದಾಗಿ ಎರಡು ಧರ್ಮಗಳಿಗೆ ಸೇರಿದಂತೆ ಅನೇಕರು ಮರಣಹೊಂದಿದರು. ಹಗೆತನ ಎರಡು ಧರ್ಮದವರ ನಡುವೆ ಹೆಚ್ಚಾಯಿತು. ತನ್ನ ಸೈನ್ಯಬಲದಿಂದ ಕಗ್ಗೊಲೆಯನ್ನು ನಿಲ್ಲಿಸಲಾರದ ತುರ್ಕಿಯ ಸುಲ್ತಾನನು ಈಜಿಪ್ಟಿನ ಮೆಹಮತ್ ಆಲಿಯನ್ನು 1824ರಲ್ಲಿ, ಗ್ರೀಕರ ದಂಗೆಯನ್ನು ಅಡಗಿಸಲು ಸಹಾಯ ಮಾಡಬೇಕೆಂದು ಕೇಳಿಕೊಂಡನು. ಇದರ ಪ್ರಕಾರ ಮೆಹಮತ್ ಆಲಿಯು ತನ್ನ ಮಗ ಇಬ್ರಾಹಿಂ ಪಾಷನೊಂದಿಗೆ ಒಂದು ದೊಡ್ಡ ಸೈನ್ಯವನ್ನು ಕಳುಹಿಸಿ ತುರ್ಕಿಯರ ಅಧಿಕಾರವನ್ನು ಗ್ರೀಸ್‌ನಲ್ಲಿ ಪುನರ್ ಸ್ಥಾಪಿಸಲು ಕ್ರಮ ಕೈಗೊಂಡನು.

### *99.3.2 ರಷ್ಯಾದ ಹಸ್ತಕ್ಷೇಪ*

ಗ್ರೇಟ್ ಬ್ರಿಟನ್ನಿನ ಹಸ್ತಕ್ಷೇಪ ವಿರೋಧಿ ನಿಲುವು, ಮೆಟರ್ನಿಕ್‌ನ ಕ್ರಾಂತಿ ದ್ವೇಷ, ಗ್ರೇಟ್ ಬ್ರಿಟನ್ ಮತ್ತು ಆಸ್ಟ್ರಿಯ ದೇಶಗಳು ರಷ್ಯಾದ ಬಗ್ಗೆಹೊಂದಿದ್ದ ಅಸೂಯೆ, ತುರ್ಕಿಯ ಸಾಮ್ರಾಜ್ಯದ ಸುಭದ್ರತೆ ದೃಷ್ಟಿಯ ಅಂಶಗಳು ಗ್ರೀಕರ ಸಹಾಯಕ್ಕೆ ಯಾವ ಯೂರೋಪಿಯನ್ ರಾಷ್ಟ್ರವು ಬರದಂತೆ ತಡೆಯೊಡ್ಡಿದವು. ಅಂತಿಮವಾಗಿ ಗ್ರೀಕರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಷ್ಯ ಹಸ್ತಕ್ಷೇಪ ಮಾಡಲು ನಿರ್ಧರಿಸಿತು. 1825ರಲ್ಲಿ ರಷ್ಯಾದ ರಾಜಧಾನಿಯಲ್ಲಿ ಒಂದು ಸಮ್ಮೇಳನವನ್ನು ಏರ್ಪಡಿಸುವ ದೃಷ್ಟಿಯಿಂದ ಗ್ರೇಟ್‌ಬ್ರಿಟನ್ ಮತ್ತು ಆಸ್ಟ್ರಿಯವನ್ನು ಆಹ್ವಾನಿಸಿದನು. ಆದರೆ ಈ ದೇಶಗಳು ಯಾವುದೇ ಆಸಕ್ತಿಯನ್ನು ತೋರಿಸಲಿಲ್ಲ. ಆದರೆ ಅವರು ತುರ್ಕಿಯ ಸುಲ್ತಾನನಿಗೆ ಗ್ರೀಸ್‌ಗೆ ಒಂದು ಸ್ವಾಯತ್ತತೆಯ ಸ್ಥಾನಮಾನ ನೀಡಬೇಕೆಂದು ಕಾಗದ ಬರೆದರು. ತುರ್ಕಿಯ ಸುಲ್ತಾನನು ಈ ಕಾಗದಕ್ಕೆ ಯಾವುದೇ ಮನ್ನಣೆ ನೀಡಲಿಲ್ಲ. ಆದುದರಿಂದಾಗಿ ಒಟ್ಟಿಗೆ ಒಂದು ನೈಕಾದಳವನ್ನು ತುರ್ಕಿಯ ವಿರುದ್ಧ ಕಳುಹಿಸಲಾಯಿತು. ಈ ನೌಕಾದಳ ತುರ್ಕಿ ಮತ್ತು ಈಜಿಪ್ಟಿಗೆ ಸೇರಿದ ನೊವರಿನೊ ಕೊಲ್ಲಿಯಲ್ಲಿ (1827)ದ್ದ ನೌಕಾಪಡೆಯನ್ನು ಧ್ವಂಸಮಾಡಿತು. ಇಬ್ರಾಹಿಂ ತುರ್ಕಿಯ ಸೈನ್ಯವನ್ನು ಮೊರಿಯಾದಿಂದ ಹಿಂದಕ್ಕೆ ಕರೆಯಿಸಿಕೊಳ್ಳಲು ಒಪ್ಪಿಕೊಂಡನು. ಆದರೆ 1827ರಲ್ಲಿ ಇಂಗ್ಲೆಂಡಿನಲ್ಲಿ ನಾಯಕತ್ವದ ಬದಲಾವಣೆಯಾದುದರಿಂದ ವೆಲಿಂಗ್‌ಟನ್ನನು ಈ ಯುದ್ಧದಿಂದ ಹಿಂತೆಗೆಯಲು ನಿರ್ಧರಿಸಿದನು. ಆದುದರಿಂದಾಗಿ ರಷ್ಯ ಒಂದೇ ತುರ್ಕಿಯ ವಿರುದ್ಧ ಯುದ್ಧ ಮುಂದುವರಿಸಿತು. ಅಂತಿಮವಾಗಿ ತುರ್ಕಿಯು ರಷ್ಯಾದೊಡನೆ ಆಡ್ರಿಯನೋಪಲ್ ಒಪ್ಪಂದವನ್ನು ಮಾಡಿಕೊಳ್ಳಲು ಸಮ್ಮತಿಸಿತು.

### *99.3.3 1829ರ ಆಡ್ರಿಯಾನೋಪಲ್ ಒಪ್ಪಂದದ ಮುಖ್ಯಾಂಶಗಳು*

1) ತುರ್ಕಿಯ ಬಂಧನದಿಂದ ವಿಮುಕ್ತಿಗೊಂಡು ಗ್ರೀಸ್ ಒಂದು ಸ್ವತಂತ್ರರಾಜ್ಯವಾಯಿತು. ಹೆಸರಿಗೆ ಮಾತ್ರ ಸುಲ್ತಾನನ ಅಧಿಕಾರ ಗ್ರೀಸ್‌ನಲ್ಲಿ ಮುಂದುವರಿಯಿತು.

2) ಡ್ಯಾನೂಬಿಯನ್ ಪ್ರಾಂತ್ಯಗಳಾದ ಮೊಲ್ಡೆವಿಯಾ ಮತ್ತು ವೆಲ್ಲೇಷಿಯ ರಷ್ಯಾದ ಹಿಡಿತಕ್ಕೊಳಪಟ್ಟವು.

3) ರಷ್ಯ ಕಪ್ಪುಸಮುದ್ರದಿಂದ ಮೆಡಿಟರೇನಿಯನ್ ಸಮುದ್ರಕ್ಕೆ ಮುಕ್ತ ಮಾರ್ಗದ ಅವಕಾಶಪಡೆಯಿತು.

ಯೂರೋಪಿನ ಇತಿಹಾಸದ ಮೇಲೆ ಗ್ರೀಕರ ಸ್ವಾತಂತ್ರ್ಯ ಸಂಗ್ರಾಮದ ಹೋರಾಟವು ಮಹತ್ತರವಾದ ಪರಿಣಾಮವನ್ನುಂಟು ಮಾಡಿತು. ಈ ಒಪ್ಪಂದದಿಂದಾಗಿ ರಷ್ಯ ಪ್ರಮುಖ ಪ್ರಾದೇಶಿಕ ಹಾಗೂ ವಾಣಿಜ್ಯ ರಿಯಾಯಿತಿಗಳನ್ನು ತುರ್ಕಿಯಿಂದ ಪಡೆಯಿತು. ರಷ್ಯಕ್ಕೆ ಇದೊಂದು ಅಭೂತ ವಿಜಯವಾಗಿತ್ತು. ಗ್ರೀಕರ ಸ್ವಾತಂತ್ರ್ಯ ಹೋರಾಟವು ಇನ್ನುಳಿದ ಬಾಲ್ಕನ್ ರಾಜ್ಯಗಳಿಗೆ ತುರ್ಕಿಯ

ವಿರುದ್ಧ ದಂಗೆ ಎದ್ದು ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದಕ್ಕೆ ಸ್ಫೂರ್ತಿ ನೀಡಿತು. ಈ ದಂಗೆಗಳು ಯುರೋಪಿನ ರಾಜಕೀಯ ಸಮತೋಲನಕ್ಕೆ ಭೀತಿಯನ್ನುಂಟು ಮಾಡಿದವು.

## 99.4 ಸಿರಿಯನ್ ಪ್ರಶ್ನೆ

ಪೌರ್ವಾತ್ಯ ಸಮಸ್ಯೆಗೆ ಸಂಬಂಧಿಸಿದಂತೆ ಸಿರಿಯಾದ ಪ್ರಶ್ನೆ ಉದ್ಭವಿಸಿತು. ಮೇಲೆ ವಿವರಿಸಿರುವಂತೆ ತುರ್ಕಿಯ ಸುಲ್ತಾನನು ಗ್ರೀಕರ ದಂಗೆಯನ್ನಡಗಿಸಲು ಈಜಿಪ್ಟಿನ ಮೆಹಮತ್ ಆಲಿಯ ಸಹಾಯ ಕೋರಿದ್ದನು. ಈ ಸಹಾಯಕ್ಕೆ ಪ್ರತಿಯಾಗಿ ಸುಲ್ತಾನನು ಮೆಹಮತ್ ಆಲಿಗೆ ಸಿರಿಯ ಪ್ರಾಂತ್ಯವನ್ನು ನೀಡುವುದಾಗಿ ಭರವಸೆ ನೀಡಿದ್ದನು. ಆದರೆ ತುರ್ಕಿಯ ಸುಲ್ತಾನನು ಸಿರಿಯಾವನ್ನು ನೀಡದೆ ಹೋದಾಗ ಅದನ್ನು ಗೆದ್ದುಕೊಳ್ಳಲು ಮೆಹಮತ್ ಆಲಿಯು ಒಂದು ದಂಡಯಾತ್ರೆಯನ್ನು ಕಳುಹಿಸಿದನು. ಈ ದಂಡಯಾತ್ರೆಯ ವಿರುದ್ಧ ತುರ್ಕಿಯ ಸುಲ್ತಾನನು ಒಂದು ಸೈನ್ಯವನ್ನು ಕಳುಹಿಸಿಕೊಟ್ಟನು. ಆದರೆ ಆ ಸೈನ್ಯ ಮೆಹಮತ್ ಆಲಿಯ ಸೈನ್ಯದಿಂದ ಸೋತು ಹಿಮ್ಮೆಟ್ಟಬೇಕಾಯಿತು. ಮೆಹಮತ್ ಆಲಿಯು ಸಿರಿಯಾವನ್ನು ಗೆದ್ದುಕೊಂಡ ನಂತರ ತುರ್ಕಿಯ ರಾಜಧಾನಿ ಕಾನ್‌ಸ್ಟ್ಯಾಂಟಿನೋಪಲ್‌ನ ಕಡೆಗೆ ಧಾಳಿ ಮುಂದುವರಿಸಿದನು. ಇದರಿಂದ ಭಯ ಭೀತನಾದ ತುರ್ಕಿಯ ಸುಲ್ತಾನನು ಯೂರೋಪಿಯನ್ ರಾಷ್ಟ್ರಗಳಿಗೆ ರಕ್ಷಿಸುವಂತೆ ಮನವಿಮಾಡಿಕೊಂಡನು. ಆದರೆ ರಷ್ಯ ಮಾತ್ರ ಈ ಸಮಯದಲ್ಲಿ ತುರ್ಕಿಯ ಸುಲ್ತಾನನಿಗೆ ತನ್ನ ಸಹಾಯ ಹಸ್ತ ನೀಡಿತು. ರಷ್ಯಾದ ಸೈನಿಕರು ತುರ್ಕಿಯ ಸಾಮ್ರಾಜ್ಯದೊಳಗೆ ಬಂದು ಹೋರಾಟಕ್ಕೆ ಸಿದ್ಧರಾದರು. ಇಂತಹ ಬೆಳವಣಿಗೆಯಿಂದಾಗಿ ಇನ್ನುಳಿದ ಯುರೋಪಿಯನ್ ರಾಷ್ಟ್ರಗಳಿಗೆ ಭಯ ಉಂಟಾಯಿತು. ರಷ್ಯಾ ಇದರಿಂದ ಲಾಭ ಪಡೆಯಬಹುದೆಂದು ಭಯಪಟ್ಟರು. ಬ್ರಿಟನ್. ಫ್ರಾನ್ಸ್ ಮತ್ತು ಆಸ್ಟ್ರಿಯಾ ತುರ್ಕಿಯ ಸುಲ್ತಾನನಿಗೆ ಸಿರಿಯಾವನ್ನು ಮೆಹಮತ್ ಆಲಿಗೆ ನೀಡುವಂತೆ ಒತ್ತಡ ಹೇರಿದವು. ಇದಕ್ಕನುಸಾರ 1833 ರ ಏಪ್ರಿಲ್‌ನಲ್ಲಿ ಸಿರಿಯಾವನ್ನು ಸುಲ್ತಾನನು ಈಜಿಪ್ಟ್‌ನ ಮೆಹಮತ್ ಆಲಿಗೆ ನೀಡಿದನು.

## 99.4 ಅಂಕೈರ್ ಸ್ಕೆಲೆಸ್ಸಿ ಒಪ್ಪಂದ

ತುರ್ಕಿಯ ಸುಲ್ತಾನನು ಸಿರಿಯಾವನ್ನು ಮೆಹಮತ್ ಆಲಿಗೆ ನೀಡಿದ ನಂತರ ರಷ್ಯ ತಾನು ನೀಡಿದ ಸಹಾಯಕ್ಕೆ ಹಲವು ಪ್ರದೇಶಗಳನ್ನು ನೀಡಬೇಕೆಂದು ಒತ್ತಡ ಹೇರಿತು. ಇದರ ಪರಿಣಾಮವಾಗಿ 1833ರಲ್ಲಿ ತುರ್ಕಿಯ ಸುಲ್ತಾನನು ರಷ್ಯಾದೊಡನೆ ಅಂಕೈರ್ ಸ್ಕೆಲೆಸ್ಸಿ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದಿಂದಾಗಿ ಕಾನ್‌ಸ್ಟ್ಯಾಂಟಿನೋಪಲ್‌ನಲ್ಲಿ ರಷ್ಯಾದ ಪ್ರಭಾವವು ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ತುರ್ಕಿಯು ರಷ್ಯಾ ಸೈನ್ಯದ ರಕ್ಷಣೆಗೊಳಪಟ್ಟಿತು. ರಷ್ಯಾದ ಯುದ್ಧ ನೌಕೆಗಳು ಜಲಸಂಧಿಗಳ ಮೂಲಕ ಹಾದು ಹೋಗಲು ಅನುಮತಿ ದೊರಕಿತು. ಬಾಸ್ಪರಸ್ ಮತ್ತು ಡಾರ್ಡನೆಲ್ಸ್ ಜಲಸಂಧಿಗಳನ್ನು ಯುದ್ಧದ ಸಮಯದಲ್ಲಿ ಇನ್ನುಳಿದ ರಾಷ್ಟ್ರಗಳಿಗೆ ಮುಚ್ಚಲು ಸುಲ್ತಾನನು ಒಪ್ಪಿಕೊಂಡನು. ಈ ಒಪ್ಪಂದದ ಸುದ್ದಿಯ ಫ್ರಾನ್ಸ್ ಮತ್ತು ಇಂಗ್ಲೆಂಡ್‌ನಲ್ಲಿ ಉದ್ವೇಗವನ್ನುಂಟು ಮಾಡಿತು. ಆದರೆ ತಕ್ಷಣವೇ ಇಂಗ್ಲೆಂಡ್ ಮತ್ತು ಫ್ರಾನ್ಸ್ ಹಸ್ತಕ್ಷೇಪ ಮಾಡಲಿಲ್ಲ. ಬ್ರಿಟನ್ನಿನ ವಿದೇಶಾಂಗ ಸಚಿವರು ಬಹಳ ಎಚ್ಚರಿಕೆಯಿಂದ ರಷ್ಯದ ಹಸ್ತಕ್ಷೇಪದ ಬೆಳವಣಿಗೆಯನ್ನು ಗಮನಿಸಿದನು. ಈ ಒಪ್ಪಂದವನ್ನು ಹರಿದುಹಾಕಲು ಅವನು ಒಂದು ಸದಾವಕಾಶಕ್ಕಾಗಿ ಕಾಯುತ್ತಾ ಕುಳಿತನು.

### *99.4.2 1841ರ ಲಂಡನ್ ಒಪ್ಪಂದ*

1839 ರಲ್ಲಿ ಇಂಗ್ಲೆಂಡಿಗೆ ಒಂದು ಅವಕಾಶ ಒದಗಿ ಬಂದಿತು. ಟರ್ಕಿಯ ಸುಲ್ತಾನನು ರಷ್ಯಾದ ಬೆಂಬಲ ಪಡೆದು ಸಿರಿಯಾವನ್ನು ಮೆಹಮತ್ ಆಲಿಯಿಂದ ಗೆದ್ದುಕೊಳ್ಳುವುದಕ್ಕೋಸ್ಕರ ಯುದ್ಧ ಸಾರಿದನು. ಆದರೆ ಈ ಯುದ್ಧದಲ್ಲಿ ತುರ್ಕಿಯ ಸುಲ್ತಾನನು ಸೋಲನ್ನನುಭವಿಸಿದನು. ಇಂತಹ ಸಮಯದಲ್ಲಿ ಇಂಗ್ಲೆಂಡ್ ಪೌರ್ವಾತ್ಯ ಸಮಸ್ಯೆಯಲ್ಲಿ ಹಸ್ತಕ್ಷೇಪ ಮಾಡಲು ನಿರ್ಧರಿಸಿತು.

ಮತ್ತೊಂದು ಕಡೆ ಫ್ರಾನ್ಸ್ ಮೆಹಮತ್ ಆಲಿಯ ಜೊತೆ ಒಂದು ಒಪ್ಪಂದ ಮಾಡಿಕೊಂಡು ಸೂಯೆಜ್ ಪ್ರದೇಶಗಳನ್ನು ಪಡೆದನು. ಪಾಮರ್‌ಸ್ಟನ್ ಈಜಿಪ್ಟಿನಲ್ಲಿ ಫ್ರಾನ್ಸ್‌ನ ಪ್ರಭಾವವು ಕೂಡ ಕಾನ್‌ಸ್ಟಾಂಟಿನೋಪಲ್‌ನಲ್ಲಿ ರಷ್ಯ ಹೊಂದಿರುವ ಪ್ರಭಾವದಷ್ಟೇ ಅಪಾಯಕಾರಿಯಾದುದೆಂದು ಮನಗಂಡನು. ಆದುದರಿಂದ ಪಾಮರ್‌ಸ್ಟನ್ ನಾಲ್ಕು ದೇಶಗಳ ಒಂದು ಒಕ್ಕೂಟವನ್ನು ರಚಿಸಿದನು. ಈ ಒಕ್ಕೂಟದ ಇನ್ನುಳಿದ ಮೂರು ದೇಶಗಳೆಂದರೆ ರಷ್ಯ, ಪ್ರಷ್ಯ ಮತ್ತು ಆಸ್ಟ್ರಿಯ. ಈ ಒಕ್ಕೂಟವು ಮೆಹಮತ್ ಆಲಿಯ ವಿರುದ್ಧ ಯುದ್ಧ ಸಾರಲು ನಿರ್ಧರಿಸಿತು. ಈ ನಾಲ್ಕು ರಾಷ್ಟ್ರಗಳ ಸೈನಿಕರು ಮೆಹಮತ್ ಆಲಿಯ ಸೈನ್ಯವನ್ನು ಸೋಲಿಸಿದರು. ಆದುದರಿಂದ ಮೆಹಮತ್ ಆಲಿಯು ಒಂದು ಒಪ್ಪಂದಕ್ಕೆ ಮಣಿಯಬೇಕಾಯಿತು. 1841 ರಲ್ಲಿ ಲಂಡನ್‌ನಲ್ಲಿ ಒಂದು ಒಪ್ಪಂದವೇರ್ಪಟ್ಟಿತು. ಈ ಒಪ್ಪಂದದ ಪ್ರಕಾರ ಸಿರಿಯವನ್ನು ಈಜಿಪ್ಟಿನ ಸುಲ್ತಾನನು ತುರ್ಕಿಯ ಸುಲ್ತಾನನಿಗೆ ಹಿಂದಿರುಗಿಸಿದನು. ಮೆಹಮತ್ ಆಲಿಯನ್ನು ಈಜಿಪ್ಟಿನ ಸ್ವತಂತ್ರ ಸುಲ್ತಾನನೆಂದು ಘೋಷಿಸಲಾಯಿತು. ಇದೇ ವೇಳೆಯಲ್ಲಿ ರಷ್ಯವು ಕೂಡ ತಾನು ತುರ್ಕಿಯೊಡನೆ ಮಾಡಿಕೊಂಡಿದ್ದ ಅಂಕೈರ್‌ಸ್ಕೆಲೆಸ್ಸಿ ಒಪ್ಪಂದವನ್ನು ರದ್ದುಪಡಿಸಲು ಒಪ್ಪಿಕೊಂಡಿತು. ಅದರ ಪ್ರಕಾರ ತಾನು ತುರ್ಕಿಯಿಂದ ಪಡೆದಿದ್ದ ಎಲ್ಲ ರಿಯಾಯಿತಿಗಳನ್ನು ಬಿಟ್ಟುಕೊಟ್ಟಿತು. 1841 ರ ಒಪ್ಪಂದವು ರಷ್ಯವು ತುರ್ಕಿಯ ಮೇಲೆ ಹೊಂದಿದ್ದ ಹಿಡಿತವನ್ನು ಕೊನೆಗೊಳಿಸಿದುದಲ್ಲದೆ ಬಾಸ್ಪರಸ್ ಮತ್ತು ಡಾರ್ಡನೆಲ್ಸ್ ಜಲಸಂಧಿಗಳ ಮೂಲಕ ರಷ್ಯಾದ ಯುದ್ಧದ ಹಡಗುಗಳು ಮಾತ್ರ ಹಾದು ಹೋಗಬೇಕೆಂಬ ಏಕ ಸ್ವಾಮ್ಯತೆಯನ್ನು ಕೊನೆಗೊಳಿಸಿತು. ಯುದ್ಧ ಕಾಲದಲ್ಲಿ ಈ ಎರಡು ಜನಸಂಧಿಗಳು ಎಲ್ಲಾ ದೇಶದ ಯುದ್ಧ ಹಡಗುಗಳಿಗೆ ಮುಚ್ಚಲ್ಪಟ್ಟವು. ಈ ಒಪ್ಪಂದವು ಸೂಯೆಜ್ ಕಾಲುವೆ ಮೇಲಿನ ಫ್ರಾನ್ಸಿನ ಆಶೋತ್ತರಗಳಿಗೂ ಕಡಿವಾಣ ಹಾಕಿತು. ಸಿರಿಯಾ ಮತ್ತು ಕ್ರೀಟ್‌ಗಳನ್ನು ತುರ್ಕಿಗೆ ಹಿಂದಿರುಗಿಸುವುದರ ಮೂಲಕ ತುರ್ಕಿ ಸಾಮ್ರಾಜ್ಯದ ಸಮಗ್ರತೆಯನ್ನು ಕಾಪಾಡಿದಂತಾಯಿತು. ಮುಂದಿನ ವರ್ಷ ಫ್ರಾನ್ಸ್ ಕೂಡ ಈ ಒಕ್ಕೂಟಕ್ಕೆ ಸೇರಿಕೊಂಡಿತು.

## 99.5 ಕ್ರಿಮಿಯಾ ಯುದ್ಧ (1854-1856)

### *99.5.1 ಕಾರಣಗಳು*

1841 ರ ಲಂಡನ್ ಒಪ್ಪಂದದ ನಂತರ ಸುಮಾರು ಹತ್ತು ವರ್ಷಗಳ ಕಾಲ ಪೌರ್ವಾತ್ಯ ಪ್ರಶ್ನೆಗೆ ಸಂಬಂಧಿಸಿದಂತೆ ಯಾವ ಸಮಸ್ಯೆಯು ಉದ್ಭವಿಸಲಿಲ್ಲ. ಆದರೆ ರಷ್ಯಾವು ತುರ್ಕಿ ಸಾಮ್ರಾಜ್ಯದಲ್ಲಿ ಹೊಂದಿದ್ದ ಆಸೆಯಿಂದಾಗಿ ಪೌರ್ವಾತ್ಯ ಪ್ರಶ್ನೆಯು ಪುನಃ ತಲೆ ಎತ್ತಿತು. ರಷ್ಯದ ಆಸೆಯು ಪತನ ಹೊಂದುತ್ತಿರುವ ತುರ್ಕಿ ಸಾಮ್ರಾಜ್ಯದಿಂದ ಆದಷ್ಟು ಪ್ರದೇಶಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳ ಬೇಕೆಂಬುದಾಗಿತ್ತು. ಈ ಆಸೆಯನ್ನು ಈಡೇರಿಸಿಕೊಳ್ಳಲು ಝಾರನು ಗ್ರೇಟ್‌ಬ್ರಿಟನ್ನಿನ ಮನವೊಲಿಸಿಕೊಳ್ಳಲು ಪ್ರಯತ್ನ ನಡೆಸಿದನು. ಒಂದನೇ ನಿಕೊಲಸ್ 1844 ರಲ್ಲಿ ಇಂಗ್ಲೆಂಡ್‌ಗೆ ಭೇಟಿ ನೀಡಿದನು. ಬ್ರಿಟನ್ನಿನ ರಾಣಿಯನ್ನು ಸಂದರ್ಶಿಸಿದನು ಹಾಗೂ ಅನೇಕ ಮಂತ್ರಿಗಳೊಡನೆ ರಷ್ಯ ಮತ್ತು ಇಂಗ್ಲೆಂಡ್ ಜೊತೆಗೂಡಿ ಪೌರ್ವಾತ್ಯ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕೆಂದು ಹೇಳಿದನು. ಆಗ ಗ್ರೇಟ್ ಬ್ರಿಟನ್ನಿನ ವಿದೇಶಾಂಗ ಸಚಿವನಾಗಿದ್ದವನು ಲಾರ್ಡ್ ಅಬೆರ್ಡೀನ್. ನಿಕೊಲಸ್‌ನು ತುರ್ಕಿ ಸಾಮ್ರಾಜ್ಯ ಪತನವಾಗುತ್ತಿರುವ ಬಗ್ಗೆ ಹಾಗೂ ಅದರ ಪ್ರದೇಶಗಳನ್ನು ಹಂಚಿಕೊಳ್ಳುವುದರ ಬಗ್ಗೆ ಅನೇಕ ಬಾರಿ ಗ್ರೇಟ್ ಬ್ರಿಟನ್ನಿನೊಡನೆ ಮಾತನಾಡಿದನು. 1853 ರಲ್ಲಿ ಗ್ರೇಟ್ ಬ್ರಿಟನ್ನಿನ ರಾಯಭಾರಿ ಸರ್ ಹ್ಯಾಮಿಲ್ಟನ್ ಸಿಮೋರ್‌ನನ್ನು ಸೇಂಟ್ ಪೀಟರ್ಸ್ ಬರ್ಗ್‌ನಲ್ಲಿ ಭೇಟಿ ಮಾಡಿ ಈ ರೀತಿ ಹೇಳಿದನು "ತುರ್ಕಿ ಚಿಂತಾಜನಕ ಸ್ಥಿತಿಯಲ್ಲಿದೆ ......... ದೇಶವು ತುಂಡು ತುಂಡಾಗಿ ಹರಿದು ಹಂಚಿ ಹೋಗುವ ಸ್ಥಿತಿಗೆ ಬಂದಿದೆ....... ನಮ್ಮ ಕೈಯಲ್ಲಿ ಒಬ್ಬ ರೋಗಗ್ರಸ್ತ ಮನುಷ್ಯನಿದ್ದಾನೆ.......... ಅವನು ಮರಣಾವಸ್ಥೆಯಲ್ಲಿರುವ ರೋಗಿ; ನಾನು ಹೇಳುತ್ತೇನೆ ಈ ದಿನಗಳಲ್ಲಿ ಅವನು ನಮ್ಮ ಕೈತಪ್ಪಿ ಹೋದರೆ ಅದೊಂದು ದುರಾದೃಷ್ಟವೆನಿಸಿಕೊಳ್ಳುತ್ತದೆ". ರಷ್ಯಾದ ಒಡೆತನಕ್ಕೆ ಕಪ್ಪು ಸಮುದ್ರ ಬಂದರೆ, ಇಂಗ್ಲೆಂಡ್‌ಗೆ ಈಜಿಪ್ಟ್ ಮತ್ತು

ಕ್ರೀಟ್‌ಗಳನ್ನು ಪಡೆಯುವುದಕ್ಕೆ ಅನುಕೂಲ ಮಾಡಿಕೊಡಲಾಗುವುದೆಂದು ಝಾರನು ಹೇಳಿದನು. ಆದರೆ ಗ್ರೇಟ್ ಬ್ರಿಟನ್ ಈ ಸಲಹೆಗಳಿಗೆ ಮಣಿಯಲಿಲ್ಲ. ಏಕೆಂದರೆ ತುರ್ಕಿ ಸಾಮ್ರಾಜ್ಯದಲ್ಲಿ ರಷ್ಯಾದ ಪ್ರಾಬಲ್ಯಕ್ಕೆ ಎಡೆ ಮಾಡಿಕೊಟ್ಟರೆ ಪೂರ್ವದಲ್ಲಿರವ ಬ್ರಿಟಿಷ್ ಸಾಮ್ರಾಜ್ಯಕ್ಕೆ ತೊಂದರೆ ಉಂಟಾಗುತ್ತೆಂದು ಗ್ರೇಟ್ ಬ್ರಿಟನ್ ಭಾವಿಸಿತು.

ಫ್ರಾನ್ಸ್‌ನ ಮೂರನೇ ನೆಪೋಲಿಯನ್ ತುರ್ಕಿ ಸಾಮ್ರಾಜ್ಯದಲ್ಲಿದ್ದ ಕ್ರೈಸ್ತ ಪವಿತ್ರ ಕ್ಷೇತ್ರಗಳ ರಕ್ಷಕನೆಂಬ ಹಕ್ಕನ್ನು ಮಂಡಿಸಿದುದು ಕ್ರಿಮಿಯ ಯುದ್ಧಕ್ಕೆ ಮತ್ತೊಂದು ಪ್ರಬಲ ಕಾರಣವಾಯಿತು. ಬಹಳ ಹಿಂದೆಯೇ ಚಾರ್ಲಮೇಜ್ ಹಕ್ಕನ್ನು ಅನುಭವಿಸಿದ್ದನು. ಆದರೆ ಅವನ ಮರಣಾ ನಂತರ ಫ್ರಾನ್ಸಿನ ರಾಜರುಗಳು ಈ ಹಕ್ಕನ್ನು ನವೀಕರಿಸುವುದನ್ನು ಕಡೆಗಣಿಸಿದರು. ಆದುದರಿಂದಾಗಿ ತುರ್ಕಿ ಸಾಮ್ರಾಜ್ಯದಲ್ಲಿದ್ದ ಪವಿತ್ರ ಸ್ಥಳಗಳನ್ನು ನೋಡಿಕೊಳ್ಳುವ ಹಕ್ಕು ಗ್ರೀಕ್ ಸಂಪ್ರದಾಯ ಚರ್ಚ್‌ನ ಪಾಲಾಯಿತು. ಆಟೋಮನ್ ಚಕ್ರವರ್ತಿ ಈಗ ಆ ಹಕ್ಕನ್ನು ತನ್ನ ಸಾಮ್ರಾಜ್ಯದಲ್ಲಿ ಫ್ರೆಂಚರಿಗೆ ಪುನಃ ನೀಡುವುದಾಗಿ ಒಪ್ಪಿಕೊಂಡನು. ಕ್ರೈಸ್ತ ಪವಿತ್ರ ಸ್ಥಳಗಳ ಮೇಲೆ ಫ್ರಾನ್ಸ್ ಹಕ್ಕನ್ನು ಹೊಂದಿದು ರಷ್ಯಾಕ್ಕೆ ಕಳವಳನ್ನುಂಟು ಮಾಡಿತು. ರಷ್ಯನ್ನರು ಇದನ್ನು ಪ್ರಬಲವಾಗಿ ವಿರೋಧಿಸಿ ತುರ್ಕಿಯ ಸರ್ಕಾರದ ಮೇಲೆ ಈ ಹಕ್ಕನ್ನು ಹಿಂದಕ್ಕೆ ಪಡೆದುಕೊಳ್ಳುವಂತೆ ಒತ್ತಾಯ ತಂದಿರು. ಜೆರುಸಲೇಮ್‌ನಲ್ಲಿ ಗ್ರೀಕ್ ಸಂಪ್ರದಾಯ ಕ್ರೈಸ್ತರಿಗೂ ಹಾಗೂ ರೋಮನ್ ಕ್ಯಾಥೊಲಿಕ್‌ರಿಗೂ ಪವಿತ್ರ ಸ್ಥಳಗಳಿಗೆ ಸಂಬಂಧಿಸಿದಂತೆ ಜಗಳ ಪ್ರಾರಂಭವಾಯಿತು. ಮುಖ್ಯವಾಗಿ ಬೆತ್ಲೆಹೆಮ್‌ನಲ್ಲಿದ್ದ ಚರ್ಚಿನ ಬಗ್ಗೆ ಭಿನ್ನಾಭಿಪ್ರಾಯ ಉಂಟಾಯಿತು. ಈ ಎಲ್ಲಾ ಸ್ಥಳಗಳು ತುರ್ಕಿ ಸಾಮ್ರಾಜ್ಯದ ಭಾಗವಾಗಿದ್ದವು. ಕ್ರೈಸ್ತರ ರಕ್ಷಣೆಯ ಹೊಣೆಯನ್ನು ಫ್ರಾನ್ಸ್ ಪಡೆದಿತ್ತು. ಆದುದರಿಂದ ಲ್ಯಾಟಿನ್ ಕ್ರೈಸ್ತ ಸನ್ಯಾಸಿಗಳು ಫ್ರಾನ್ಸ್‌ನ ಬೆಂಬಲಕ್ಕೆ ಸದಾ ಹಾತೊರೆದರು. ಆದರೆ ಗ್ರೀಕ್ ಸಂಪ್ರದಾಯ ಚರ್ಚ್‌ಗೆ ಸೇರಿದ ಕ್ರೈಸ್ತರು ರಷ್ಯದ ಬೆಂಬಲದ ಮೇಲೆ ವಾಸಿಸುತ್ತಿದ್ದರು.

ಯುದ್ಧಕ್ಕೆ ತಕ್ಷಣದ ಕಾರಣವೆಂದರೆ ಬೆತ್ಲೆಹೆಂನಲ್ಲಿದ್ದ ಚರ್ಚಿನ ಮುಖ್ಯ ದ್ವಾರದ ಬೀಗದೆಸಳನ್ನು ಹೊಂದುವುದರ ಬಗ್ಗೆ ಹಾಗೂ ಆರಾಧನ ಮಂದಿರ (ಗರ್ಭಗೃಹ) ದಲ್ಲಿ ಬೆಳ್ಳಿಯ ನಕ್ಷತ್ರವನ್ನು ಇಡುವುದಕ್ಕೆ ಸಂಬಂಧಿಸಿದ ಹಾಗೆ ಇದ್ದಂತಹ ವಿವಾದಗಳು. ಈ ವಿವಾದವನ್ನೇ "ಬೀಗದೆಸಳು ಮತ್ತು ನಕ್ಷತ್ರ ವಿವಾದ" ಎಂದು ಇತಿಹಾಸದಲ್ಲಿ ವರ್ಣಿಸಲಾಗಿದೆ. ಮೂರನೇ ನೆಪೋಲಿಯನ್ನನು ಪ್ಯಾಲಿಸ್ಟೀನ್‌ನಲ್ಲಿದ್ದ ರೋಮನ್ ಕ್ಯಾಥೋಲಿಕ್ಕರ ಹಕ್ಕುಗಳನ್ನು ಎತ್ತಿ ಹಿಡಿಯಲು ತೀರ್ಮಾನಿಸಿದನು. ಆದುದರಿಂದ 1852 ರಲ್ಲಿ ರೋಮನ್ ಕ್ಯಾಥೊಲಿಕ್‌ರ ಎಲ್ಲಾ ಹಕ್ಕುಗಳನ್ನು ಮತ್ತೆ ನೀಡಬೇಕೆಂದು ಫ್ರಾನ್ಸ್ ಆಜ್ಞಾಪಿಸಿತು. ಸ್ವಲ್ಪ ಹಿಂಜರಿಕೆಯ ನಂತರ ರೋಮನ್ ಕ್ಯಾಥೊಲಿಕ್ಕರಿಗೆ ಎಲ್ಲ ರೀತಿಯ ರಿಯಾಯಿತಿಗಳನ್ನು ನೀಡಿದನು. ಮುಖ್ಯ ದ್ವಾರದ ಬೀಗದೆಸಳನ್ನು ರೋಮನ್ ಕ್ಯಾಥೊಲಿಕ್‌ರಿಗೆ ನೀಡಲಾಯಿತು. ಒಂದನೆಯ ನಿಕೊಲಸ್‌ನು ತಕ್ಷಣವೇ ಗ್ರೀಕ್ ಸಂಪ್ರದಾಯದ ಕ್ರೈಸ್ತರ ಸಹಯಾಕ್ಕೆ ಧಾವಿಸಿ ರೋಮನ್ ಕ್ಯಾಥೊಲಿಕ್ಕರಿಗೆ ನೀಡಿದ್ದ ರಿಯಾಯಿತಿಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿದನು. ತುರ್ಕಿಯ ಸುಲ್ತಾನನು ಇಬ್ಬರಿಗೂ ಸಮಜಾಯಿಸಿ ನೀಡಲು ಪ್ರಯತ್ನಿಸಿದನು. ಆದರೆ ಈ ಸಮಜಾಯಿಸಿಯಿಂದ ಇಬ್ಬರಿಗೂ ತೃಪ್ತಿ ದೊರಕಲಿಲ್ಲ. ಆದರೆ ರಷ್ಯ ರೋಮನ್ ಕ್ಯಾಥೋಲಿಕ್‌ರಿಗೆ ನೀಡಿದ್ದ ರಿಯಾಯಿತಿಗಳನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ರಷ್ಯಾದ ಝಾರನು ರಾಜಕುಮಾರ ಮೆನ್ಸಿಕೋವ್‌ನ ನಾಯಕತ್ವದಲ್ಲಿ ಒಂದು ನಿಯೋಗವನ್ನು ತುರ್ಕಿ ಸುಲ್ತಾನನ ಹತ್ತಿರ ಕಳುಹಿಸಿ ತುರ್ಕಿ ಸಮ್ರಾಜ್ಯದಲ್ಲಿರುವ ಎಲ್ಲ ಗ್ರೀಕ್ ಸಂಪ್ರದಾಯ ಕ್ರೈಸ್ತರನ್ನು ರಷ್ಯ ರಕ್ಷಿಸುವ ಹೊಣೆ ಹೊಂದಿದೆ ಎಂಬ ಒಂದು ಒಪ್ಪಂದವನ್ನು ಮಾಡಿಕೊಳ್ಳವಂತೆ ಒತ್ತಾಯಿಸಿದನು. ಗ್ರೇಟ್ ಬ್ರಿಟನ್ನಿಗೆ ರಷ್ಯಾದ ರಕ್ಷಣೆಯ ಬೇಡಿಕೆ ಮಿತಿ ಮೀರಿದ ಬೇಡಿಕೆ ಎನಿಸಿತು. ಆದುದರಿಂದ ತುರ್ಕಿಯಲ್ಲಿದ್ದ ತನ್ನ ರಾಯಭಾರಿ ಸ್ಟ್ರಾಟ್‌ಫೋರ್ಡ್ ರೆಡ್‌ಕ್ಲಿಫ್ಡ್ ಮೂಲಕ ರಷ್ಯ ಬೆಂಬಲಿಸುತ್ತಿದ್ದ ಗ್ರೀಕ್ ಸಂಪ್ರದಾಯ ಕ್ರೈಸ್ತರಿಗೆ ಹಲವು ರಿಯಾಯಿತಿಗಳನ್ನು ಮಾತ್ರ ಕೊಡಬೇಕೆಂದು ಮತ್ತು ತುರ್ಕಿ ಸಾಮ್ರಾಜ್ಯದಲ್ಲಿರುವ ಎಲ್ಲ ಕ್ರೈಸ್ತರ ರಕ್ಷಣೆಯ ಹೊಣೆಯನ್ನು

ನೀಡಕೂಡದೆಂಬ ಸೂಚನೆಯನ್ನು ತುರ್ಕಿ ಸುಲ್ತಾನನಿಗೆ ಕಳುಹಿಸಲಾಯಿತು. ರಾಜಕುಮಾರ ಮೆನ್ಸಿಕೋವ್‌ನ ನಿಯೋಗ ವಿಫಲವಾಗಿ ಬರಿಗೈಯಲ್ಲಿ ಹಿಂದಿರುಗಬೇಕಾಯಿತು.

### 99.5.2 *ಕ್ರಿಮಿಯಾ ಯುದ್ಧದ ಪ್ರಾರಂಭ*

ಮೆನ್ಸಿಕೋವ್‌ನ ನಿಯೋಗವು ವಿಫಲವಾದ ಮೇಲೆ ರಷ್ಯ ಅತೃಪ್ತಿಗೊಂಡು 1853 ರ ಜುಲೈ 21 ನೇ ತಾರೀಖಿನಂದು ಪ್ರೂತ್ ನದಿಯನ್ನು ದಾಟಿ ತುರ್ಕಿ ಸುಲ್ತಾನನಿಗೆ ಸೇರಿದ್ದ ಮೊಲ್ಡೇವಿಯಾ ಮತ್ತು ವೆಲೇಷಿಯ ಪ್ರದೇಶಗಳನ್ನು ಆಕ್ರಮಿಸಿಕೊಂಡಿತು. ಇದು ಯುದ್ಧವಲ್ಲ, ಈ ಕ್ರಮ ತನ್ನ ಬೇಡಿಕೆಗಳನ್ನು ತುರ್ಕಿಯ ಸರ್ಕಾರದಿಂದ ಈಡೇರಿಸಿಕೊಳ್ಳಲು ಭದ್ರತೆಗಾಗಿ ತೆಗೆದುಕೊಂಡ ಕ್ರಮ ಎಂದು ಘೋಷಿಸಿದನು. ಯುದ್ಧ ಪ್ರಾರಂಭವಾಗುವುದನ್ನು ತಡೆಗಟ್ಟಲು ಅನೇಕ ರಾಜ ತಾಂತ್ರಿಕ ಪ್ರಯತ್ನಗಳನ್ನು ನಡೆಸಲಾಯಿತು. ಇಂಗ್ಲೆಂಡ್, ಫ್ರಾನ್ಸ್, ಆಸ್ಟ್ರಿಯ ಮತ್ತು ಪ್ರಷ್ಯಗಳನ್ನೊಳಗೊಂಡ ನಾಲ್ಕು ರಾಷ್ಟ್ರಗಳ ಒಂದು ಸಭೆ ವಿಯೆನ್ನಾದಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಬಾಲ್ಕನ್ ರಾಜ್ಯಗಳ ಕ್ರೈಸ್ತರ ರಕ್ಷಣೆಯೇ ತಮ್ಮ ಗುರಿ ಎಂದು ಸಾರಿದವು. ಈ ಸಮ್ಮೇಳನದ ನಿರ್ಧಾರಕ್ಕೆ ಸಂಬಂಧಿಸಿದಂತೆ ಒಂದು ವರದಿಯನ್ನು ತುರ್ಕಿ ಮತ್ತು ರಷ್ಯಕ್ಕೆ ಕಳುಹಿಸಿಕೊಡಲಾಯಿತು. ರಷ್ಯ ಈ ತೀರ್ಮಾನಕ್ಕೆ ತನ್ನ ಒಪ್ಪಿಗೆಯನ್ನು ಸೂಚಿಸಿತು. ಆದರೆ ತುರ್ಕಿ ಈ ನಿಧಾರವನ್ನು ತಿರಸ್ಕರಿಸಿತು. ಆದುದರಿಂದ ರಾಜತಾಂತ್ರಿಕ ಪ್ರಯತ್ನ ವಿಫಲವಾಯಿತು. ತುರ್ಕಿಯು ನಾಲ್ಕು ರಾಷ್ಟ್ರಗಳ ಸಮ್ಮೇಳನದ ನಿರ್ಧಾರವನ್ನು ತಿರಸ್ಕರಿಸಿದುದರಿಂದ ಈ ರಾಷ್ಟ್ರಗಳು ತುರ್ಕಿಯ ಪರವಾಗಿ ನಿಲ್ಲಲು ನೈತಿಕ ಹಕ್ಕಿರಲಿಲ್ಲ. ಆದಾಗ್ಯೂ ಕೂಡ ರಷ್ಯದ ಭಯದಿಂದಾಗಿ ತುರ್ಕಿಗೆ ತಮ್ಮ ಬೆಂಬಲ ಮುಂದುವರಿಸಲು ನಿರ್ಧರಿಸಿದವು.

ಗ್ರೇಟ್ ಬ್ರಿಟನ್ನಿನ ಪರಂಪರಾನುಗತ ನೀತಿ ತುರ್ಕಿಗೆ ಬೆಂಬಲ ನೀಡುವುದೇ ಆಗಿತ್ತು. ರಷ್ಯಾದ ಅಧಿಕಾರವು ಮೆಡಿಟರೇನಿಯನ್ ಸಮುದ್ರದವರೆಗೂ ವಿಸ್ತರಿಸಿದರೆ ಈಜಿಪ್ಟ್‌ಗೆ ತೊಂದರೆ ಆಗುವುದಲ್ಲದೆ ಭಾರತಕ್ಕೆ ಇರುವ ಮಾರ್ಗಕ್ಕೂ ಅಡಚಣೆ ಉಂಟಾಗುತ್ತದೆ ಎಂಬ ಭಯ ಗ್ರೇಟ್ ಬ್ರಿಟನ್‌ನನ್ನು ಸದಾ ಕಾಡುತ್ತಿತ್ತು. ಫ್ರಾನ್ಸ್‌ನ ರೋಮನ್ ಕ್ಯಾಥೊಲಿಕ್‌ರನ್ನು ಹಾಗೂ ಕ್ಲೆರಿಕಲ್ ಪಕ್ಷವನ್ನು ಸಂತೈಸಲು ತುರ್ಕಿ ಸಾಮ್ರಾಜ್ಯದಲ್ಲಿ ವಾಸ ಮಾಡುತ್ತಿದ್ದ ರೋಮನ್ ಕ್ಯಾಥೊಲಿಕ್‌ರಿಗೆ ಮೂರನೇ ನೆಪೋಲಿಯನ್ ತನ್ನ ಬೆಂಬಲ ನೀಡಿದನು.

### 99.5.3 *ಯುದ್ಧದ ಗತಿ*

ತುರ್ಕಿಯು 1853 ರ ಅಕ್ಟೋಬರ್ 23 ರಂದು ರಷ್ಯಾಕ್ಕೆ ಡ್ಯಾನುಬಿಯನ್ ಪ್ರಾಂತ್ಯಗಳಿಂದ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಳ್ಳದಿದ್ದರೆ ಯುದ್ಧವನ್ನು ಘೋಷಿಸುವುದಾಗಿ ಹೇಳಿತು. ಇದೇ ಸಮಯದಲ್ಲಿ ಫ್ರಾನ್ಸ್ ಮತ್ತು ಗ್ರೇಟ್ ಬ್ರಿಟನ್ ತಮ್ಮ ಯುದ್ಧ ನೌಕೆಗಳು ಡಾರ್ಡನೆಲ್ಸ್ ಜಲಸಂಧಿಗಳ ಕಡೆ ತೆರಳುವಂತೆ ಆಜ್ಞಾಪಿಸಿದವು. ರಷ್ಯ ತನ್ನ ಶತ್ರುಗಳ ವಿರುದ್ಧ ಪ್ರಾಬಲ್ಯವನ್ನು ತೋರಿಸುವ ದೃಷ್ಟಿಯಿಂದ ಕಪ್ಪು ಸಮುದ್ರದಲ್ಲಿದ್ದ ತುರ್ಕಿಯ ನೌಕಾ ಪಡೆಯನ್ನು ಧ್ವಂಸ ಮಾಡುವಂತೆ ತನ್ನ ಸೈನ್ಯಕ್ಕೆ ಆಜ್ಞಾಪಿಸಿತು. ಇದರ ಪ್ರಕಾರ ರಷ್ಯ ನೌಕೆಯು ಸಿನೋಪ್‌ನಲ್ಲಿದ್ದ ತುರ್ಕಿಯ ನೌಕೆಯನ್ನು ಮುಳುಗಿಸಿತು. ಈ ಘಟನೆಯನ್ನು ಇತಿಹಾಸದಲ್ಲಿ 'ಸಿನೋಪ್ ಹತ್ಯಾಖಂಡ' ಎಂದು ವಿವರಿಸಲಾಗಿದೆ.

ರಷ್ಯಾದ ಝಾರ್ ಯುದ್ಧದ ಸಮಯದಲ್ಲಿ ಆಸ್ಟ್ರಿಯ ತನಗೆ ಬೆಂಬಲ ನೀಡುವುದೆಂದು ಲೆಕ್ಕ ಹಾಕಿದ್ದನು. ಏಕೆಂದರೆ ರಷ್ಯ ಅನೇಕ ಬಾರಿ ಪ್ರಷ್ಯಾದ ವಿರುದ್ಧ ಆಸ್ಟ್ರಿಯಾಕ್ಕೆ ಸಹಾಯ ನೀಡಿತ್ತು. ಆದರೆ ಝಾರನ ಈ ಲೆಕ್ಕಾಚಾರ ತಪ್ಪಾಯಿತು. ಏಕೆಂದರೆ ಆಸ್ಟ್ರಿಯ ಮಿತ್ರ ರಾಷ್ಟ್ರಗಳ ಪರವಾಗಿ ತನ್ನ ನೀತಿಯನ್ನನುಸರಿಸಿತು. ಆಸ್ಟ್ರಿಯಾದ ರಾಜಕಾರಣಿಗಳು ರಷ್ಯಾ ಡ್ಯಾನುಬಿಯನ್ ಪ್ರಾಂತ್ಯಗಳನ್ನು ವಶಪಡಿಸಿಕೊಂಡಿದುದು ಆಸ್ಟ್ರೀಯಾದ ಹಾಪ್ಸಬರ್ಗ್ ಮನೆತನದ ಹಿತಾಸಕ್ತಿಗಳಿಗೆ ತೊಂದರೆಯಾಗುತ್ತದೆ ಎಂದು ಭಾವಿಸಿದರು. ಆಸ್ಟ್ರಿಯ ನೇರವಾಗಿ ಯುದ್ಧದಲ್ಲಿ ಭಾಗವಹಿಸಿದೆ ಇದ್ದರು ಕೂಡ, ಅದರ ರಷ್ಯದ ವಿರೋಧಿ ನಿಲುವು ಅಂತಿಮವಾಗಿ ರಷ್ಯದ ಸೋಲಿಗೆ ಕಾರಣವಾಯಿತು.

ಇಂತಹ ನೀತಿಯು ಪ್ರಷ್ಯ ಮುಂದಿನ ವರ್ಷಗಳಲ್ಲಿ ರಷ್ಯಾದ ಬೆಂಬಲವನ್ನು ಪಡೆದುಕೊಳ್ಳಲು ಸಹಕಾರಿಯಾಯಿತು.

1855 ರಲ್ಲಿ ಇಟಲಿಯು ಕೂಡ ಯುದ್ಧದಲ್ಲಿ ಭಾಗವಹಿಸಿ ರಷ್ಯಾದ ವಿರುದ್ಧ ಯುದ್ಧ ನಡೆಸಿತು. ಪೌರ್ವಾತ್ಯ ಪ್ರಶ್ನೆಗೆ ಸಂಬಂಧಿಸಿದಂತೆ ಇಟಲಿಗೆ ಯಾವುದೇ ಆಸೆ ಆಕಾಂಕ್ಷೆಗಳಿರಲಿಲ್ಲ. ಆದರೆ ಇಟಲಿಯ ಏಕೀಕರಣ ಹೋರಾಟದಲ್ಲಿ ಫ್ರೆಂಚರ ಸಹಾಯವನ್ನು ಪಡೆಯುವ ದೃಷ್ಟಿಯಿಂದ ಈ ಯುದ್ಧದಲ್ಲಿ ಭಾಗವಹಿಸಿತು. ಪೀಡ್‌ಮಾಂಟ್ ಸಾರ್ಡೀನಿಯ 15000 ಸೈನಿಕರನ್ನು ರಷ್ಯದ ವಿರುದ್ಧ ಹೋರಾಡಲು ಕಳುಹಿಸಿಕೊಟ್ಟಿತು.

ಕ್ರಿಮಿಯಾ ಯುದ್ಧದ ಗತಿಯನ್ನು ಎರಡು ಹಂತಗಳಲ್ಲಿ ವಿವರಿಸಬಹುದು. ಮೊದಲನೆ ಹಂತ ಕಡಿಮೆ ಅವಧಿಯಿಂದ ಕೂಡಿದ್ದ 1854 ರ ಮಾರ್ಚ್ ತಿಂಗಳಿಂದ ಜುಲೈ ತಿಂಗಳವರೆಗೆ ನಡೆಯಿತು. ಈ ವೇಳೆಗಾಗಲೇ ಡ್ಯಾನುಬಿಯನ್ ಪ್ರದೇಶಗಳಲ್ಲಿ ಬೀಡು ಬಿಟ್ಟಿದ್ದ ರಷ್ಯಾದ ಸೈನಿಕರು ಮಾರ್ಚ್ 23 ರಂದು ಡ್ಯಾನುಬ್ ನದಿಯನ್ನು ದಾಟಿ ಸಿಲಿಸ್ಟ್ರಿಯಾದ ಮೇಲೆ ಮುತ್ತಿಗೆ ಹಾಕಿದರು. ತುರ್ಕಿಯ ಕಪ್ಪು ಸಮುದ್ರದ ಅಂಚಿನಲ್ಲಿ ಬೀಡು ಬಿಟ್ಟಿದ್ದ ಫ್ರೆಂಚ್ ಮತ್ತು ಗ್ರೇಟ್ ಬ್ರಿಟನ್ನಿನ ನೌಕೆಗಳು ವರ್ಣದ ಕಡೆ ಧಾವಿಸಿ ಅಲ್ಲಿ ನೆಲೆ ನಿಂತವು. ಇದಾದ ಐದು ದಿನಗಳ ನಂತರ ಆಸ್ಟ್ರಿಯ ಡ್ಯಾನುಬಿಯನ್ ಪ್ರದೇಶಗಳನ್ನು ತೆರವು ಮಾಡುವಂತೆ ರಷ್ಯಾಕ್ಕೆ ಒಂದು ಅಂತಿಮ ಗಡುವನ್ನು ನೀಡಿತು. ನಿಕೊಲಸ್‌ನು ತುರ್ಕಿಯು ಸಿಲಿಸ್ಟ್ರಿಯವನ್ನು ರಷ್ಯದ ಮುತ್ತಿಗೆಯಿಂದ ರಕ್ಷಿಸಿಕೊಳ್ಳುವುದನ್ನು ನೋಡಿ ಅಚ್ಚರಿಗೊಂಡನು. ಇದೇ ವೇಳೆಗೆ ಫ್ರೆಂಚ್ ಮತ್ತು ಬ್ರಿಟನ್ನಿನ ಸೈನಿಕರು ಅದರ ಸಹಾಯಕ್ಕೆ ಧಾವಿಸಿದವು. ಇದರಿಂದ ತಲ್ಲಣಗೊಂಡ ರಷ್ಯದ ಝಾರನು ಸಿಲಿಸ್ಟ್ರಿಯದ ಮುತ್ತಿಗೆಯನ್ನು ನಿಲ್ಲಿಸಿ ತನ್ನ ಸೈನ್ಯ ಸಮೇತ ಹಿಂದಿರುಗಿದನು. ಡ್ಯಾನುಬಿಯನ್ ಪ್ರಾಂತ್ಯಗಳನ್ನು ತೆರವು ಮಾಡಿದನು. ಅನಂತರ ಆಸ್ಟ್ರಿಯಾದ ಸೈನಿಕರು ಈ ಪ್ರಾಂತ್ಯಗಳನ್ನು ಆಕ್ರಮಿಸಿಕೊಂಡರು. ಯುದ್ಧ ಮುಗಿಯುವವರೆಗೂ ಈ ಪ್ರಾಂತ್ಯಗಳು ಆಸ್ಟ್ರಿಯ ವಶದಲ್ಲಿದ್ದವು. ಈ ರೀತಿಯಾಗಿ ರಷ್ಯದ ಮೊದಲನೆ ಆಕ್ರಮಣ ನೀತಿ ವಿಫಲಗೊಂಡಿತು. ರಷ್ಯದ ಈ ದುರ್ಬಲತೆಯನ್ನು ಅರಿತ ಮಿತ್ರ ರಾಷ್ಟ್ರಗಳು ನಾಲ್ಕು ಬೇಡಿಕೆಗಳನ್ನು ರಷ್ಯದ ಮುಂದಿಟ್ಟವು. ಈ ಬೇಡಿಕೆಗಳನ್ನು "ನಾಲ್ಕು ಅಂಶಗಳು" ಎಂದು ಇತಿಹಾಸದಲ್ಲಿ ವರ್ಣಿಸಲಾಗಿದೆ. ನಾಲ್ಕು ಅಂಶಗಳು ಈ ರೀತಿ ಇವೆ; ಗ್ರೀಕ್ ಚರ್ಚ್‌ನ ರಕ್ಷಣೆಗೆ ಸಂಬಂಧಿಸಿದಂತೆ ರಷ್ಯದ ಹಕ್ಕು; ಡ್ಯಾನುಬ್ ನದಿಯ ಮೇಲೆ ರಷ್ಯಾದ ವಾಣಿಜ್ಯ ಹಕ್ಕುಗಳು; ಕಪ್ಪು ಸಮುದ್ರದ ಮೇಲೆ ರಷ್ಯಾದ ನೌಕಾ ಹಕ್ಕುಗಳು; ಮತ್ತು ಡ್ಯಾನುಬಿಯನ್ ಪ್ರಾಂತ್ಯಗಳಲ್ಲಿ ರಷ್ಯಾದ ಮಧ್ಯಸ್ಥಿಕೆಯ ಅಸ್ಪಷ್ಟ ಅಧಿಕಾರ. ಈ ಹಕ್ಕುಗಳನ್ನು ತ್ಯಜಿಸಲು ಮೊದಲು ಹಿಂದೇಟು ಹಾಕಿತು. ಆದರೆ ರಷ್ಯಾ ತನ್ನ ನಿರ್ಧಾರವನ್ನು ತಿಳಿಸಲು ತಡ ಮಾಡಿದುದರಿಂದ 1854 ರ ಸೆಪ್ಟೆಂಬರ್ ತಿಂಗಳಲ್ಲೇ ಮಿತ್ರ ರಾಷ್ಟ್ರಗಳು ಕ್ರಿಮಿಯಾದ ಮೇಲೆ ದಾಳಿ ಮಾಡಿದವು. ಈ ರೀತಿಯಾಗಿ ಕ್ರಿಮಿಯ ಯುದ್ಧದ ಎರಡನೆ ಹಂತ ಪ್ರಾರಂಭವಾಯಿತು.

ಕ್ರಿಮಿಯಾದ ಮೇಲೆ ಕೈಗೊಂಡ ದಾಳಿಯ ಯುದ್ಧ ತಂತ್ರ ಶ್ರೇಷ್ಠವಾಗಿತ್ತು. ಮಿತ್ರ ರಾಷ್ಟ್ರಗಳು ರಷ್ಯಾದ ಮಧ್ಯ ಭಾಗದ ಮೇಲೆ ಧಾಳಿ ಮಾಡುವುದಕ್ಕೆ ಪ್ರಯತ್ನ ನಡೆಸಲಿಲ್ಲ. ಆದುದರಿಂದಾಗಿ ರಷ್ಯಾಕ್ಕೆ ಕ್ರಿಮಿಯಾಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಲು ಕಷ್ಟದ ಕೆಲಸವಾಯಿತು. ರೈಲ್ವೆ ಮಾರ್ಗವಿರಲಿಲ್ಲ. ಇದ್ದಂತಹ ಕೆಲವು ಭೂಮಾರ್ಗಗಳ ಮೂಲಕವೇ ರಷ್ಯಾದ ಸೈನ್ಯಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಬೇಕಾದರೆ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ರಷ್ಯಾದ ದಂಡನಾಯಕರುಗಳಾದ ಟಾಡ್ಲಬೆನ್ ಹಾಗೂ ಅಡ್ಮಿರಲ್ ಕಾರ್ನಿಲಾವ್ ಸೆಬಾಸ್ಟಪೋಲ್‌ನನ್ನು ಶತ್ರು ಸೈನಿಕರ ಆಕ್ರಮಣದಿಂದ ರಕ್ಷಿಸುವಲ್ಲಿ ಯಶಸ್ವಿಯಾದರು. ಸುಮಾರು ಒಂದು ವರ್ಷ ಕಾಲ ಮಿತ್ರ ರಾಷ್ಟ್ರಗಳಿಗೆ ಸೆಬಾಸ್ಟಪೋಲ್‌ನನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಎರಡು ಕಡೆಯಲ್ಲೂ ಸೈನಿಕರು 1854-1855 ರ ತೀವ್ರ ಚಳಿಗಾಳಿಯಿಂದಾಗಿ ಹಾಗೂ ಭೀಕರ ಹೋರಾಟದಿಂದ ಅಪಾರ

ನೋವನನ್ನುಭವಿಸಿದರು. ಕ್ರಿಮಿಯ ಯುದ್ಧ ನಡೆಯುತ್ತಿರುವ ಸಮಯದಲ್ಲೆ 1855 ರ ಫೆಬ್ರವರಿ ತಿಂಗಳಲ್ಲಿ ಒಂದನೆ ನಿಕೊಲಸ್‌ನು ಮರಣ ಹೊಂದಿದನು. ನಿರಂತರವಾಗಿ ಸೆಬಾಸ್ಟಪೊಲ್‌ನ ಮೇಲೆ ನಡೆಯುತ್ತಿದ್ದ ರಾಷ್ಟ್ರಗಳ ದಾಳಿಯನ್ನು ಎದುರಿಸಲು ರಷ್ಯಾದ ಸೈನಿಕರು ವಿಫಲರಾದರು. 1855 ರ ಸೆಪ್ಟೆಂಬರ್ ತಿಂಗಳಿನಲ್ಲಿ ಮೂರು ದಿವಸಗಳ ಕಾಲ ಸೆಬಾಸ್ಟಪೊಲ್ ಮೇಲೆ ದಾಳಿ ನಡೆಸಿದ ನಂತರ ಅದು ಮಿತ್ರ ರಾಷ್ಟ್ರಗಳ ವಶವಾಯಿತು. ಒಂದನೇ ನಿಕೊಲಸ್‌ನು ಮರಣವಾಗುವುದಕ್ಕೆ ಮುಂಚೆ ತನ್ನ ಉತ್ತರಾಧಿಕಾರಿ ಎರಡನೆಯ ಅಲೆಕ್ಸಾಂಡರನಿಗೆ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳುವಂತೆ ಸಲಹೆ ನೀಡಿದ್ದನು. ಈ ಮದ್ಯೆ ನವೆಂಬರ್ ತಿಂಗಳಿನಲ್ಲಿ ರಷ್ಯಾ ಅರ್ಮೇನಿಯನ್ ಕೋಟೆ ಕಾರ್ಸ್‌ನ್ನು ಗೆದ್ದುಕೊಂಡಿತು. ಈ ಜಯವು ರಷ್ಯಕ್ಕೆ ಯುದ್ಧದಲ್ಲಿ ಹೆಚ್ಚಿನ ಅಪಮಾನ ಉಂಟಾಗುವುದನ್ನು ತಪ್ಪಿಸಿತು. ಆಸ್ಟ್ರಿಯ ತನ್ನ ಎರಡನೆಯ ಅಂತಿಮ ನಿರ್ಧಾರವನ್ನು ರಷ್ಯಾಕ್ಕೆ ಕಳುಹಿಸಿತು. ಅಂತಿಮವಾಗಿ ರಷ್ಯಾ 1856 ರಲ್ಲಿ ಶಾಂತಿ ಒಪ್ಪಂದ ಮಾಡಿಕೊಳ್ಳಲು ಒಪ್ಪಿಕೊಂಡಿತು. ಈ ರೀತಿಯಾಗಿ 1856 ರ ಮಾರ್ಚ್ ತಿಂಗಳಲ್ಲಿ ಪ್ಯಾರಿಸ್ ಒಪ್ಪಂದ ನಡೆಯಿತು, ಯುದ್ಧ ನಿಲುಗಡೆ ಹೊಂದಿತು.

### *99.5.4 ಪ್ಯಾರಿಸ್ ಒಪ್ಪಂದ(1856)*

ಮೂರನೇ ನೆಪೋಲಿಯನ್ ಪ್ಯಾರಿಸ್‌ನಲ್ಲಿ ಶಾಂತಿ ಸಮ್ಮೇಳನವನ್ನು ಏರ್ಪಡಿಸಿದನು. 1856 ರ ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಎಂಟು ವಾರಗಳ ಕಾಲ ಶಾಂತಿ ಸಭೆ ನಡೆಯಿತು. ಒಪ್ಪಂದದ ಅಂಶಗಳು ಈ ರೀತಿ ಇವೆ.

(a) ಎಲ್ಲ ರಾಷ್ಟ್ರಗಳು ತುರ್ಕಿ ಸಾಮ್ರಾಜ್ಯದ ಸ್ವಾತಂತ್ರ್ಯ ಹಾಗೂ ಅದರ ಸಮಗ್ರತೆಯನ್ನು ಗೌರವಿಸಲು ಒಪ್ಪಿಕೊಂಡವು. ತುರ್ಕಿಯನ್ನು ಯೂರೋಪಿಯನ್ ಒಕ್ಕೂಟಕ್ಕೆ ಸೇರಿಸಿಕೊಳ್ಳಲಾಯಿತು.

ಸುಲ್ತಾನನು ತನ್ನ ಸಾಮ್ರಾಜ್ಯದಲ್ಲಿದ್ದ ಎಲ್ಲಾ ಪ್ರಜೆಗಳ ಯಾವುದೇ ಧರ್ಮ ಅಥವಾ ಜನಾಂಗಕ್ಕೆ ತಾರತಮ್ಯ ತೋರಿಸದೆ, ಉತ್ತಮಪಡಿಸುವ ಧ್ಯೇಯವನ್ನು ಪ್ರಕಟಿಸಿದನು.

ಎಲ್ಲಾ ರಾಷ್ಟ್ರಗಳು ತುರ್ಕಿಯ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡದೆ ಇರಲು ಒಪ್ಪಿಕೊಂಡವು.

(b) ಕಪ್ಪು ಸಮುದ್ರವನ್ನು ತಟಸ್ಥ್ಯಗೊಳಿಸಲಾಯಿತು ಮತ್ತು ಅದರ ಬಂದರುಗಳನ್ನು ಮತ್ತು ಸಮುದ್ರವನ್ನು ಎಲ್ಲ ವ್ಯಾಪಾರ ಹಡಗುಗಳಿಗೆ ಬಳಸಿಕೊಳ್ಳಲು ಅವಕಾಶ ನೀಡಲಾಯಿತು. ಆದರೆ ರಷ್ಯಾ ತನ್ನ ಯುದ್ಧನೌಕೆಗಳನ್ನು ಇರಿಸಕೂಡದೆಂದು ನಿರ್ಬಂಧ ಹೇರಲಾಯಿತು. ಆದರೆ ಶಾಂತಿ ಕಾಲದಲ್ಲಿ ಜಲ ಸಂಧಿಗಳನ್ನು ವಿದೇಶಿ ಹಡಗುಗಳಿಗೆ ಮುಚ್ಚಲಾಯಿತು. ಡ್ಯಾನೂಬ್ ನದಿಯಲ್ಲಿ ಇತರ ಎಲ್ಲಾ ದೇಶದ ಹಡಗುಗಳು ಸಂಚರಿಸಲು ಅನುಮತಿ ನೀಡಲಾಯಿತು.

(c) ರಷ್ಯ ಬೆಸ್ಸಾರ್ಬಿಯಾ ಪ್ರಾಂತ್ಯದ ಒಂದು ಭಾಗವನ್ನು ಮಾಲ್ಡೇವಿಯಾಕ್ಕೆ ಬಿಟ್ಟುಕೊಟ್ಟಿತು. ಮಾಲ್ಡೇವಿಯ ಮತ್ತು ವೆಲೇಷಿಯಾ ಪ್ರಾಂತ್ಯಗಳಿಗೆ ಸ್ವಾತಂತ್ರ್ಯ ಕೊಡಲಾಯಿತು. ಆದರೆ ಈ ಪ್ರಾಂತ್ಯಗಳು ತುರ್ಕಿಯ ಸುಲ್ತಾನನ ನಾಮಮಾತ್ರ ಅಧಿಕಾರದಲ್ಲಿ ಮುಂದುವರಿದವು.

(d) ಸೆಬಾಸ್ಟಪೋಲ್‌ನನ್ನು ರಷ್ಯಕ್ಕೆ ಹಿಂದಿರುಗಿಸಲಾಯಿತು ಮತ್ತು ತುರ್ಕಿಗೆ ಕಾರ್ಸ್‌ನ್ನು ಬಿಟ್ಟುಕೊಡಲಾಯಿತು.

(e) ಸರ್ಬಿಯಾಕ್ಕೆ ಸ್ವಾಯತ್ತತೆಯನ್ನು ನೀಡಲಾಯಿತು.

(f) ರಷ್ಯ ತುರ್ಕಿಯ ಸಾಮ್ರಾಜ್ಯದಲ್ಲಿದ್ದ ಕ್ರೈಸ್ತರ ರಕ್ಷಣೆಯ ಹೊಣೆಯ ಎಲ್ಲ ಹಕ್ಕುಗಳನ್ನು ತ್ಯಜಿಸಿತು.

### *99.5.5. ಯುದ್ಧದ ಫಲಿತಾಂಶಗಳು*

ಕ್ರಿಮಿಯಾ ಯುದ್ಧದಿಂದ ಅತಿ ಹೆಚ್ಚು ಲಾಭ ಪಡೆದ ದೇಶವೆಂದರೆ ಟರ್ಕಿ. ಅದು ಹೊಸ ಆಯುಷ್ಯವನ್ನು ಪಡೆಯಿತು. ಸುಲ್ತಾನನಿಗೆ ತನ್ನ ಸಾಮ್ರಾಜ್ಯವನ್ನು ಪುನಃ ಸುಸ್ಥಿಗೆ ತರಲು ಅವಕಾಶ ಕಲ್ಪಿಸಿಕೊಡಲಾಯಿತು. ಎಲ್ಲಾ ರಾಷ್ಟ್ರಗಳು ಹಸ್ತಕ್ಷೇಪ ಮಾಡುವ ಹಕ್ಕನ್ನು ಪರಿತ್ಯಾಗ ಮಾಡಿದವು.

ಪ್ಯಾರಿಸ್ ಒಪ್ಪಂದವು ರಷ್ಯಕ್ಕೆ ಹೆಚ್ಚಿನ ತೇಜೋವಧೆನ್ನುಂಟು ಮಾಡದೆ ಇದ್ದರೂ, ಸಧ್ಯಕ್ಕೆ ಹೆಚ್ಚಿನ ನಿರಾಶೆಯನ್ನುಂಟು ಮಾಡಿತು. ಸುಮಾರು ಒಂದನೂರ ಐವತ್ತು ವರ್ಷಗಳಿಂದ ಮೂರು ಪ್ರಮುಖ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸತತವಾಗಿ ತನ್ನ ನೀತಿಯನ್ನು ಅನುಸರಿಸುತ್ತಾ ಬಂದಿತ್ತು. ಮೂರು ಉದ್ದೇಶಗಳೆಂದರೆ : ಕಪ್ಪು ಸಮುದ್ರದ ಮೇಲೆ ಮತ್ತು ತೀರ ಪ್ರದೇಶಗಳ ಮೇಲೆ ವಾಣಿಜ್ಯ ಪರಮಾಧಿಕಾರವನ್ನು ಸ್ಥಾಪಿಸುವುದು; ಮೆಡಿಟರೇನಿಯನ್ ಸಮುದ್ರಕ್ಕೆ ಸ್ವತಂತ್ರ ಮಾರ್ಗವನ್ನು ಹುಡುಕಿಕೊಳ್ಳುವುದು; ಮತ್ತು ಸುಲ್ತಾನನ ಸಾಮ್ರಾಜ್ಯದಲ್ಲಿ ನೆಲೆಸಿದ್ದ ಕ್ರೈಸ್ತರ ರಾಜಕೀಯ ಮತ್ತು ಧಾರ್ಮಿಕ ಸ್ವಾತಂತ್ರ್ಯಗಳ ನಾಯಕನೆಂಬ ಸ್ಥಾನಕ್ಕೆ ತುರ್ಕಿಯ ಸುಲ್ತಾನನಿಂದ ಒಪ್ಪಿಗೆ ಪಡೆಯುವುದು. ಪ್ಯಾರಿಸ್ ಒಪ್ಪಂದ ತುರ್ಕಿ ಸಾಮ್ರಾಜ್ಯವನ್ನು ವಿಭಾಗ ಮಾಡುವ ಎಲ್ಲಾ ಭಾವನೆಗಳು ಕರಗಿ ಹೋಗುವಂತೆ ಮಾಡಿದುದಲ್ಲದೆ, ಪೀಟರ್ ಮಹಾಶಯನ ಕಾಲದಿಂದ ಅನುಸರಿಸಿಕೊಂಡು ಬಂದಿದ್ದ ರಷ್ಯಾದ ನೀತಿಗೆ ಒಂದು ದೊಡ್ಡ ಹಿನ್ನಡೆ ಉಂಟಾದಂತಾಯಿತು.

ಪ್ರಪಂಚದಲ್ಲೇ ಪ್ರಬಲ ನೌಕಾ ಶಕ್ತಿಗೆ ಪ್ರಖ್ಯಾತವಾಗಿದ್ದ ಇಂಗ್ಲೆಂಡ್ ಕಪ್ಪು ಸಮುದ್ರದ ತಟಸ್ಥ ನೀತಿಯ ಬಗ್ಗೆ ವಿಶೇಷ ಆಸಕ್ತಿ ಹೊಂದಿತ್ತು. ಆದರೆ ರಷ್ಯಾದ ದೃಷ್ಟಿಯಿಂದ ಈ ಹಸ್ತಕ್ಷೇಪ ಅಪಮಾನದಿಂದ ಕೂಡಿದ ಹಾಗೂ ಸಹಿಸಲಸದಳವಾದ ಆಂತರಿಕ ಹಸ್ತಕ್ಷೇಪವಾಗಿತ್ತು. ಆದ್ದರಿಂದ ರಷ್ಯ ಪ್ಯಾರಿಸ್ ಒಪ್ಪಂದದ ನಿಬಂಧನೆಗಳನ್ನು ಕಿತ್ತೊಗೆಯಲು ಬರುವ ಮೊಟ್ಟಮೊದಲನೆ ಅವಕಾಶವನ್ನು ಉಪಯೋಗಿಸಿಕೊಳ್ಳುವುದು ಖಚಿತವಾಯಿತು. ಈ ಅವಕಾಶವನ್ನು 1870 ರಲ್ಲಿ ನಡೆದ ಫ್ರಾಂಕೊ-ಪ್ರಷ್ಯನ್ ಯುದ್ಧ ಒದಗಿಸಿಕೊಟ್ಟಿತು. ಬಿಸ್ಮಾರ್ಕ್‌ನು ರಷ್ಯದ ಬೆಂಬಲಕ್ಕೆ ನಿಂತನು. 1870 ರ ನವೆಂಬರ್ ತಿಂಗಳಲ್ಲಿ ರಾಜಕುಮಾರ ಗೊರ್ಟ್ಚಾಕೋಫ್ ಎಲ್ಲ ರಾಷ್ಟ್ರಗಳಿಗೆ ರಷ್ಯಾದ ಪರವಾಗಿ ಪ್ಯಾರಿಸ್ ಒಪ್ಪಂದದ (1856) ಅಂಶಗಳನ್ನು ನಿರಾಕರಿಸುವುದಾಗಿ ಒಂದು ಸುತ್ತೋಲೆಯನ್ನು ಕಳುಹಿಸಿದನು. ಇದನ್ನು ಇಂಗ್ಲೆಂಡ್ ಮತ್ತು ಆಸ್ಟ್ರಿಯ ಪ್ರಬಲವಾಗಿ ವಿರೋಧಿಸಿದವು. ಆದರೆ ಬಿಸ್ಮಾರ್ಕ್ ರಷ್ಯಾದ ಹಿತಾಸಕ್ತಿಯನ್ನು ಕಾಪಾಡಲು ಗಟ್ಟಿಯಾಗಿ ನಿಂತನು. ಅಂತಿಮವಾಗಿ 1871 ರ ಮಾರ್ಚಿ ತಿಂಗಳಲ್ಲಿ ನಡೆದ ಲಂಡನ್ ಒಪ್ಪಂದದ ಮೇರೆಗೆ ಪ್ಯಾರಿಸ್ ಒಪ್ಪಂದದ ಕಪ್ಪು ಸಮುದ್ರಕ್ಕೆ ಸಂಬಂಧಿಸಿದ ಅಂಶಗಳನ್ನು ರದ್ದುಪಡಿಸಲಾಯಿತು.

ಫ್ರಾನ್ಸ್ ಈ ಯುದ್ಧದಿಂದ ಹೆಚ್ಚುಗಳಿಸದೆ ಇದ್ದರೂ, ಮೂರನೆಯ ನೆಪೋಲಿಯನ್ನನು ಬಹಳ ಲಾಭ ಪಡೆದನು. 1853 ರಲ್ಲಿ ಅವನ ಸ್ಥಾನ ಯೂರೋಪಿನಲ್ಲಿ ಹೆಚ್ಚಿನ ಸ್ಥಿರತೆಯಿಂದ ಕೂಡಿರಲಿಲ್ಲ. ಆದರೆ ಕ್ರಿಮಿಯಾ ಯುದ್ಧ ಆ ಸ್ಥಿರತೆಯನ್ನು ತಂದುಕೊಟ್ಟಿತು ಮತ್ತು ಬಿಸ್ಮಾರ್ಕ್‌ನ ಆಗಮನದವರೆಗೂ ಯೂರೋಪ್ ಖಂಡದ ಮೇಲೆ ಅವನ ಪ್ರಭಾವ ಪ್ರಧಾನವಾಗಿತ್ತು.

ತುರ್ಕಿಯನ್ನು ಬಿಟ್ಟರೆ ಅತ್ಯಂತ ಹೆಚ್ಚು ಲಾಭಗಳಿಸಿದ ದೇಶವೆಂದರೆ ಇಟಲಿ. ಈ ಯುದ್ಧದಲ್ಲಿ ಸಾರ್ಡೀನಿಯ ಭಾಗವಹಿಸಿದುದು ಯೂರೋಪ್‌ನ ಒಕ್ಕೂಟದಲ್ಲಿ ಅದಕ್ಕೆ ಒಂದು ಸ್ಥಾನ ದೊರಕಿದುದಲ್ಲದೆ, ಅದು ಇಟಲಿಯ ವಿಮೋಚನಾ ಹೋರಾಟದ ನಾಯಕತ್ವ ವಹಿಸಲು ಹಕ್ಕು ಮತ್ತು ಅವಕಾಶವನ್ನು ಪಡೆಯಿತು.

ಅಂತಿಮವಾಗಿ ಕ್ರಿಮಿಯಾ ಯುದ್ಧದ ಸಮಯದಲ್ಲಿ ಗಾಯಗೊಂಡ ಸೈನಿಕರಿಗೆ ಫ್ಲಾರೆನ್ಸ್ ನೈಟಿಂಗೇಲ್ ಎಂಬ ಮಹಾ ಆಂಗ್ಲ ಮಹಿಳೆ ನೀಡಿದ ಶುಶ್ರೂಷೆಯನ್ನು ಯಾರೂ ಕೂಡ ಮರೆಯಲು ಸಾಧ್ಯವಿಲ್ಲ.

## 99.6 ನಾವು ಘಟಕ ಸಾರಾಂಶವನ್ನು ಅವಲೋಕಿಸೋಣ

ಹತ್ತೊಂಬತ್ತನೆಯ ಶತಮಾನದ ಪ್ರಾರಂಭದಲ್ಲಿ ಅನೇಕ ಬಾಲ್ಕನ್ ರಾಜ್ಯಗಳು ತಮ್ಮ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ತುರ್ಕಿಯ ಸುಲ್ತಾನನ ವಿರುದ್ಧ ದಂಗೆ ಎದ್ದವು. ಮೊಟ್ಟ ಮೊದಲನೆಯದಾಗಿ ಸರ್ಬಿಯನ್ನರು ದಂಗೆ ಎದ್ದು ಸ್ವಾಯತ್ತತೆಯನ್ನು ಸಂಪಾದಿಸುವುದರಲ್ಲಿ ಯಶಸ್ವಿಯಾದರು. ನಂತರ 1822 ರಲ್ಲಿ ಗ್ರೀಕರು ದಂಗೆ ಎದ್ದು 1829 ರವರೆಗೆ ತಮ್ಮ ಹೋರಾಟವನ್ನು ಮುಂದುವರಿಸಿದರು. ರಷ್ಯಾದ ಮದ್ಯಸ್ಥಿಕೆಯಿಂದಾಗಿ ತುರ್ಕಿಯ ಸುಲ್ತಾನನು 1829 ರಲ್ಲಿ ಆಡ್ರಿಯಾನೋಪಲ್ ಒಪ್ಪಂದದಲ್ಲಿ ಗ್ರೀಕರ ಸ್ವಾತಂತ್ರ್ಯವನ್ನು ಮಾನ್ಯ ಮಾಡಿದನು. ಗ್ರೀಕರ ಸ್ವಾತಂತ್ರ್ಯ ಸಂಗ್ರಾಮ ಮುಗಿದ ನಂತರ ಈಜಿಪ್ಟಿನ ಮೆಹಮತ್ ಅಲಿಯಿಂದ ತುರ್ಕಿಯ ಸುಲ್ತಾನನು ದಾಳಿಯ ಭಯವನ್ನು ಎದುರಿಸಬೇಕಾಯಿತು. ಗ್ರೀಕರ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಅವರ ವಿರುದ್ಧ ಹೋರಾಟ ನಡೆಸಲು ಮೆಹಮತ್ ಆಲಿಯ ಸಹಾಯವನ್ನು ತುರ್ಕಿಯ ಸುಲ್ತಾನನು ಪಡೆದಿದ್ದನು. ಈಗ ಆ ಸಹಾಯಕ್ಕೆ ಸಿರಿಯಾವನ್ನು ನೀಡುವಂತೆ ಬೇಡಿಕೆ ಇಟ್ಟು ತುರ್ಕಿಯ ಸುಲ್ತಾನನ ಸ್ರಾಮ್ರಾಜ್ಯದ ಮೇಲೆ ದಾಳಿ ಮಾಡಿದನು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಷ್ಯಾವು ತುರ್ಕಿಯ ಸುಲ್ತಾನನ ಸಹಾಯಕ್ಕೆ ಸೈನ್ಯವನ್ನು ಕಳುಹಿಸಿಕೊಟ್ಟಿತು. ರಷ್ಯಾದ ಬೆಂಬಲ ದೊರೆತರೂ, ತುರ್ಕಿಯ ಸುಲ್ತಾನನು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ಒತ್ತಡದಿಂದಾಗಿ ಸಿರಿಯಾವನ್ನು ಮೆಹಮತ್ ಆಲಿಗೆ ನೀಡಿದನು. ಆದರೆ ರಷ್ಯ ತನ್ನ ಸಹಾಯಕ್ಕೆ ಪ್ರತಿ ಫಲವನ್ನು ನಿರೀಕ್ಷಿಸಿ ತುರ್ಕಿಯ ಸುಲ್ತಾನನೊಡನೆ ಅಂಕೈರ್‌ಸ್ಕೆಲೆಸ್ಸಿ ಒಪ್ಪಂದವನ್ನು 1833 ರಲ್ಲಿ ಮಾಡಿಕೊಂಡಿತು. ಈ ಒಪ್ಪಂದದ ಪ್ರಕಾರ ಡಾರ್ಡನೆಲ್ಸ್ ಮತ್ತು ಬೊಸ್ಪರಸ್ ಜಲಸಂಧಿಗಳ ಮೂಲಕ ರಷ್ಯಾದ ಹಡಗುಗಳು ಮುಕ್ತವಾಗಿ ಚಲಿಸುವ ಹಕ್ಕನ್ನು ಪಡೆದುಕೊಂಡವು. ಈ ಒಪ್ಪಂದದಿಂದಾಗಿ ಅಟೋಮನ್ ಸಾಮ್ರಾಜ್ಯದಲ್ಲಿ ರಷ್ಯಾದ ಪ್ರಭಾವ ಹೆಚ್ಚಾಯಿತು. ರಷ್ಯಾದ ಈ ಸ್ಥಾನಮಾನವನ್ನು ಸಹಿಸದ ಇಂಗ್ಲೆಂಡ್ ಮತ್ತು ಫ್ರಾನ್ಸ್ ಅಂಕೈರ್ ಸ್ಕೆಲೆಸ್ಸಿ ಒಪ್ಪಂದವನ್ನು ರದ್ದುಪಡಿಸಲು ಒಂದು ಒಳ್ಳೆಯ ಅವಕಾಶಕ್ಕಾಗಿ ಕಾದರು. ಈ ಅವಕಾಶವು ಬೆತ್ಲೆಹೆಂನಲ್ಲಿದ್ದ ಗ್ರೀಕ್ ಸಂಪ್ರದಾಯ ಕ್ರೈಸ್ತರು ಮತ್ತು ರೋಮನ್ ಕ್ಯಾಥೊಲಿಕ್ಕರು ತಮ್ಮ ಹಕ್ಕುಗಳಿಗಾಗಿ ಕಚ್ಚಾಟ ಪ್ರಾರಂಭಿಸಿದಾಗಿ ಒದಗಿ ಬಂತು. ರೋಮನ್ ಕ್ಯಾಥೊಲಿಕ್ಕರಿಗೆ ಫ್ರಾನ್ಸ್ ತನ್ನ ಬೆಂಬಲವನ್ನು ನೀಡಿತು. ಗ್ರೀಕ್ ಸಂಪ್ರದಾಯ ಕ್ರೈಸ್ತರ ಪರವಾಗಿ ರಷ್ಯ ಹೋರಾಟ ಪ್ರಾರಂಭಿಸಿತು. ತುರ್ಕಿಯ ಸುಲ್ತಾನನು ಬೆತ್ಲೆಹೆಂನಲ್ಲಿ ರೋಮನ್ ಕ್ಯಾಥೊಲಿಕ್ಕರ ಎಲ್ಲ ಬೇಡಿಕೆಗಳನ್ನು ಈಡೇರಿಸಿದನು. ಆದರೆ ಗ್ರೀಕ್ ಸಂಪ್ರದಾಯ ಕ್ರೈಸ್ತರ ಬೇಡಿಕೆಗಳಿಗೆ ಮಣಿಯಲಿಲ್ಲ. ರಷ್ಯ ಇದನ್ನು ಒಂದು ರಾಜತಾಂತ್ರಿಕ ಸೋಲೆಂದು ಭಾವಿಸಿ ತುರ್ಕಿಯ ವಿರುದ್ಧ ಯುದ್ಧ ಸಾರಿತು. ತುರ್ಕಿಯ ಬೆಂಬಲಕ್ಕೆ ಫ್ರಾನ್ಸ್, ಗ್ರೇಟ್ ಬ್ರಿಟನ್ ಮತ್ತು ಇನ್ನಿತರ ದೇಶಗಳು ಧಾವಿಸಿ ತಮ್ಮ ಸೈನ್ಯಗಳನ್ನು ಕಳುಹಿಸಿಕೊಟ್ಟವು. ಆಸ್ಟ್ರಿಯಾವು ರಷ್ಯಾ ವಿರೋಧಿ ನೀತಿಯನ್ನನುಸರಿಸಿತು. ಈ ಯುದ್ಧವು 1854 ರಿಂದ 1856 ರವರೆಗೆ ಸುಮಾರು ಎರಡು ವರ್ಷಗಳ ಕಾಲ ನಡೆಯಿತು. ನಿರ್ಣಾಯಕ ಯುದ್ಧವು ಕ್ರಿಮಿಯಾ ದ್ವೀಪದಲ್ಲಿ ನಡೆಯಿತು. ರಷ್ಯ ಅಂತಿಮವಾಗಿ ಸೋಲನ್ನನುಭವಿಸಿತು. ಅನಂತರ 1856 ರಲ್ಲಿ ಪ್ಯಾರಿಸ್ ಒಪ್ಪಂದವನ್ನು ಮಾಡಿಕೊಂಡಿತು. ಈ ಒಪ್ಪಂದದಲ್ಲಿ ಕಪ್ಪು ಸಮುದ್ರವನ್ನು ತಟಸ್ಥ್ಯಗೊಳಿಸಿದುದರಿಂದ ರಷ್ಯಾದ ಯುದ್ಧ ನೌಕೆಗಳು ಸಂಚಾರ ಮಾಡುವ ಅವಕಾಶವನ್ನು ಕಳೆದುಕೊಂಡವು. ಬೆಸ್ಸಾರ್ಬಿಯಾದ ಒಂದು ಭಾಗವನ್ನು ಕೂಡ ರಷ್ಯ ಕಳೆದುಕೊಂಡಿತು. ಈ ರೀತಿಯಾಗಿ ತುರ್ಕಿ ಸಾಮ್ರಾಜ್ಯವನ್ನು ತಾತ್ಕಾಲಿಕವಾಗಿ ರಕ್ಷಿಸಲಾಯಿತು. ರಷ್ಯಾಕ್ಕೆ ಇದೊಂದು ಅಪಮಾನಕರವಾದ ಒಪ್ಪಂದವಾಯಿತು ಮತ್ತು ಬಾಲ್ಕನ್ ರಾಜ್ಯಗಳನ್ನು ವಶಪಡಿಸಿಕೊಳ್ಳಬೇಕೆಂಬ ಅದರ ಆಶೆ ನುಚ್ಚುನೂರಾಯಿತು.

## 99.7 ಕ್ಲಿಷ್ಟ ಪದಗಳ ಅರ್ಥ

ಪೋರ್ಟಿ : ತುರ್ಕಿಯ ಸರ್ಕಾರ

ಕ್ಲೆರಿಕಲ್ ಪಾರ್ಟಿ : ಫ್ರಾನ್ಸಿನಲ್ಲಿ ರೋಮನ್ ಕ್ಯಾಥೊಲಿಕ್‌ರ ಪಕ್ಷ

ತಟಸ್ಥಗೊಳಿಸಿದುದರಿಂದ ರಷ್ಯಾದ ಯುದ್ಧ ನೌಕೆಗಳು ಸಂಚಾರ ಮಾಡುವ ಅವಕಾಶವನ್ನು ಕಳೆದುಕೊಂಡವು. ಬೆಸ್ಸಾರ್ಬಿಯಾದ ಒಂದು ಭಾಗವನ್ನು ಕೂಡ ರಷ್ಯ ಕಳೆದುಕೊಂಡಿತು. ಈ ರೀತಿಯಾಗಿ ತುರ್ಕಿ ಸಾಮ್ರಾಜ್ಯವನ್ನು ತಾತ್ಕಾಲಿಕವಾಗಿ ರಕ್ಷಿಸಲಾಯಿತು. ರಷ್ಯಾಕ್ಕೆ ಇದೊಂದು ಅಪಮಾನಕರವಾದ ಒಪ್ಪಂದವಾಯಿತು ಮತ್ತು ಬಾಲ್ಕನ್ ರಾಜ್ಯಗಳನ್ನು ವಶಪಡಿಸಿಕೊಳ್ಳಬೇಕೆಂಬ ಅದರ ಆಶೆ ನುಚ್ಚುನೂರಾಯಿತು.

## 99.7 ಕ್ಲಿಷ್ಟ ಪದಗಳ ಅರ್ಥ

ಪೋರ್ಟೆ : ತುರ್ಕಿಯ ಸರ್ಕಾರ

ಕ್ಲೆರಿಕಲ್ ಪಾರ್ಟಿ : ಫ್ರಾನ್ಸಿನಲ್ಲಿ ರೋಮನ್ ಕ್ಯಾಥೊಲಿಕ್‌ರ ಪಕ್ಷ

## 99.8 ಮಾದರಿ ಪ್ರಶ್ನೆಗಳು

1. ಪೌರ್ವಾತ್ಯ ಪ್ರಶ್ನೆ ಎಂದರೇನು? ಅದರಲ್ಲಿ ಪ್ರಬಲ ರಾಷ್ಟ್ರಗಳ ಹಿತಾಸಕ್ತಿಗಳ ಬಗ್ಗೆ ವಿವರಿಸಿ.

..............................................................................................

..............................................................................................

2. ಕ್ರಿಮಿಯಾ ಯುದ್ಧದ ಬಗ್ಗೆ ವಿವರಿಸಿ ಮತ್ತು ಅದರ ಫಲಿತಾಂಶಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ.

..............................................................................................

..............................................................................................

## 99.9 ಹೆಚ್ಚಿನ ಅಧ್ಯಯನಕ್ಕೆ ಗ್ರಂಥಗಳು


Grant, A.J and Herald Temperley - **Europe in the Nineteenth and Twentieth Centuries (1789-1950)** London, 1952


Hayes, C.J.H - **Modern Europe to 1870,** Delhi, 1977

Ketelbey, C.D.M. - **A History of Modern Times form 1789,** Bombay, 1976

Ragavendra Prabhu, M. - **A History of Modern Europe (1789-1960),** Mangalore

Thomas .P.C - **History of Europe (1789-1945),** New Delhi, 1994


ಪ್ರೊ. ಶಿವಣ್ಣ


AUSTRIA-HUNGARY
Occupied by Austria since 1878
Autonomous 1829 Independent 1878
Autonomous 1859 Independent 1878
Moldavia
Wallachia
RUMANIA
BOSNIA
SERBIA
BULGARIA
E. Rumelia
MONTENEGRO Independent 1878
ALBANIA
OTTOMAN EMPIRE
ITALY
Ionian Islands to Greece 1863
GREECE (Independent) 1830
CRETE
Dobrudja to Rumania 1878
Autonomous 1878 Independent 1908
Joined Bulgaria 1885
Constantinople
CYPRUS to Great Britain 1878
In Russia 1803-1878
Caucasus Mts.
Batum
Ardahan
Kars
THE DISMEMBERMENT OF THE OTTOMAN EMPIRE IN EUROPE 1815-1908
Miles
Areas Ceded (1815-1908)
Ottoman Empire 1908

# ບສູທກສ

# ಟಿಪ್ಪಣಿಗಳು


ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*-National Education Policy 1986*




**♣ REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✢ **M.Ed Study Centres : 06**


Multimedia learning material
STUDENT
INSTRUCTIONAL SYSTEM